ಮಫತ್‌ಲಾಲ್ ಫ್ಯೆವುಡ್ ಇಂಡಸ್ಟ್ರೀಸ್ (ಲಿ) ಒಂದು ಖಾಸಗಿ ಕಂಪನಿ ಸದರಿ ಕಂಪನಿಯು ಸಿಕ್ ಇಂಡಸ್ಟ್ರೀಸ್ ಆಕ್ಟ್ 1985 ಇದರ ಸೆಕ್ಷನ್ 15 (1) ರ ಪ್ರಕಾರ ಬಿ.ಐ.ಎಫ್.ಆರ್. ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಸದರಿ ಕಂಪನಿಯು ರೋಗಗ್ರಸ್ತ ಸಂಸ್ಥೆಯೆಂದು ಘೋಷಿಸಬೇಕೆಂದು ಮತ್ತು ಇದರ ಪುನರ್‌ಸಜ್ಜಿಕರಣಕ್ಕೆ ಆದೇಶಿಸಬೇಕೆಂದು ಅರ್ಜಿ ಸಲ್ಲಿಸಿತ್ತು ಸದರಿ ಅರ್ಜಿಯನ್ನು ಪರಿಶೀಲಿಸಿದ ಬಿ.ಐ.ಎಫ್.ಆರ್. ಪ್ರಾಧಿಕಾರವು ದಿನಾಂಕ 13-2-1990 ರ ಆದೇಶದಲ್ಲಿ ಸದರಿ ಕಂಪನಿಯು ಒದಗಿಸಿರುವ ವಿವರ ಪರಿಶೀಲಿಸಲಾಗಿ ಇದರ ಪುನರಸಜ್ಜೀಕರಣ ಸಾಧ್ಯವಿಲ್ಲವೆಂದು ಇದನ್ನು ಮುಚ್ಚುವುದು ಅನಿವಾರ್ಯವೆಂಬ ತೀರ್ಮಾನಕ್ಕೆ ಬಂದಿತು ಅದಾಗ್ಯೂ ಸದರಿ ಕಂಪನಿಯ ಕೋರಿಕೆ ಮೇಲೆ ಪುನರ್‌ಸಜ್ಜೀಕರಣದ ಬಗ್ಗೆ ಹೊಸ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಮತ್ತೆ ಕಾಲಾವಕಾಶವನ್ನು ನೀಡಿತು. ಈ ಆದೇವಮಾದ ನಂತರ ಕಂಪನಿಯು ಬಿ.ಐ.ಎಫ್.ಆರ್. ಮುಂದೆ ಹೊಸ ಪ್ರಸ್ತಾವನೆಯನ್ನು ಸಲ್ಲಿಸಿತು. ಇದನ್ನು ದಿನಾಂಕ 30-4-1990 ರಂದು ಪರಿಶೀಲಿಸಿದ ಬಿ.ಐ.ಎಫ್.ಆರ್. ಪ್ರಾಧಿಕಾರವು ಪುನಃ ಸದರಿ ಕಂಪನಿಯ ಪುನರ್‌ಸಜ್ಜಿಕರಣ ಸಾಧ್ಯವಿಲ್ಲವೆಂಬ ತೀರ್ಮಾನಕ್ಕೆ ಬಂದಿತು ಆದರೂ ಸದರಿ ಕಂಪನಿಯ ಕೋರಿಕೆ ಮೇಲೆ ಮತ್ತೆ ಕಾಲಾವಕಾಶ ನೀಡಿತು. ನಂತರ ಸದರಿ ಕಂಪನಿಯು ಬಿ.ಐ.ಎಫ್.ಆರ್. ಪ್ರಾಧೀಕಾರದ ಮುಂದೆ ಹೊಸ ಪುನರ್‌ಸಜ್ಜೀಕರಣದ ಯೋಜನೆ ಮಂಡಿಸಿದ ಬಗ್ಗೆ ಹಾಗೂ ಪುನರ್‌ಸಜ್ಜೀಕರಣಕ್ಕೆ ಸದರಿ ಪ್ರಾಧಿಕಾರ ಆದೇಶ ನೀಡಿದ ಬಗ್ಗೆ ವರದಿ ಬಂದಿರುವುದಿಲ್ಲ.

ಈ ಮಧ್ಯೆ ಸದರಿ ಕಂಪನಿಯು ಸರ್ಕಾರಕ್ಕೆ ಒಂದು ಅರ್ಜಿಯನ್ನು ಸಲ್ಲಿಸಿ (19-12-1990) ಕಂಪನಿಗೆ ಸೇರಿದ ಹೆಚ್ಚುವರಿ ಭೂಮಿಯನ್ನು ಮಾಡಿ ಬಂದ ಹಣವನ್ನು ಬ್ಯಾಂಕ್ ಸಾಲ ತೀರಿಸಲು ಹಾಗೂ ಪುನರ್‌ಸಜ್ಜೀಕರಮಗೊಳಿಸಲು ಉಪಯೋಗಿಸಿ ಕೊಳ್ಳಲಾಗುವುದೆಂದು ತಿಳಿಸಿ ಹೆಚ್ಚುವರಿ ಜಮೀನು ಮಾರಲು ಸರ್ಕಾರದ ಅನುಮತಿ ಕೋರಿದರು. ಸರ್ಕಾರದ ಆದೇಶ ಸಂಖ್ಯೆ ಸಿ.ಐ. 15 ಪಿಯುಎಂ 86, ದಿನಾಂಕ 17-10-88 ರಲ್ಲಿ ರೋಗಗ್ರಸ್ತ ಕಂಪನಿಯ ಹೆಚ್ಚುವರಿ ಜಮೀನು ಮಾರಿ ಬಂದ ಹಣವನ್ನು ಪುನರ್‌ಸಜ್ಜೀಕರಣದಲ್ಲಿ ಹೇಳಿರುವ ಉದ್ದೇಶಗಳಿಗೆ ಉಪಯೋಗಿಸಲು ಸರ್ಕಾರದ ಅನುಮತಿ ನೀಡುವ ಬಗ್ಗೆ ಅವಕಾಶವಿದೆ. ಸದರಿ ಆದೇಶದಲ್ಲಿ ತಿಳಿಸಿರುವಂತೆ ಹೀಗೆ ಮಾಡಲು ಬಿ.ಐ.ಎಫ್.ಆರ್. ಪ್ರಾಧಿಕಾರವು ಪುನರ್‌ಸಜ್ಜಿಕರಣಕ್ಕೆ ಆದೇಶಿಸಬೇಕು. ಆದರೆ ಬಿ.ಐ.ಎಫ್.ಆರ್. ಪ್ರಾಧೀಕಾರವು ಪುನರ್‌ಸಜ್ಜಿಕರಣಕ್ಕೆ ಆದೇಶ ನೀಡಿರುವುದಿಲ್ಲ. ಆದಾಗ್ಯೂ ನಿರ್ದೇಶಕರು ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಇವರ ವತಿಯಿಂದಲೂ ಹಾಗೂ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ವತಿಯಿಂದಲೂ ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರ ಅಭೀಪ್ರಾಯ ತಿಳಿಸಲು ದಿನಾಂಕ 12-11-1990 ರಂದು ಪತ್ರ ಬರೆಯಲಾಗಿದೆ. ಆದಷ್ಟು ಬೇಗ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುವುದು.

7) ರಾಜ್ಯದಲ್ಲಿನ ವಿದ್ಯುತ್ ಸರಬರಾಜು ಮತ್ತು ಅದರ ದುರುಪಯೋಗ.

ಶ್ರೀ ಜಿ.ಎಸ್. ಆಚಾರ್ (ಬೈಂದೂರ್) : ಮಾನ್ಯ ಉಪಾಧ್ಯಕ್ಷೀಣಿಯವರೆ, ವಿದ್ಯುತ್ತನ್ನು ಸಮರ್ಪಕವಾಗಿ ಪೂರೈಸಲಾಗದೆ, ಬಳಕೆದಾರರಿಗೆ ಆಗಾಗ ಅಲಭ್ಯವಾಗುತ್ತಿರುವುದು, ಇದರಿಂದಾಗಿ ತನ್ನಿಂದ ತಾನೇ ರೆವಿನ್ಯೂ ಕಡಿತವಾಗುತ್ತಿರುವುದು, ಅಸಮರ್ಥ ಪಾರುಪತ್ಯದಿಂದಾಗಿ ನಿರ್ವಹಣೆ, ವಿತರಣೆಗಳಲ್ಲಿ ಲೋಪವಾಗಿರುವುದು, ಹಿಡಿತ ಮೆಚ್ಚ ಏರಿ ಭ್ರಷ್ಟಾಚಾರದ ಆರೋಪಕ್ಕೆ ಗುರಿಯಾಗಿರುವುದು, ಇದರಿಂದಾಗಿ ಕಳೆದ ಅನೇಕ ವರ್ಷಗಳಿಂದ ಸತತ ನಷ್ಟ ಅನುಭವಿಸುತ್ತಿರುವುದು ; ಕೆ.ಇ.ಬಿ.ಯ ದಾಖಲೆಯಾಗಿದೆ. ಇವನ್ನೆಲ್ಲ ಸರಿಪಡಿಸುವ ಬದಲು- ದರ ಏರಿಸುವುದು ಮಾತ್ರವಲ್ಲ, ದರ ಪಟಿಯನ್ನೇ ಬದಲಿಸಿ, ಹಿಂದಿನ ಅನೇಕ ವರ್ಷಗಳ ಬಾಕಿ ವಸೂಲಿಗಾಗಿ ಕ್ರಮಕೈಗೊಳ್ಳುತ್ತಿರುವುದು ಅನ್ಯಾಯವಾಗಿದೆ. 1985ರಿಂದ ಕೆಲವು ಬಳಕೆದಾರರಿಗೆ ಎಲ್‌ಟಿ-5 ಎಂಬ ತಪ್ಪಶೀಲಿನ

ಪ್ರಕಾರ ದರವನ್ನು ವಿಧಿಸುತ್ತಿದ್ದು, ಐದಾರು ವರ್ಷಗಳ ನಂತರ "ಅಡಿಟ್ ಶಾರ್ಟ್‌ಫ್ಯಾಲ್ಸ್" ಎಂದು ಎಲ್‌ಟಿ - 3 ತಪಶೀಲಿನಂತೆ ವಿಧಿಸಿ ಬಾಕಿಗಾಗಿ ತಗಾದೆ ಕಳುಹಿಸಿರುವುದು - ಅನೇಕ ಚಿಕ್ಕ ಉದ್ದಿಮೆದಾರರಿಗೆ ಸಂಕಷ್ಟವೊಡ್ಡಿದೆ. ವಿದ್ಯುನ್ಮಂಡಳಿ - ವಿದ್ಯುತ್ ಪೂರೈಕೆ ಶಾಸನದ 49 ನೇ ವಿಧಿಯಂತೆ ವಿದ್ಯುತ್ತಿನ ದರ ಬದಲಾಯಿಸಬಹುದೇ ಹೊರತು, ದರ ಪಟ್ಟಿಯ ತಪಶೀಲುಗಳನ್ನೇ ಬದಲಾಯಿಸುವುದು ಸಮರ್ಪಕವಲ್ಲ. ಐಸ್ ಕ್ರೀಮ್ ತಯಾರಿ, ಲಘುಪೇಯಗಳ ಶೀಥಿಲೀಕರಣ, ಹಾಲಿನ ಶೀಥಲೀಕರಣ ಇತ್ಯಾದಿ ಚಿಕ್ಕ ಉದ್ದಿಮೆಗಳವರಿಗೆ ಮೊದಲೇ ಗೊತ್ತಿದ್ದರೆ ಅವುಗಳ ಬೆಲೆಯನ್ನು ಆಗಲೇ ವಿರಿಸುತ್ತಿದ್ದರು. ಈಗ 5-6 ವರ್ಷಗಳ ಬಳಿಕ ಶಾರ್ಟ್‌ಫ್ಯಾಲ್ಸ್‌ಗಳೆಂದು ಸಹಸ್ರಾರು ರೂಪಾಯಿಗಳಿಗೆ ತಗಾದೆ ಮಾಡಿರುವುದು ಚಿಕ್ಕ ಉದ್ದಿಮೆಗಳಿಗೆ ಕೆ. ಇ. ಬಿ. ನೀಡಿದ ಬೃಹತ್ ಷಾಕ್ ಆಗಿದೆ. ಆದುದರಿಂದ ಅದನ್ನು ಕೈಬಿಡಬೇಕು, ವಿದ್ಯುತ್ ಪೂರೈಕೆ ಶಾಸನದ 49ನೇ ವಿಧಿಯನ್ನು ಅನುಷ್ಠಾನದಲ್ಲಿ ದುರುಪಯೋಗವಾಗದಂತೆ ತಿದ್ದುಪಡಿ ಮಾಡಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷಿಣಿಯವರೆ, ಪ್ರತಿ ವರ್ಷವೂ ವಿರುತ್ತಿರುವ ವಿದ್ಯುತ್ ಬೇಡಿಕೆಯನ್ನು ನೀಗಲು ಮತ್ತು ಬಳಕೆದಾರರಿಗೆ ಒಳ್ಳೆಯ ಗುಣಮಟ್ಟದಲ್ಲಿ ವಿದ್ಯುತ್ ಸರಬರಾಜು ಮಾಡಲು ಮಂಡಳಿಯು ಪ್ರತಿ ವರ್ಷ ಹೊಸ ಪ್ರಸರಣಾ ಮಾರ್ಗಗಳನ್ನು ಮತ್ತು ಹೊಸ ವಿದ್ಯುತ್ ಕೇಂದ್ರಗಳನ್ನು ಅವಶ್ಯಕತೆ ಮತ್ತು ಆದ್ಯತೆಯ ಮೇರೆಗೆ ರಾಜ್ಯದಲ್ಲಿ ನಿರ್ಮಿಸುತ್ತಿದೆ. ಈ ಕಾರ್ಯಗಳಿಗೆ ಬೇಕಾಗಿರುವ ಹಣ ಬಹಳ ಅಪಾರ. ಹೀಗಾಗಿ ಒಂದೇ ವರ್ಷದಲ್ಲಿ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಇವುಗಳನ್ನು ಹಂತಹಂತವಾಗಿ ನಿರ್ವಹಿಸಬೇಕಾಗುತ್ತದೆ. ಮಂಡಳಿಯು ತನಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲದ ಜೊತೆಗೆ ವಿಶ್ವ ಬ್ಯಾಂಕಿನ ನೆರವಿನೊಡನೆ ಹಲವಾರು ಹೊಸ 220 ಕೆ. ವಿ., 110 ಕೆ.ವಿ., ಮತ್ತು 33 ಕೆ. ವಿ., ಪ್ರಸರಣಾ ಮಾರ್ಗಗಳನ್ನು ಮತ್ತು ಬೃಹತ್ ಸ್ವೀಕರಣಾ ಕೇಂದ್ರ, ಉಪ - ವಿದ್ಯುತ್ ಕೇಂದ್ರಗಳನ್ನು ನಿರ್ಮಾಣ ಮಾಡುತ್ತಿದೆ. ಅಲ್ಲದೆ ವಿತರಣಾ ವ್ಯವಸ್ಥೆಯಲ್ಲಿ ಕೆಪಾಸಿಟರ್ ಬ್ಯಾಂಕುಗಳನ್ನು ಅಳವಡಿಸುವುದು, ಹೊಸ ವಿತರಣಾ ಪರಿವರ್ತಕಗಳನ್ನು ಸ್ಥಾಪಿಸುವುದು, ಹೊಸ ಫೀಡರ್ ಗಳನ್ನು ನಿರ್ಮಿಸುವುದು ಮುಂತಾದ ವ್ಯವಸ್ಥೆ - ಸುಧಾರಣಾ ಕ್ರಮಗಳನ್ನು ನಿರ್ವಹಿಸುತ್ತಿದೆ.

ಮಂಡಳಿಯ ಅಧಿಕಾರಿಗಳ ಹಾಗೂ ನೌಕರರ ವಿರುದ್ಧ ಭ್ರಷ್ಟಾಚಾರದ ಆರೋಪ, ವಿದ್ಯುತ್ ಕಳವು, ಇಂತಹ ಆಪಾದನೆಗಳ ಬಗ್ಗೆ ಕ್ರಮ ತೆಗೆದುಕೊಳ್ಳಲು ಮಂಡಳಿಯಲ್ಲಿ ಮುಖ್ಯ ಅಭಿಯಂತರ (ವಿ)ರ ನೇತೃತ್ವದಲ್ಲಿ ಇಬ್ಬರು ಆರಕ್ಷಕ ಅಧೀಕ್ಷಕರೂ ಸೇರಿದಂತೆ ಒಂದು ಜಾಗೃತ ದಳವು ಕಾರ್ಯ ನಿರ್ವಹಿಸುತ್ತಿದೆ. ಈ ಜಾಗೃತ ದಳವು ಬಳಕೆದಾರರ ಸ್ಥಾವರಗಳನ್ನು ಅನಿರೀಕ್ಷಿತವಾಗಿ ತನಿಖೆ ಮಾಡಿ, ವಿದ್ಯುತ್ ಕಳವು, ಹೆಚ್ಚುವರಿ ಲೋಡ್‌ನ ಜೋಡಣೆ ಇತ್ಯಾದಿ ಅಕ್ರಮಗಳನ್ನು ಪತ್ತೆ ಹಚ್ಚುತ್ತದೆ ಮತ್ತು ಮಂಡಳಿಗೆ ನ್ಯಾಯಯುತವಾಗಿ ಬರಬೇಕಾದ ಬಿಲ್ಲಿನ ಹಣದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುತ್ತದೆ. ಅಧಿಕಾರಿಗಳ ನೌಕರರ ವಿರುದ್ಧ ಭ್ರಷ್ಟಾಚಾರದ ಆಪಾದನೆ ಬಂದಲ್ಲಿ, ಅಂತಹ ಆಪಾದನೆಗಳನ್ನು ತನಿಖೆ ಮಾಡಿ ಈ ದಿಸೆಯಲ್ಲಿ ತ್ವರಿತ ಕ್ರಮ ತೆಗೆದುಕೊಳ್ಳುತ್ತದೆ.

ಪ್ರತಿ ವರ್ಷ ಅಗಾಧ ರೀತಿಯಲ್ಲಿ ಸೇರ್ಪಡೆಯಾಗುತ್ತಿರುವ ಬಳಕೆದಾರರು ವಿಶಾಲವಾಗಿ ವಿಸ್ತಾರವಾಗುತ್ತಿರುವ ವಿತರಣಾ ವ್ಯವಸ್ಥೆ ಇವುಗಳನ್ನು ಗಮನದಲ್ಲಿಟ್ಟುಕೊಂಡು ಲಭ್ಯವಿರುವಷ್ಟೇ ಸಿಬ್ಬಂದಿಯ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಿಕೊಂಡು ಮಂಡಳಿಯ ಕೃಷಿಕರು ಮತ್ತು ಇತರ ಎಲ್ಲಾ ವರ್ಗದ ಬಳಕೆದಾರರ ಹಿತಕ್ಕಾಗಿ ಶಕ್ತೇ ಮೀರಿ ಪ್ರಯತ್ನಿಸುತ್ತಿದೆ.

ಮಂಡಳಿಯು ದರ ಪರಿಷ್ಕರಣಾ ಸಮಿತಿಯ ಶಿಫಾರಸ್ಸುಗಳನ್ನು ಮತ್ತು ಸರ್ಕಾರದ ಮಾರ್ಗದರ್ಶನವನ್ನು ಅನುಸರಿಸಿ ವಿದ್ಯುತ್ ದರವನ್ನು ಪರಿಷ್ಕರಿಸುತ್ತದೆ. ವಿದ್ಯುತ್ ದರದ ಪರಿಷ್ಕರಣೆ ಬಗ್ಗೆ ಮುಂಚಿತವಾಗಿಯೇ ಸಾರ್ವಜನಿಕರ ಅಭಿಪ್ರಾಯಗಳನ್ನೂ ಸಹ ಪಡೆದುಕೊಳ್ಳುತ್ತಿದೆ. ವಿದ್ಯುತ್ ದರ ಪರಿಷ್ಕರಣೆಯನ್ನು ಜಾರಿಗೊಳಿಸುವ ಮುಂಚೆ ಅಧಿಸೂಚನೆಯನ್ನೂ ಸಹ ಹೊರಡಿಸಲಾಗುತ್ತದೆ.

ಮಂಡಳಿಯ ಆಂತರಿಕ ಲೆಕ್ಕ ತನಿಖಾ ವಿಭಾಗವು ವಿವಿಧ ರೆವಿನ್ಯೂ ಅಕೌಂಟಿಂಗ್ ಕಛೇರಿಗಳನ್ನು ಸಂದರ್ಶಿಸಿ, ಈ ದರಗಳನ್ನು ಸರಿಯಾಗಿ ವಿಧಿಸಲಾಗುತ್ತಿದೆಯೇ ಇಲ್ಲವೆ ಎಂಬುದರ ಬಗ್ಗೆ ಪರಿಶೀಲಿಸುತ್ತದೆ. ಒಂದು ವೇಳೆ ದರಗಳನ್ನು ಸರಿಯಾಗಿ ವಿಧಿಸದೇ ಇದ್ದಲ್ಲಿ ಸರಿಯಾದ ದರವನ್ನು ಸೂಚಿಸಿ, ವಿದ್ಯುತ್ ಬಿಲ್ಲುಗಳನ್ನು ಪರಿಷ್ಕರಿಸುವಂತೆ ತಿಳಿಸುತ್ತದೆ. ಆಂತರಿಕ ಲೆಕ್ಕ ತನಿಖಾ ವಿಭಾಗವು ನೀಡುವ ಸೂಚನೆಗೆ ಅನುಗುಣವಾಗಿ, ವಿದ್ಯುತ್ ಬಿಲ್ಲುಗಳನ್ನು ಪರಿಷ್ಕರಿಸಿ, ಕಡಿಮೆ ಕ್ಲೈಮು ಬಿಲ್ಲುಗಳನ್ನು ಬಳಕೆದಾರರಿಗೆ ನೀಡಲಾಗುವುದು. ಈ ರೀತಿಯ ಕಡಿಮೆ ಕ್ಲೈಮು ಬಿಲ್ಲಿನ ಹಣದ ಮೊತ್ತ ಬೃಹತ್ ಪ್ರಮಾಣದಲ್ಲಿದ್ದಲ್ಲಿ, ಹಲವು ಕಂತುಗಳಲ್ಲಿ ಈ ಹಣವನ್ನು ಪಾವತಿ ಮಾಡಲು ಮಂಡಳಿಯು ಅವಕಾಶ ಮಾಡಿಕೊಡುತ್ತದೆ. ಅಲ್ಲದೆ, ಬಳಕೆದಾರರು ಇಂತಹ ಕಡಿಮೆ ಕ್ಲೈಮುಗಳ ಬಗ್ಗೆ ಮಂಡಳಿಯ ಹಿರಿಯ ಅಧಿಕಾರಿಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಮಾಡಿಕೊಟ್ಟಿದೆ.

ಯಾವುದೇ ಸ್ಥಳದಲ್ಲಿ ಪದಾರ್ಥಗಳನ್ನು ಕೇವಲ ಉತ್ಪಾದಿಸುವ ಘಟಕಗಳ ಸ್ಥಾವರಗಳಿಗೆ ಎಲ್. ಟಿ. 5 ದರವನ್ನು, ಸ್ಥಳದಲ್ಲಿ ಪದಾರ್ಥಗಳನ್ನು ಉತ್ಪಾದಿಸಿ ಅದೇ ಸ್ಥಳದಲ್ಲಿ ಉತ್ಪತ್ತಿಯಾದ ಪದಾರ್ಥಗಳನ್ನು ಮಾರುವ ಘಟಕಗಳ ಸ್ಥಾವರಗಳಿಗೆ ಎಲ್.ಟಿ. 3 ದರವನ್ನು ಅನ್ವಯಿಸಲಾಗುವುದು. ಈ ರೀತಿಯಾಗಿ ಉತ್ಪಾದಿಸುತ್ತಿರುವ ಪದಾರ್ಥಗಳನ್ನು ಮಾರಾಟ ಮಾಡುತ್ತಿರುವ ಬಳಕೆದಾರರ ಸ್ಥಾವರಗಳಿಗೆ ವಾಣಿಜ್ಯ ದರವಾದ ಎಲ್.ಟಿ. 3 ಯನ್ನು ವಿಧಿಸಿ ಕಡಿಮೆ ಕ್ಲೈಮು ಬಿಲ್ಲುಗಳನ್ನು ನೀಡಿದೆ.

ಉಪಾಧ್ಯಕ್ಷಣಿಯವರು ಈಗ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲೆ ಚರ್ಚೆ : ಈ ದಿನ ಈ ಚರ್ಚೆಯನ್ನು ಮುಗಿಸಬೇಕಾಗುತ್ತದೆ. ನಾಳೆ ದಿವಸ ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುವವರಿದ್ದಾರೆ. ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗಿನ ತೀರ್ಮಾನದ ಪ್ರಕಾರ ಇವತ್ತು ಚರ್ಚೆಯನ್ನು ಮುಗಿಸಬೇಕಾಗುತ್ತದೆ. ಚರ್ಚೆಯಲ್ಲಿ ಭಾಗವಹಿಸುವವರು ಆದಷ್ಟು ಹತ್ತು ನಿಮಿಷಗಳಲ್ಲಿ ತಮ್ಮ ಮಾತನ್ನು ಮುಗಿಸಿದರೆ ಹೆಚ್ಚು ಜನರಿಗೆ ಅವಕಾಶ ಕೊಡಲು ಸಾಧ್ಯವಾಗುತ್ತದೆ.

3 ಪಿ.ಎಂ.

SRI QUMARUL ISLAM (Gulbarga) : Madam Deputy Speaker, you have given ten minutes. I will try to be very short. The Address of the Governor to the Legislature on Friday the 1st March 1991, begins with the law and order situation in the State and it has been rightly said that once upon a time Karnataka was known for peace and communal harmony. But that situation has gone ; that history has gone. During the last few months back a series of communal riots in which number of citizens, and Kannadigas lost their lives and properties.

The Government has also come forward to give them some loans and give them some compensation. Whatever they have lost, hardly 10 or 5% of

the property lost, the compensation was given. It is also mentioned that we wanted the police force to be strengthened. That is the main subject narrated here in the Governor's Address and certain measures have been adopted like transport facilities, new equipments, some recruitment to the personnel and all these things. Mentioning all these things, the very important and serious thing is, whether our State, with this present police administration, and with the present police force, can we get back the same name? Can this State again maintain the same name and peace and communal harmony in the State.

Madam, this police force has already become Communal. Now things are moving in the police department on the will and wish of some of the political, mighty force and there is no difference between good, respectable citizen and a rowdy or goonda and the police officials have become an instrument just to please those officers who are enquiring to get good postings. Here, I want to mention that the atrocities from the police not only in Davangere, or Sulya, or Bagalkot. There are so many examples. On these atrocities, complaints have been made to the Government. It has come to the notice of the Chief Minister, Home Minister and then the Government instructed the IGP, Intelligence to enquire the matter as to what is the fact. A senior most police officer under instructions of the IG Intelligence, has been posted to Davangere to know what is happening and what is the reality. To my knowledge, that senior most police officer has said that there are atrocities going on and it has been taken.

We know in the communal riots, about nine murder cases were there and COD is enquiring into this. Now the agitation is going on. Who have all been arrested you know, the City Municipal Chairman Sheikh Ahmed. He has been arrested under a murder case and he was 75 days behind the bars. When he was released by the High Court, he was arrested again in some other cases. He belonged to the Janatha Dal and another person Charlic phailwan. The reason was that the person belonged to the Congress party. In that particular segment, they are influencing the particular COD officers and they have not just completed the chargesheet. The chargesheets have been completed as far as six muslim cases are concerned. Murders have taken place but still the chargesheets have not been submitted.

Every day, they are arresting important personalities, who wanted to go against that particualr group of Davangere, and who wanted that their domination should be there, and if this attitude of the police officials and the COD, I believe some training has been given to them for investigation.

What type of training? COD officials, nowadays, wherever they do not want them, they will be sent to COD office and these officiers are in the verandahs of Legislators' Home, and are trying just for the postings. "I am in COD, I must be given some executive post "They say. I wanted to know that special training has been given to these officers while giving the job of COD. It is the same police officials who are posted to COD and the some officials, who wanted some sort of good postings, they are doing all these things. If time permits, and if somebody raises, I can give specific example but my intention in this House is to bring this matter to the notice of the Government that with this police force which has all become communal and having the partisan attitude can they provide justice ! People will lose faith ; people have already started losing faith. I can give two examples.

On the second of March, What we call ' shabe barath' in Bagalkota in Punka Masjid, 50% people were offering Namaz in the night and there was no communal tension ; no problem was there. One Circle Inspector and one Sub Inspector, after 12-45 a. m. that is late night, when they are doing the prayer, the police came to the Mosque and they have beaten up the people who were praying saying that some bombs were kept there, and" we have come in search of bombs ". We have reported this matter in a telegram. People have also come in the form of delegation to the Hon. Home Minister also. We so not know where the Bombs are. What is the apprehension? Let all the religious institutions be searched irrespective of this thing by a body to be constituted.

This is not the way. People are praying ; there is no tension, and no apprehension. It is on the night of First and Second. There are number of examples, like Sulya and Yadgir. About 12 O'Clock in the night somebody put the flesh of the pig into the mosque at 3 O'Clock or so. When the police arrested, there was influence on the Government and the police officials, I do not want to mention the name of the those persons, who are our colleagues in the House, were influenced that the arrested people belonged to their party and all that. Sir, this is the situation. What I wanted is, there should be a thorough change as far as this present administration is concerned. As far as the integrity and ability of the police officials are concerned, if there is a report that such and such a person is not fit for such a postings and even if there is influence, such people should not be given postings. It is very difficult with the police administration if this were to continue. Only

then this Government will get the confidence of the minorities. Will the police force be strengthened and fire station is sanctioned? and more Congress Party has taken the decision, in which Madam Indira Gandhi had sent 15 point programmes.

Number of debates were held in the National Integration Council regarding recruitment to the police force, about 30% of minorities should be given recruitment. Will the Government come forward and commit in this House that they will be implementing 15 point Programmes of their own party to see that the police force is strengthened? If you want the Police Force to keep its integrity, then it should consist of all the communities. I do not think Police force will be strong force if only major community people or one community people is there in the police force. If the attitude is not checked, it will be very difficult. The Government should come forward and tell whethere theis Government will implement 15 point programmes of the Congress Party, i.e., the then ruling party, and the then Prime Minister for whom we have great respect. 6th Battallion recruitment is going on where about 1500 police personnel will be recruited.

We will be here to observe whether this Government is sincere in implementing that 15 point programmes or not. The second thing is about Hyderabad - Karnataka. I congratulate the Government because this Government has taken a decision. In my constituency, half of the work about 40 lakhs work of the ring road and other drinking water road has been completed because it was the ambition of the people of Hyderabad - Karnataka. It was the long desire of the people that except the Statutory Board, nothing less than that is acceptable to us. At least this Government, this Governor's Address has mentiones, that they will give statutory position to the Hyderabad - Karnataka Board. Sir, we wanted that this Hyderabad - Karnataka Board should be given Statutory status and the Board should function early. We have got certain hopes. It was also in the Budget when they gave 40 crores and 5 crores. Now Rs. 50 crores and Rs. 10 crores for the Border Area has been allotted. So the intention of the Government has come out here. So, I must congratulate as far as Hyderabad - Karnataka is concerned.

The Hon. Ministers, Mr. Dharmsinghji and Mr. Khargeji are there and we are confident that this time the Hyderabad - Karnataka people will not be deceived and this Government will not taken much time to take a decision as stated in the Governor's Address and to give the statutory position to the Hyderabad - Karnataka Board. This is the demand in this House on behalf of the people of Hyderabad - Karnataka. The third thing is, about the Minorities Commission headed by Mr. R.H. Goodwala. This commission has submitted interim reports. In the Governor's Address there is a mention. The Government

should come forward to tell how much time they will take. You know this report has not been discussed on the floor of the House but the recommendations are there before the Government since so many years.

Now the Government has said that the recommendations of the Goodwala Minorities Commission are under consideration. As almost all the recommendations of the Mahishi Committee Report, the Goodwala Minorities Commission's Report should be accepted and the orders should be issued in this direction. Regarding O. Chinnappa Reddy Commission, we know that the Government is in favour of reservation because it is the third backward classes commission. There is a mention that Chinnappa Reddy Report will be implemented. Here also the people wanted that the Government should come out and implement in toto the Chinnappa Reddy recommendations and the Government should implement them in a very short time. But while implementing Havanur Recommendations in 1979-80, I have circulated a G.O of the Kerala Government based on Nettur Commission. They have utilised all the hundred cycles into whatever reservation that was given to the backward classes or the group of backward classes. Here, what is happening, the Members who are there in the Backward Classes Committee of the House, they know even out of the thousand appointments, the muslims who are there in the backward classes even 6 or 8 have not the chance.

We do not want that we should have included in the backward classes Commission and our people have not got the benefit of that commission, even though we are the third largest population in the State. We are 12% as per the census. That is why we are more particular. As far as the Government order is concerned it should be based on the Kerala pattern and some months back the KPCC also mentioned in the Manifesto that the reservation will be only on the Kerala pattern. As far as the Minorities and backward classes of this State are concerned, we will not accept the G.O. based on Chinnappa Reddy recommendations which are not on par with of the Kerala. This is a verty serious thing.

MADAM DEPUTY SPEAKER : You have taken more than 25 minutes.

SRI QUMARUL ISLAM : I will take only five minutes. The G.O. to be issued based on Chinnappa Reddy Commission recommandations, should have the Kerala pattern reservation ; less than that it is not acceptable to us. The other thing I wanted to mention is about the Kannada University. I welcome the decision taken for establishment of Kannada University at Hampi. As a Kannadiga, I welcome Kannada University but at the same time Urdu population which has played a very important role for the independence of

this country, the Urdu language and assurances were also given in the KPCC manifesto that Urdu will be given second official status and this Minorities Commission also recommended...

SMT. DHAMAYANTHI BORE GOWDA : Shall we have it in Srirangapatna, Tippu's place?

SRI QUMARUL ISLAM : No at Gulbarga. They have also said that it will be given second official status. What you have committed you must be prepared to face. If the commitment is not fulfilled by the Government, you have to go to the people - you are going to people after some years, after two months also you are going to the people.

So, there I wanted whatever commitments are there and these commitments should be fulfilled with all sincerity otherwise people are there to teach lesson. So, please honour all of the power of the people in the democracy because final power lies in the hands of the people who votes and they should say here is a Government which will fulfill all the commitments given before coming to the power.

So, my sincere advice is that they must be sincere in giving second official status to Urdu and at the same time as Kannadigas are demanding I demand the people who wanted to learn – here I would like to sat a solemn assurance was given on the floor of the House that Kannada Teachers will be appointed very soon in Minority run schools but today there are no Kannada Teachers available in the Minority run Schools. What is the use without a teacher that too when Muslims wanted to learn, this Government is not sincere in appointing Kannada Teachers to the Minority Institutions. They must be practical, they must come forward and see that all the Primary School vacancies should be filled up immediately. If they don't take steps to fill up those posts I would feel that this Government is not that much sincere towards the development of Kannadiga.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ : ಮಾನ್ಯ ಸದಸ್ಯರು ಕನ್ನಡದಲ್ಲಿ ಚೆನ್ನಾಗಿ ಮಾತನಾಡುತ್ತಾರೆ. ಅವರು ಕನ್ನಡದಲ್ಲಿಯೇ ಮಾತನಾಡಲಿ.

ಶ್ರೀ ಕಮರುಲ್ ಇಸ್ಲಾಂ : ಮಾನ್ಯ ಅಧ್ಯಕ್ಷರೇ, ನನಗೆ ಕನ್ನಡ ಚೆನ್ನಾಗಿ ಮಾತನಾಡಲು ಬರುವುದಿಲ್ಲ. ಕನ್ನಡದಲ್ಲಿ ಮಾತನಾಡಲೂ ಪ್ರಯತ್ನ ಮಾಡುತ್ತೇನೆ. ಮುಂದಿನ ಅಧಿವೇಶನದಲ್ಲಿ ನಾನು ಯಾವ ರೀತಿ ಕನ್ನಡದಲ್ಲಿ ಮಾತನಾಡುತ್ತೇನೆಂಬುದನ್ನು ತಾವು ನೋಡಿ. ನಾನು ಕನ್ನಡದಲ್ಲಿ ಸಾಕಷ್ಟು ಇಂಪ್ರೂವ್ ಆಗಿದ್ದೇನೆ. Before concluding my speech through you Madam only I touch the last point. Many of the Members of both Houses had expressed their feelings with regard to the timings of the Governor's Address in this House. I know this is a very precious Session, every one of us-the elected representatives are very eager

to attend the Session, I was also very eager to attend the same but I was forced to be absent in the Session because I am a firm believer in God. I had to go to the prayer for mosque on that day. I cannot pray anywhere; only in the mosque I can pray. So, I could not attend the same.

Therefore, I appeal in future on the day of the Friday particularly in between 1-00 hours 2-00 p.m. the Governor's Address or other important meetings should not be fixed because it will cause inconvenience. Similar situation has come in the Parliament in the last presidential Address, when it was brought to the notice, the Hon'ble President was kind enough in consultation with the Prime Minister to change the timings. Similarly if it would have been brought to the notice of His Excellency the Governor he too would have agreed for a different timings. However, past is past, let not in future such mistakes occur again. With these I conclude and thank the Chair.

ಶ್ರೀಮತಿ ಮೋಟಮ್ಮ : (ಮೂಡಿಗೆರೆ) : ಸನ್ಮಾನ್ಯ ಉಪಾಧ್ಯಕ್ಷೆಯವರೆ, ಶ್ರೀಮತಿ ಚಂದ್ರಪ್ರಭಾ ಅರಸು ಅವರು ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯ ಮಂಡಿಸಿರುವುದನ್ನು ಸ್ವಾಗತಿಸುತ್ತಾ ಅದರ ಬಗ್ಗೆ ಕೆಲವಾರು ವಿಷಯಗಳನ್ನು, ಮಾತನಾಡುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಪ್ರಾರಂಭದಲ್ಲಿ ಸ್ವಾಗತಿಸುತ್ತೇವೆಂದು ಹೇಳುತ್ತೀರಿ ಮುಂದೆ ಹೇಳುತ್ತಾ ಹೋದಾಗ ವಿರೋಧ ಇರುತ್ತದೆ.

ಶ್ರೀಮತಿ ಮೋಟಮ್ಮ : ಹಾಗೇನು ಇಲ್ಲ. ವಿರೋಧ ಪಕ್ಷದಲ್ಲಿ ಕುಳಿತಿದ್ದೇವೆಂದು ಪ್ರತಿಯೊಂದನ್ನು ವಿರೋಧಿಸುವುದೇ ಆಗಿದೆ. ಯಾರಿಗಾದರೂ ವಿಶಾಲ ಹೃದಯ ಇರಬೇಕು. ಗುಣಕ್ಕೆ ಮಾತ್ಸರ್ಯ ಇರಬಾರದು. ಒಳ್ಳೆಯ ಕೆಲಸ ಮಾಡಿದಾಗ ಇದನ್ನು ಅಪ್ರಿಷಿಯೇಟ್ ಮಾಡುವ ಮನೋಭಾವನೆಯನ್ನು ತಾವೆಲ್ಲರೂ ಬೆಳಸಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್ : ನಾವು ಒಳ್ಳೆಯ ಕೆಲಸ ಮಾಡಿದರೆ ಹೊಗಳುತ್ತೇವೆ. ಆದರೆ ನೀವು ನಮ್ಮ ಸರ್ಕಾರ ಇಂಥ ಕೆಲಸ ಮಾಡಿದೆ, ಇಂಥ ಕೆಲಸ ಮಾಡಿಲ್ಲ ಎಂದು ಹೇಳಬೇಕಲ್ಲ.

ಶ್ರೀಮತಿ ಮೋಟಮ್ಮ : ಅದನ್ನು ನಾವು ಹೇಳುತ್ತೇವೆ. ನಾನು ಇನ್ನೂ ಮಾತನಾಡಿಲ್ಲ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಕೆಲವು ಉತ್ತಮವಾದ ಕಾರ್ಯಕ್ರಮಗಳನ್ನು ಮಾಡುತ್ತೇವೆಂದು ಹೇಳಿರುವುದನ್ನು ಅವರೆಲ್ಲರೂ ಮನಗಂಡಿದ್ದಾರೆ, ನಾವು ಕೂಡ ಮನಗಂಡಿದ್ದೇವೆ. ಇದನ್ನು ನಾವು ಅಪ್ರಿಷಿಯೇಟ್ ಮಾಡಬೇಕಾಗುತ್ತದೆ. ಮೊಟ್ಟಮೊದಲನೆಯದಾಗಿ, ನಮ್ಮ ಸರ್ಕಾರ ರಚನೆಯಾದ ತಕ್ಷಣ ಏನು ಕೋಮು ದಳ್ಳುರಿ ಪ್ರಾರಂಭವಾಗಿತ್ತು ಅದನ್ನು ಹತ್ತಿಕ್ಕಿತು. ಅದಕ್ಕೋಸ್ಕರ ಎಲ್ಲಾ ಕಡೆ ಪೋಲಿಸ್ ಫೋರ್ಸನ್ನು ಹೆಚ್ಚಿಗೆ ಮಾಡುತ್ತಿರುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಪ್ಪು ಮಾಡಲಿಕ್ಕೆ ಕಾರಣ ಯಾರು ಎಂದು ಹೇಳಿ.

ಶ್ರೀಮತಿ ಮೋಟಮ್ಮ : ಅದರಲ್ಲಿ ನಿಮ್ಮ ಕೈವಾಡ ಇದೆಯೋ ಏನೋ ಹೇಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಹೆಚ್.ಬನ್ನಿಕೋಡ್ : ವೀರೇಂದ್ರ ಪಾಟೀಲರನ್ನು ತೆಗೆದುಹಾಕಲು ಯಾರು ಕೈವಾಡ ಮಾಡಿದರು?

ಶ್ರೀಮತಿ ಮೋಟಮ್ಮ : ನಿಮ್ಮ ಕೈವಾಡ ಏತಕ್ಕೆ ಇರಬಾರದು? ಬನ್ನಿಕೋಡು ಅವರು ಮಾಡಿದರು ಎಂದು ಅಲ್ಲ. ಇಂಥಾದ್ದರಲ್ಲಿ ಕಾಣದ ಕೈಗಳೇ ಜಾಸ್ತಿ ಕೆಲಸ ಮಾಡುವುದು. ಇದನ್ನು ನಾನು ಹೇಳುವುದಕ್ಕೆ ಸಾಧ್ಯವಿಲ್ಲ. ಅಂಥಾದ್ದನ್ನು ಹತ್ತಿಕ್ಕಿ.

ಶ್ರೀ ಎಂ.ವೀರಪ್ಪ ಮೊಯಿಲಿ : ಬನ್ನಿಕೋಡು ಅವರು ಅದು ಆಗುವ ಮೊದಲೇ ಹೇಳಿದ್ದರೆ ಸಂತೋಷವಾಗಿರುವುದು.

ಶ್ರೀ ಬಿ.ಹೆಚ್. ಬನ್ನಿಕೋಡ್ : ಯಾರ್ಯಾರ ಕೈವಾಡ ಇದೆ ಎಂದು ನಾವು ವಿರೋಧ ಪಕ್ಷದವರು ಸದನದಲ್ಲಿ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಇವತ್ತು ಹೊಸದಾಗಿ ಹೇಳುತ್ತಿಲ್ಲ. ಇದಕ್ಕೆ ಯಾರು ಕಾರಣೀಭೂತರು ಎಂಬುದು ಅವರಿಗೆ ಗೊತ್ತಿರಬಹುದು. ಆಡಳಿತ ಪಕ್ಷದವರೇ ಅದಕ್ಕೆ ಕಾರಣರು ಎಂಬ ಮಾತನ್ನು ಹೇಳಿದ್ದೇವೆ.

ಶ್ರೀಮತಿ ಮೋಟಮ್ಮ : ನನ್ನ ಮಾತನ್ನು ಕೇಳಿದರೆ ಒಳ್ಳೆಯದು, ಇನ್ನು ಪೋಲೀಸ್ ಫೋರ್ಸ್‌ನ್ನು ರಾಜ್ಯದಾದ್ಯಂತ ಹೆಚ್ಚು ಮಾಡಲಾಗುತ್ತಿದೆ. ಅದು ನಿಜವಾಗಿ ಅಪ್ರಿಷಿಯೇಟ್ ಮಾಡತಕ್ಕ ವಿಷಯ. ನನ್ನ ಕಳಕಳಿಯ ಮನವಿ ಏನೆಂದರೆ, ಪೋಲೀಸ್ ಫೋರ್ಸನ್ನು ಹೆಚ್ಚು ಮಾಡಿದರೆ ಮಾತ್ರ ಸಾಲದು, ಹಗಲು ರಾತ್ರಿ ದುಡಿಯುವಂತಹ ರಾಜ್ಯದ ರಕ್ಷಣೆಗೆ ನಿಂತಿರತಕ್ಕ ಇಲಾಖೆಯಲ್ಲಿ ಕೆಲಸ ಮಾಡುವ ಪೋಲೀಸ್ ನೌಕರ ವರ್ಗದವರ ಕಡೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಅವರಿಗೆ ಹೆಚ್ಚಿನ ಭತ್ಯಗಳು ಇತರ ಸೌಲಭ್ಯಗಳನ್ನು ಒದಗಿಸುವುದು ಬಹಳ ಮುಖ್ಯ ಎಂದು ನನ್ನ ಅನಿಸಿಕೆ. ಇನ್ನು ಕಪ್ಪು ಹಲಗೆ ಯೋಜನೆಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸುವುದು ಮೆಚ್ಚತಕ್ಕ ವಿಷಯ. ಇದರ ಜೊತೆಯಲ್ಲಿ ವಿದ್ಯಾ ಇಲಾಖೆಯಲ್ಲಿರತಕ್ಕ ವೆಕೇಷನಲ್ ಕೋರ್ಸಸ್ ಅನ್ನು ಜಾಸ್ತಿ ಮಾಡಿ ಎಲ್ಲಾ ಜಿಲ್ಲೆಗಳಲ್ಲಿ ಈ ವೆಕೇಷನಲ್ ಕೋರ್ಸಸ್ ಅನ್ನು ಪ್ರಾರಂಭಿಸುವುದಕ್ಕೆ ಆದೇಶ ನೀಡಿರುವುದು ನಾವು ಮೆಚ್ಚತಕ್ಕ ವಿಷಯ. ಕೇವಲ ಬಿ.ಎ. ಬಿ,ಎಸ್.ಸಿ. ಪಾಸ್ ಮಾಡಿ ಕೆಲಸ ಇಲ್ಲದೆ ಅಲೆದಾಡುತ್ತಾ ಇರುವ ನಿರುದ್ಯೋಗಿಗಳನ್ನು ನೋಡಿದಾಗ ನಮಗೆ ಬೇಸರವಾಗುತ್ತದೆ.

ಆದ್ದರಿಂದ ವೆಕೇಷನಲ್ ಕೋರ್ಸ್ ಹೆಚ್ಚಿಗೆ ಮಾಡಿದ್ದೇ ಆದರೆ ಅವರು ತಮ್ಮ ಕಾಲಮೇಲೆ ತಾವು ನಿಂತು ಉದ್ಯೋಗ ಸೃಷ್ಟಿ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ನನ್ನ ಅನಿಸಿಕೆ.ಅದೇ ರೀತಿ ಮುಕ್ತ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುತ್ತಿರುವುದು ಮೆಚ್ಚತಕ್ಕ ವಿಷಯ. ನನ್ನ ಸಲಹೆ ಏನೆಂದರೆ, ಡಾ: ಬಿ.ಆರ್. ಅಂಬೇಡ್ಕರ್ ಅವರ ನೂರನೇ ಜನ್ಮ ಶತಾಬ್ದಿಯನ್ನು ಆಚರಣೆ ಮಾಡುತ್ತಿರುವುದರಿಂದ ಆ ಓಪನ್ ಯೂನಿವರ್ಸಿಟಿಗೆ ಡಾ: ಅಂಬೇಡ್ಕರ್ ಅವರ ಹೆಸರನ್ನು ಇಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಡಾ: ಸರೋಜಿನಿ ಮಹಿಷಿ ಅವರ ವರದಿಯನ್ನು ಜಾರಿಗೆ ತಂದು ಕನ್ನಡಿಗರಿಗೆ ಹೆಚ್ಚಿನ ಉದ್ಯೋಗಾವಕಾಶವನ್ನು ಕಲ್ಪಿಸುತ್ತಿರುವುದು ಎಲ್ಲರೂ ಹೆಮ್ಮೆಪಡುವ ವಿಷಯ. ಇದಕ್ಕೆ ಪ್ರತಿಯೊಬ್ಬ ಕನ್ನಡಿಗನೂ ನಮ್ಮ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ನಮ್ಮ ದೇಶದ ಬೆನ್ನೆಲುಬು ರೈತರು. ಮಾನ್ಯ ವಿರೋಧ ಪಕ್ಷದವರು ತಾವೇ ರೈತರ ಬಗ್ಗೆ ಹೆಚ್ಚಿನ ಕಾಳಜಿ ಕಾಂಟ್ರಾಕ್ಟ್ ವಹಿಸಿಕೊಂಡಿರುವಂತೆ ಬಹಳ ಮಾತನಾಡುತ್ತಿದ್ದಾರೆ.

ಇಲ್ಲಿಯವವರೆಲ್ಲಾ ರೈತ ಕುಟುಂಬದಿಂದ ಬಂದವರೇ. ಭಾರತ ರೈತರನ್ನು ಅವಲಂಬಿಸಿದೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಬರೀ ಭಾಷಣ

ಮೊಡುವುದಾಗಲೀ, ರೈತರ ಬಗ್ಗೆ ಕಳಕಳಿ ಇದೆ ಎಂದು ಮಾತನಾಡುವುದಾಗಲೀ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಿಜವಾಗಿಯೂ ಅವರಿಗೆ ಅನುಕೂಲವಾಗುವಂಥ, ನಿಜವಾಗಿಯೂ ಅವರಿಗೆ ಸ್ಪಂದಿಸುವಂಥ ಕೆಲಸ ಮಾಡಿದ್ದನ್ನು ನಾವು ಅಪ್ರಿಷಿಯೇಟ್ ಮಾಡಬೇಕಾಗುತ್ತದೆ. ಅಂಥ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ ಎಂದರೆ ತಪ್ಪಾಗಲಾರದು. ಇವತ್ತು ರೈತರಿಗೆ ಪಾಸ್‌ಬುಕ್ ಕೊಟ್ಟಿರುವುದರಿಂದ ಇಡೀ ರೈತ ಸಮೂಹ ನಿಜವಾಗಿಯೂ ಸಂತೋಷಪಡುತ್ತದೆ, ಮತ್ತು ಸರ್ಕಾರವನ್ನು ಅಭಿನಂದಿಸುಬೇಕಾಗುತ್ತದೆ. ರೈತರು ಸಣ್ಣ ಪುಟ್ಟ ಕೆಲಸಗಳಿಗೆ ಅಂದರೆ ಖಾತೆ ಬದಲಾವಣೆಗಳಿಗೆ ಆಗಲೀ ಅಥವಾ ಕಂದಾಯದ ಬಗ್ಗೆ ಕೇಳುವುದಕ್ಕಾಗಲೀ ಮಾಹಿತಿಗೆ ಹೋದರೆ ವಾರಗಟ್ಟಲೆ, ತಿಂಗಳುಗಟ್ಟಲೆ ರೆವಿನ್ಯೂ ಇಲಾಖೆಯಲ್ಲಿ ಅಲೆದಾಡಬೇಕಾಗುತ್ತದೆ. ತಹಸೀಲ್ದಾರ್, ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ವಿಲೇಜ್ ಅಕೌಂಟೆಂಟ್ ಹತ್ತಿರ ಹೋಗಬೇಕಾಗುತ್ತದೆ. ಈ ಪಾಸ್‌ಬುಕ್ ಇದ್ದರೆ ಸುಲಭವಾಗಿ ಅವರು ಪ್ರತಿಯೊಂದು ಕೆಲಸ ಮಾಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಹಾಗೆಯೇ ತುಂಡುಭೂಮಿ ಕಾಯಿದೆ, ಭೂಸುಧಾರಣೆ ಕಾಯಿದೆ ತಿದ್ದುಪಡಿ ಮಾಡಿರುವುದು ಮೆಚ್ಚುವಂಥ ವಿಷಯ. ಹಾಗೆಯೇ ಪಂಪ್‌ಸೆಟ್‌ಗಳಿಗೆ ವಿಧಿಸಿರುವ ವಿದ್ಯುಚ್ಛಕ್ತಿ ದರ ಕಡಿಮೆ ಮಾಡಿರುವುದು. ವಿದ್ಯುಚ್ಛಕ್ತಿ ಇಲಾಖೆ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗುತ್ತದೆ.ಈಗ ಏನಾಗಿದೆಯೆಂದರೆ, ಒಂದೊಂದು ಸಾರಿ ನಾವು ಮಲೆನಾಡಿನಲ್ಲಿ ಹುಟ್ಟಿರುವುದೇ ತಪ್ಪೇನೋ ಅನ್ನಿಸುತ್ತದೆ. ಪ್ರತಿಯೊಂದರಲ್ಲೂ ಬಯಲುಸೀಮೆಯವರಿಗೆ ಹೆಚ್ಚು ಅನುಕೂಲವಾಗಿದೆ. ಐ.ಪಿ.ಸೆಟ್ಸ್ ಎಲ್ಲಾ ಬಯಲು ಸೀಮೆಗೇ ಅನುಕೂಲವಾಗಿದೆ. ಮೊದಲು ಐ.ಪಿ.ಸೆಟ್ಸ್ ಹಾಕಿ ನಂತರ ಎಲೆಕ್ಟ್ರಿಫಿಕೇಷನ್...

ಶ್ರೀ ಬಿ.ಹೆಚ್. ಬನ್ನಿಕೋಡ್ : ನೀವು ಬಯಲುಸೀಮೆ ಮರೆತಿದ್ದೀರಿ. ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಿಕೊಂಡಿದ್ದೀರಲ್ಲ.

ಶ್ರೀಮತಿ ಮೋಟಮ್ಮ : ನಮ್ಮ ಸರ್ಕಾರದವರು ಮಲೆನಾಡು ಅಭಿವೃದ್ಧಿ ಬಗ್ಗೆ ಚಿಂತನೆ ಮಾಡಿ ಇತ್ತೀಚೆಗೆ ಮಲೆನಾಡು ಡೆವಲಪ್ಮೆಂಟ್ ಬೋರ್ಡ್ ಮಾಡಿದ್ದಾರೆ. ಅದಕ್ಕಾಗಿ ನಿಜವಾಗಿಯೂ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ಅಧ್ಯಕ್ಷೆಯವರೆ, ನೀವು ನಮ್ಮ ಪ್ರದೇಶ ಎಲ್ಲಾ ನೋಡಿದ್ದೀರಿ. ಅಲ್ಲಿ ಆರು ತಿಂಗಳು ಮಳೆಗಾಲ ಇರುತ್ತದೆ. ಇನ್ನುಳಿದ ಆರು ತಿಂಗಳಲ್ಲಿ ಎಲೆಕ್ಟ್ರಿಫಿಕೇಷನ್ ಮಾಡಬೇಕಾದರೆ ಕಂಬಗಳನ್ನು ಹೊತ್ತುಕೊಂಡು ಹೋಗಬೇಕು, ಲೈನ್ ಎಳೆಯಬೇಕು. ಆರು ತಿಂಗಳಲ್ಲಿ ಟಾರ್ಗೆಟ್ ಏನಿರುತ್ತದೋ ಅದನ್ನು ಮುಗಿಸುವುದಕ್ಕಾಗುವುದಿಲ್ಲ. ಮೈದಾನ ಪ್ರದೇಶದಲ್ಲಿ ವರ್ಷವಿಡೀ ರೋಡ್ ವರ್ಕ್ ಆಗಲಿ, ಎಲೆಕ್ಟ್ರಿಫಿಕೇಷನ್ ವರ್ಕ್ ಆಗಲಿ ಮಾಡುವುದಕ್ಕೆ ಅವಕಾಶ ಇದೆ ಆದರೆ ಮಲೆನಾಡಿನಲ್ಲಿ ವರ್ಷವಿಡೀ ಈ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಇದು ಇಲ್ಲಿಯ ನೌಕರರ ಮತ್ತು ಇಲಾಖೆಯವರ ಗಮನಕ್ಕೆ ಹೋಗುವುದಿಲ್ಲ. ಆರು ತಿಂಗಳಲ್ಲಿ ಕೆ.ಇ.ಬಿ. ತನ್ನ ಕೆಲಸಗಳನ್ನು ಮುಗಿಸುವುದಕ್ಕಾಗುವುದಿಲ್ಲ. ಇಂಥ ಸಂದರ್ಭದಲ್ಲಿ ಹೆಚ್ಚು ಟಾರ್ಗೇಟ್ ಫಿಕ್ಸ್‌ಮಾಡಿ, ಮಲೆನಾಡು ಪ್ರದೇಶಗಳಲ್ಲಿ ಭಾಗ್ಯಜ್ಯೋತಿ ಸ್ಕೀಮಾಗಲೀ ರೂರಲ್ ಎಲೆಕ್ಟ್ರಿಫಿಕೇಶನ್ ಸ್ಕೀಮ್ ಆಗಲೀ, ಪಂಪ್‌ಸೆಟ್ ಅಳವಡಿಸುವುದಾಗಲೀ ಮುಂತಾದ ಕೆಲಸಗಳನ್ನು ಮಾಡುವಾಗ ಪ್ರಿಯಾರಿಟಿಯನ್ನು ಮಲೆನಾಡಿನ ವರಿಗೆ ಕೊಟ್ಟು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಹಾಗೂ ಕೃಷಿ ಕುರಿತಂತೆ ವೈಜ್ಞಾನಿಕ ಶಿಕ್ಷಣ ನೀಡಲು ಹೆಚ್ಚಿನ ಒಂದು ಆದ್ಯತೆಯನ್ನು ನಮ್ಮ ಸರ್ಕಾರ ತೋರಿಸಿ, ಮಂಡ್ಯದಲ್ಲಿ ಕೃಷಿ ಕಾಲೇಜನ್ನು ಮತ್ತು ಮೂಡಿಗೆರೆಯಲ್ಲಿ ಹಾರ್ಟಿಕಲ್ಚರ್ ಕಾಲೇಜನ್ನು ಮಾಡುವುದಕ್ಕೆ ಸರ್ಕಾರ ಮುಂದೆ ಬಂದು ಅದಕ್ಕೆ ಬೇಕಾದಷ್ಟು ಹಣವನ್ನು ಬಜೆಟ್‌ನಲ್ಲಿ ಅಳವಡಿಸಿದ್ದಾರೆ. ಅದಕ್ಕಾಗಿ ಚಿಕ್ಕಮಗಳೂರು ಜಿಲ್ಲೆ ಮತ್ತು ಮೂಡಿಗೆರೆಯವರ ಪರವಾಗಿ ಅಭಿನಂದಿಸುತ್ತೇನೆ. ನನ್ನನ್ನು ಮಂಡ್ಯದ ಸೊಸೆ ಎಂದು ಶ್ರೀಮತಿ ದಮಯಂತಿ ಬೋರೇಗೌಡ ಅವರು ಹೇಳುತ್ತಿದ್ದಾರೆ. ಮಂಡ್ಯದ ಪರವಾಗಿ ಸರ್ಕಾರವನ್ನು ಕೃಷಿ ಕಾಲೇಜು ಕೊಟ್ಟಿರುವುದರಿಂದ ಅಭಿನಂದಿಸುತ್ತೇನೆ.

ಇಡೀ ರಾಜ್ಯದಲ್ಲಿ ಹಿಂದುಳಿದ ಕೆಲವು ಪ್ರದೇಶಗಳೆಂದು ಮಲೆನಾಡು ಪ್ರದೇಶವಾದ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಮಂಗಳೂರು ಹೇಳಬೇಕಾಗಿದೆ. ಈ ಜಿಲ್ಲೆಗಳ ಅಭಿವೃದ್ಧಿ ಸಾಕಷ್ಟು ಆಗಬೇಕಾಗಿದೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ತಾವು ಶಿಕ್ಷಣ ಮಂತ್ರಿಯಾಗಿದ್ದಾಗ ಒಂದು ಸಾರಿ ನನ್ನ ಕ್ಷೇತ್ರಕ್ಕೆ ಬಂದಿದ್ದು ನೆನಪಿದೆ. ಸುಮಾರು 5 ಕಿಲೋಮೀಟರ್ ಹೋಗ್ಲಾಡಿಗೆ ನಡೆದುಕೊಂಡು ಹೋಗಿದ್ದಿರಿ. ಆ ರಸ್ತೆ ಇನ್ನೂ ಆಗಿಲ್ಲ. ನಾವು ಈ ರಸ್ತೆಗೆ ದುಡ್ಡು ಕೊಡಿ ಎಂದು ಕೇಳುತ್ತಿದ್ದೇವೆ. ಜಿಲ್ಲಾಪರಿಷತ್ತಿನಲ್ಲಿ ದುಡ್ಡಿಲ್ಲ ಎಂದು ಹೇಳುತ್ತಾರೆ. ಯಾವುದೇ ವಿಲೇಜ್ ರೋಡ್ಸ್‌ಗೆ ಜಿಲ್ಲಾಪರಿಷತ್ತಿನಲ್ಲಿ ದುಡ್ಡಿರುವುದಿಲ್ಲ. ಕೆಲವಾರು ಮಲೆನಾಡಿನ ರಸ್ತೆಗಳಿಗೆ ಬೇಸಿಗೆಯಲ್ಲಿ ಸ್ವಲ್ಪ ಮಣ್ಣು ಹಾಕಿಬಿಡುತ್ತಾರೆ, ಜೆಲ್ಲಿ ಹಾಕುತ್ತಾರೆ. ಒಂದು ದೊಡ್ಡ ಮಳೆ ಬಂದರೆ ಐದಾರು ಇಂಚು ಮಳೆ ಬಂದರೆ ಆ ರಸ್ತೆಯ ಮಣ್ಣು, ಜೆಲ್ಲಿ ಎಲ್ಲಾ ತೊಳೆದುಕೊಂಡು ಹೋಗಿರುತ್ತದೆ. ಮುಂದಿನ ವರ್ಷ ಆ ರಸ್ತೆಯಲ್ಲಿ ಅಲ್ಲಲ್ಲೇ ಗುಂಡಿಗಳಾಗಿ ಜೆಲ್ಲಿಗಳು ಎದ್ದಿರುತ್ತವೆ., ಆದ್ದರಿಂದ ಈ ರಸ್ತೆಗಳ ಅಭಿವೃದ್ಧಿ ಹೆಚ್ಚಾಗಿ ಆಗಬೇಕಾಗುತ್ತದೆ. ಇದೂ ಅಲ್ಲದೆ, ನಾನು ಹೇಳಿದಹಾಗೆ, ರೂರಲ್ ಎಲೆಕ್ಟ್ರಿಫಿಕೇಷನ್ ಕೆಲಸ ಆಗಬೇಕಾಗುತ್ತದೆ. ನಮ್ಮಲ್ಲಿ ರೆವಿನ್ಯೂ ವಿಲೇಜ್ ಎಂದರೆ ಅದಕ್ಕೆ 8-10 ಹ್ಯಾಮ್ಲೆಟ್ಸ್ ಬರುತ್ತದೆ. ರೆವಿನ್ಯೂ ವಿಲೇಜಸ್‌ನಲ್ಲಿ ಎಲೆಕ್ಟ್ರಿಫಿಕೇಷನ್ ಆಗಿದ್ದರೂ ಸಹ ಹ್ಯಾಮ್ಲೆಟ್ಸ್ ಮತ್ತು ಹರಿಜನ ಬಸದಿಗಳು ಉಳಿದು ಹೋಗಿವೆ. ಮಲೆನಾಡು ಡೆವಲಪ್ಮೆಂಟ್ ಬೋರ್ಡ್ ಮಾಡುವುದರಿಂದ ಮಲೆನಾಡು ಡೆವಲಪ್ಮೆಂಟ್ ಸಾಕಷ್ಟು ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಈಗ 10 ಕೋಟಿ ರೂಪಾಯಿ ಅದಕ್ಕೆ ಏನು ಕೊಟ್ಟಿದ್ದೀರಿ ಅದು ಸಾಲದು ಎಂದು ನನ್ನ ಭಾವನೆ. ಮುಂದಿನ ವರ್ಷ ಇದರ ಮೂರು ಪಟ್ಟು ಹಣವನ್ನು ಮಲೆನಾಡು ಅಭಿವೃದ್ಧಿಗೆ ಕೊಟ್ಟು ನಮ್ಮ ಅಧಿಕಾರಾವಧಿಯಲ್ಲಿ ಮಲೆನಾಡು ಡೆವಲಪ್‌ಮೆಂಟ್ ಸಾಕಷ್ಟು ಆಗಬೇಕೆಂದು ನನ್ನ ಕಳಕಳಿಯ ಅಭಿಲಾಷೆ. ಅದಕ್ಕೆ ಸರ್ಕಾರ ಸಾಕಷ್ಟು ಸ್ಪಂದಿಸಿ, ಸಾಕಷ್ಟು ಹಣ ಕೊಟ್ಟಿದ್ದೇ ಆದರೆ ಮಲೆನಾಡಿನ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆ.

ಅದಕ್ಕಾಗಿ ನಾನು ಮಲೆನಾಡಿನ ಜಿಲ್ಲೆಗಳ ಪರವಾಗಿ ಸರ್ಕಾರವನ್ನು ಮತ್ತು ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ತಮಗೂ ಗೊತ್ತಿದೆ, ಮಲೆನಾಡು ಡೆವಲಪ್‌ಮೆಂಟ್ ಬೋರ್ಡ್ ಆಗಬೇಕೆಂಬ ವಿಷಯ ಅರ್ಜಿ ಸಮಿತಿಯಲ್ಲೂ ಬಂದಿತ್ತು. ತಾವು ಅರ್ಜಿ ಸಮಿತಿಯ ಅಧ್ಯಕ್ಷರಾಗಿದ್ದಾಗ ನಾನು ಸದಸ್ಯಳಾಗಿದ್ದಾಗ ಇದರ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದೇವೆ. ಆದ್ದರಿಂದ ನಾವು ಆ ಸಮಿತಿ ಮೂಲಕವೂ ಸರ್ಕಾರವನ್ನು ಅಭಿನಂದಿಸಬೇಕಾಗುತ್ತದೆ. ರಾಜ್ಯಪಾಲರ ಭಾಷಣದಲ್ಲಿ ಹೆಣ್ಣುಮಕ್ಕಳಿಗೆ, ಅದರಲ್ಲೂ ವಿಧವೆಯರಿಗೆ, ಮದುವೆಯಾದ 30 ವರ್ಷ ಮೀರಿದ ಹೆಣ್ಣುಮಕ್ಕಳಿಗೆ ಉದ್ಯೋಗದಲ್ಲಿ ಹೆಚ್ಚಿನ ಆದ್ಯತೆ ಕೊಡುತ್ತೇವೆಂದು ಹೇಳಿರುವುದು ಸಂತೋಷದ ಸಂಗತಿ. ನಿಜವಾಗಿಯೂ ಇದು 100 ಪರ್ಸೆಂಟ್ ಆಗಬೇಕು. ಈ ವರ್ಷ ಸಾರ್ಕ್ ಹೆಣ್ಣುಮಗುವಿನ ವರ್ಷ ಎಂದು ಆಚರಿಸಲಾಗುತ್ತಿದೆ. ಅದನ್ನು ಮನಗಂಡು ಈ ನಿರ್ಧಾರವನ್ನು ಸರ್ಕಾರ ತೆಗೆದುಕೊಂಡಿದೆ ಎಂದರೆ ತಪ್ಪಾಗಲಾರದು. ನಮ್ಮ ಸಮಾಜದ ದೃಷ್ಟಿಯಲ್ಲಿ ಹೆಣ್ಣುಮಕ್ಕಳ ಬಗ್ಗೆ ಹೇಗಿದೆ ಎಂದು ತಮಗೇ ಗೊತ್ತಿದೆ, "ಮಗ ಉಂಡರೆ ಕೇಡಿಲ್ಲ, ಮಳೆ ಹುಯ್ದರೆ ಕೇಡಿಲ್ಲ" ಎನ್ನುವ ಗಾದೆಯನ್ನು ನೀವು ಅರ್ಥ ಮಾಡಿಕೊಳ್ಳುತ್ತೀರ ಎಂದುಕೊಂಡಿದ್ದೇನೆ. ಹೀಗೆ ಹೇಳುವಾಗ ಮಾನ್ಯ ಶಿವರಾಮೇಗೌಡರು ನಗುತ್ತಿದ್ದಾರೆ. ಅವರ ಮನೆಯಲ್ಲಿ...

ಶ್ರೀ ಎಲ್.ಆರ್. ಶಿವರಾಮೇಗೌಡ : ದಯಮಾಡಿ ಕ್ಷಮಿಸಬೇಕು. ಬೇರೆ ವಿಚಾರದಲ್ಲಿ ನಾನು ನಗುತ್ತಿದ್ದೇನೆ.

ಶ್ರೀಮತಿ ಮೋಟಮ್ಮ : ನಿಮ್ಮ ಅಕ್ಕತಂಗಿಯರು ಇದ್ದರೆ, ಅವರನ್ನೆಲ್ಲ ನೆಗ್ಲೆಕ್ಟ್ ಮಾಡಿ ಗಂಡುಮಗ ಚೆನ್ನಾಗಿ ಉಣ್ಣಲಪ್ಪ, ಅವನು ಮನೆಯ ಹೆಗ್ಗಂಬ, ಅವನು ಅಚ್ಚುಕಟ್ಟಾಗಿ ಬೆಳೆದರೆ ಮನೆಯನ್ನು ಚೆನ್ನಾಗಿ ಬೆಳಗಿಸುತ್ತಾನೆ, ನಮ್ಮ ಕುಲ ಉದ್ಧಾರ ಮಾಡುತ್ತಾನೆ ಎನ್ನುವ ದೃಷ್ಟಿಯಿಂದ ತಂದೆತಾಯಿಗಳು ಬೆಳೆಸುತ್ತಾರೆ. ಆದರೆ ಹೆಣ್ಣುಮಕ್ಕಳಿಗೆ, ಕುಟುಂಬದ ಬಗ್ಗೆ ಹೆಚ್ಚಿನ ಮಟ್ಟದ ಆಸಕ್ತಿ ಇದ್ದರೂ, ವಿಶ್ವಾಸ ಇದ್ದರೂ, ಮನೆಯ ಜವಾಬ್ದಾರಿಯನ್ನು ಅವರು ಹೊತ್ತುಕೊಂಡರೂ ಅದನ್ನು ಎಲ್ಲ ತಂದೆ ತಾಯಿಗಳು ಮರೆತುಬಿಡುತ್ತಾರೆ. ಇಂತಹ ಸಂದರ್ಭದಲ್ಲಿ...

ಶ್ರೀ ಆರ್.ಎನ್. ನಾಯಕ್ : ಶ್ರೀಮತಿ ಮೋಟಮ್ಮನವರ ವಾದವನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ, ಈಗ ಹೆಣ್ಣುಮಕ್ಕಳ ವಿಚಾರ ಬಂದ ಕೂಡಲೇ, ಮಹಿಳೆಯಾದವರು ಅವರ ಪರವಾಗಿ ಹೇಳುವುದು ಸಹಜ. ಆದರೆ ಗಂಡಸರು ಹಾಗೆ ನೋಡಿಕೊಳ್ಳುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಮಕ್ಕಳ ವಿಚಾರದಲ್ಲಿ ಹೆಣ್ಣುಮಕ್ಕಳನ್ನು ಕಡೆಗಣಿಸಿ, ಗಂಡುಮಕ್ಕಳನ್ನು ಮಾತ್ರ ಹಾಗೆ ನೋಡಿಕೊಳ್ಳುತ್ತಾರೆಂದು ಹೇಳುವುದಕ್ಕಾಗುವುದಿಲ್ಲ.

ಮೊದಲನೆಯದಾಗಿ ಮಹಿಳೆಯರೇ ಮಹಿಳೆಯರನ್ನು ಶೋಷಿಸುವುದು ಈ ಸಮಾಜದಲ್ಲಿ ಇದೆ. ಎರಡನೆಯದಾಗಿ, ಎಲ್ಲರೂ ಹಾಗೆ ಇಲ್ಲ. ನನಗೆ 2 ಹೆಣ್ಣುಮಕ್ಕಳು, ಒಂದು ಗಂಡು ಮಗು ಇದೆ. ನಾನು ಮಗನಿಗಿಂತಲೂ ಹೆಣ್ಣುಮಕ್ಕಳಿಗೆ ಹೆಚ್ಚು ಖರ್ಚು ಮಾಡುತ್ತಿದ್ದೇನೆ. ಅವರಿಗೆ ಹೆಚ್ಚು ಸೌಲಭ್ಯವನ್ನು ಒದಗಿಸುತ್ತಿದ್ದೇನೆ. ತಮ್ಮ ಪರಿಸ್ಥಿತಿ ಹೇಗಿದೆಯೋ ನನಗೆ ಗೊತ್ತಿಲ್ಲ. ವಿಶೇಷವಾಗಿ ಹೆಣ್ಣುಮಕ್ಕಳ ಬಗ್ಗೆ ಗಮನ ಕೊಟ್ಟು, ಗಂಡು ಮಕ್ಕಳನ್ನು ಕೇವಲ ದುಡಿಯುವುದಕ್ಕೆ ಹಚ್ಚುವುದು ಒಂದು ಪ್ರವೃತ್ತಿ ಆಗಿದೆ. ನಾಳೆ ಮೋಟಮ್ಮನವರೂ ಹಾಗೆ ಮಾಡುತ್ತಾರೆ. ಮೋಟಮ್ಮನವರಿಗೆ ಹೆಣ್ಣುಮಕ್ಕಳು ಇಲ್ಲ. ಅವರಿಗೆ ಹೆಣ್ಣುಮಕ್ಕಳು ಇಲ್ಲದೆ ಇರುವುದರಿಂದ ಬಹಳ ಕಾಳಜಿ ವಹಿಸುತ್ತಿದ್ದಾರೆ.

ಉಪಾಧ್ಯಕ್ಷರು : ಅವರಿಗೆ ಒಬ್ಬಳು ಮಗಳು ಇದ್ದಾಳೆ.

ಶ್ರೀ ಆರ್.ಎನ್. ನಾಯಕ್ : ಆದ್ದರಿಂದ ಆ ವಾದವನ್ನು ಅವರು ತಲೆಯಲ್ಲಿ ಇಟ್ಟುಕೊಳ್ಳಬಾರದು ಎಂದು ನಾನು ಅವರನ್ನು ವಿನಂತಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಅತ್ತೆಯಾಗಿ, ತಾಯಿಯಾಗಿ, ಸೊಸೆಯಾಗಿ ಶೋಷಣೆ ಮಾಡುತ್ತಿರುವವರು ಹೆಣ್ಣುಮಕ್ಕಳು. ಜೀವನದ ಎಲ್ಲಾ ರಂಗದಲ್ಲಿ ಹೆಣ್ಣುಮಕ್ಕಳಿಂದಲೇ ಹೆಣ್ಣುಮಕ್ಕಳ ಶೋಷಣೆ ನಡೆಯುತ್ತಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರಾದ ಬನ್ನಿಕೋಡ್ ಅವರು ತಾಯಿ ವಿಷಯ, ಸೊಸೆ ವಿಷಯ, ಹೇಳಿದರು. ಆದರೆ ಧರ್ಮಪತ್ನಿ ವಿಚಾರ ಹೇಳಲಿಲ್ಲ. ಅವರು ಎಷ್ಟು ಹೆದರುತ್ತಾರೆ ನೋಡಿ ಅಧ್ಯಕ್ಷರೇ.

ಶ್ರೀ ಆರ್.ಎನ್. ನಾಯಕ್ : ನಾನು ತಾಯಿ ಹೇಳಿದ ಹಾಗೂ ಕೇಳುತ್ತೇನೆ. ಅಕ್ಕತಂಗಿಯರು ಹೇಳಿದ ಹಾಗೂ ನಾನು ಕೇಳುತ್ತೇನೆ. ಹೆಂಡತಿ ಹೇಳಿದ್ದನ್ನೂ ನಾನು ಕೆಲವು ಸಲ ಕೇಳುತ್ತೇನೆ. ಹಾಗಿದ್ದಾಗ ತೊಂದರೆ ಏನಿದೆಯೆಂದು ನನಗೆ ಅರ್ಥವಾಗುವುದಿಲ್ಲ. ಸಮಾಜದಲ್ಲಿ ಎಲ್ಲಾ ಕಡೆ ಇದೇ ಪರಿಸ್ಥಿತಿ ಇದ್ದರೆ ಮೋಟಮ್ಮನವರ ಅಭಿಪ್ರಾಯ ತಪ್ಪಾಗುತ್ತದೆ.

ಶ್ರೀಮತಿ ಮೋಟಮ್ಮ : ಮಾನ್ಯ ಉಪಾಧ್ಯಕ್ಷರೇ, ಇದು ನನ್ನ ಒಬ್ಬಳ ಅಭಿಪ್ರಾಯ ಅಲ್ಲ, ತಮಗೆ ಗೊತ್ತಿದೆ. ಇಡೀ ಏಷ್ಯನ್ ಕಂಟ್ರೀಸ್ ಅವರು ಇದನ್ನು ವಿಚಾರ ಮಾಡಿದ್ದಾರೆ. ಅದಕ್ಕಾಗಿ ಈ ವರ್ಷವನ್ನು ಸಾರ್ಕ್ ಹೆಣ್ಣುಮಕ್ಕಳ ವರ್ಷ ಎಂದು ಮಾಡಿದ್ದಾರೆ. ಟಿ.ವಿ.ಗಳಲ್ಲಿ ನಾವು ಪ್ರತಿದಿನ ಅಡ್ವರ್ ಟೈಸ್‌ಮೆಂಟ್ ಹೆಣ್ಣುಮಕ್ಕಳ ಬಗ್ಗೆ ನೋಡುತ್ತಿದ್ದೇವೆ. ಅದರಲ್ಲಿ ಹೆಣ್ಣುಮಗು ಸಪ್ಪೆ ಮೋರೆ ಹಾಕಿಕೊಂಡು

ಕೂತಿರುವುದನ್ನು ಗಂಡುಮಕ್ಕಳಿಗೆ ತಾಯಿ ಸಾಕಷ್ಟು ತಿನ್ನಿಸುತ್ತಿರುವುದನ್ನು ನೋಡಿದ್ದೇವೆ. ಹೆಣ್ಣುಮಕ್ಕಳು ಸೌದೆ ಹೊತ್ತು ತರುತ್ತಿರುವ ಚಿತ್ರವನ್ನು ನೋಡಿದ್ದೇವೆ.

ಶ್ರೀ ಡಿ.ಎ. ಚಿನ್ನಪ್ಪ : ತಾಯಿ ಹೆಣ್ಣು ಮಗುವನ್ನು ಕಡೆಗಾಣಿಸುತ್ತಾಳೆ. ಗಂಡು ಮಕ್ಕಳನ್ನು ಚೆನ್ನಾಗಿ ಕಾಣುತ್ತಾಳೆ. ಇಲ್ಲಿ ತಾಯಿಯದೇ ತಪ್ಪು. ಗಂಡಸರ ತಪ್ಪು ಏನೂ ಇಲ್ಲ.

ಶ್ರೀ ಆರ್.ಎನ್. ನಾಯಕ್ : ಹಾಗೆ ಮಾಡಬಾರದು, ಎಲ್ಲವನ್ನೂ, ಎಲ್ಲರನ್ನೂ ಸರಿಯಾಗಿ ನೋಡಿಕೊಳ್ಳುವವಳೇ ತಾಯಿ. ಅವರನ್ನು ತಾಯಿ ಸಮಾನ ಎಂದು ತಿಳಿದುಕೊಳ್ಳಬೇಕು.

ಶ್ರೀ ಡಿ.ಎ. ಚಿನ್ನಪ್ಪ : ಮೋಟಮ್ಮನವರೇ ನಿಮಗೆ ಸೊಸೆ ಬಂದ ಮೇಲೆ ಗೊತ್ತಾಗುತ್ತದೆ.

ಶ್ರೀಮತಿ ಮೋಟಮ್ಮ : ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡವರ ಹಾಗೆ ಏಕೆ ಪ್ರವೋಕ್ ಆಗುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣಿಯವರೇ, ತಾವು ಶ್ರೀಮತಿ ಮೋಟಮ್ಮನವರಿಗೆ ರಕ್ಷಣೆ ಕೊಡಬೇಕು. ಅಷ್ಟು ಜನ ನಿಂತು ಮಾತನಾಡುವುದು ಸರಿಯಲ್ಲ. ನೀವು ರಕ್ಷಣೆ ಕೊಡದಿದ್ದರೆ ನಾವಾದರೂ ಕೊಡಬೇಕಾಗುತ್ತದೆ. ಅಷ್ಟು ಜನ ನಿಂತು ಮಾತನಾಡಿದರೆ ಹೇಗೆ?

ಉಪಾಧ್ಯಕ್ಷರು : ನೀವು ಇದ್ದೀರಲ್ಲಾ, ಎಲ್ಲರಿಗೂ ರಕ್ಷಣೆ ಕೊಡುವವರು, ಸಹಾಯ ಮಾಡುವವರು.

ಶ್ರೀಮತಿ ಮೋಟಮ್ಮ : ಸಮಾಜದ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ನಮ್ಮ ಹೆಣ್ಣುಮಕ್ಕಳಿಗೆ ಜೀವನದಲ್ಲಿ ಏನಾದರೂ ಕಷ್ಟ ಬಂದರೆ ತಂದೆ ಮನೆ ಇಲ್ಲವೇ ಗಂಡನ ಮನೆಯನ್ನು ಆಶ್ರಯಿಸುತ್ತಾರೆ. ತಂದೆ ತಾಯಿಗಳು ಇರುವವರೆಗೂ ಹೆಣ್ಣುಮಕ್ಕಳಿಗೆ ರಕ್ಷಣೆ ಸಿಗುತ್ತದೆ. ತಂದೆ ತಾಯಿ ಸತ್ತ ನಂತರ ಯಾರು ರಕ್ಷಣೆ ಕೊಡುತ್ತಾರೆ.

ಶ್ರೀ ಆರ್.ಎನ್.ನಾಯಕ್ : ತಂದೆ ತಾಯಿಗಳ ನಂತರ ಅಣ್ಣ ತಮ್ಮಂದಿರಿದ್ದರೆ ರಕ್ಷಣೆ ಕೊಟ್ಟೇ ಕೊಡುತ್ತಾರೆ. ಏಕೆ ಕೊಡುವುದಿಲ್ಲ.

ಶ್ರೀ ಮೋಟಮ್ಮ : ಹೆಣ್ಣುಮಕ್ಕಳು ತನ್ನ ಕಾಲ ಮೇಲೆ ನಿಂತು ಜೀವನ ಮಾಡುವುದಕ್ಕೆ ಸಮಾಜದಲ್ಲಿ ಬದುಕುವುದಕ್ಕೆ ಅವಳಿಗೆ ಧೈರ್ಯ ಬರುವುದಕ್ಕೆ ಸಹಾಯಕವಾಗಿ ಕೆಲಸ ಇರಬೇಕು. 30 ವರ್ಷದ ಹೆಣ್ಣುಮಕ್ಕಳಿಗೆ, ವಿಧವೆಯರಿಗೆ ಉದ್ಯೋಗದಲ್ಲಿ ಶೇಕಡ 30 ಪರ್ಸೆಂಟ್ ಅನ್ನು ನೀಡುತ್ತೇವೆಂದು ಹೇಳಿರುವುದು ನಿಜಕ್ಕೂ ಮೆಚ್ಚುವಂತಹ ವಿಷಯ. ಇದಕ್ಕಾಗಿ ನಾನು ಕರ್ನಾಟಕದ ಎಲ್ಲಾ ಹೆಣ್ಣು ಮಕ್ಕಳ ಪರವಾಗಿ ಸರಕಾರವನ್ನು ಅಭಿನಂದಿಸಬೇಕಾಗಿದೆ. ಆಮೇಲೆ ವುಮೆನ್ ಡೆವಲಪ್ ಮೆಂಟ್ ಕಾರ್ಪೋರೇಷನ್ ಎಂದು ಇದೆ. ಹೆಣ್ಣು ಮಕ್ಕಳ ಬಗ್ಗೆ ಅದು ಸಾಕಷ್ಟು ಯೋಜನೆಯನ್ನು ಹಾಕಿಕೊಂಡಿದೆ. ಆದರೂ ಕೂಡ ಸಧ್ಯಕ್ಕೆ ಅದಕ್ಕೆ ಏನೂ ಕೆಲಸವಿಲ್ಲವೆಂದು ನನಗನ್ನಿಸುತ್ತದೆ. ಇನ್ನು ಎಸ್.ಜಿ.ಆರ್. ಪ್ರಾಜೆಕ್ಟ್‌ನಲ್ಲಿ ಸುಮಾರು 75,000 ಗ್ರಾಮೀಣ ಹೆಣ್ಣುಮಕ್ಕಳಿಗೆ ತರಬೇತಿ ಕೊಡುವ ಕಾರ್ಯಕ್ರಮ ಇದೆ. ಅದರಲ್ಲಿ ಹೆಣ್ಣುಮಕ್ಕಳು ತಮ್ಮ ಅಭಿವೃದ್ಧಿಗೆ ತಕ್ಕ ಹಾಗೆ ಟ್ರೈನಿಂಗ್ ಮಾಡಿಕೊಂಡು ತಮ್ಮ ಕಾಲ ಮೇಲೆ ನಿಂತು ತಾವು ದುಡಿಮೆಯನ್ನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು 5 ನೇ ತರಗತಿಯವರೆಗೆ ಓದಿದ್ದಾರೆ. ಈ ಪ್ರಾಜೆಕ್ಟ್‌ನಿಂದ ಅವರಿಗೆ ಸಹಾಯವಾಗುತ್ತದೆ.

ಸುಮಾರು 21 ವರ್ಷದಿಂದ 30 ವರ್ಷದೊಳಗಿನ ಹೆಣ್ಣುಮಕ್ಕಳಿಗೆ ಇದು ಅನುಕೂಲವಾಗುತ್ತದೆ. ಆದರೆ ಈ ಯೋಜನೆ ನಮ್ಮ ರಾಜ್ಯದಲ್ಲಿ ಇನ್ನೂ ಜಾರಿಗೆ ಬಂದಿಲ್ಲ, ತಮಿಳುನಾಡಿನಲ್ಲಿ ಜಾರಿಯಲ್ಲಿದೆ. ಇದನ್ನು ತಕ್ಷಣ ಕರ್ನಾಟಕದಲ್ಲಿ ಜಾರಿಗೆ ತರಬೇಕು. ಸುಮಾರು 75,000 ಹೆಣ್ಣುಮಕ್ಕಳಿಗೆ ಉಪಯೋಗವಾಗುವಂತಹ ಒಂದು ಯೋಜನೆ ಇದಾದ್ದರಿಂದ ಇದನ್ನು ತಕ್ಷಣ ಜಾರಿಗೆ ತರುವುದು ಒಳ್ಳೆಯದೆಂದು ನನ್ನ ಅನಿಸಿಕೆ. ಇನ್ನು ಸಿ ಮತ್ತು ಡಿ. ವರ್ಗದ ಗುಂಪಿನ ನೌಕರ ಹುದ್ದೆಗೆ ನೇರ ನೇಮಕಾತಿ ಮಾಡುತ್ತೇವೆಂದು ಹೇಳಿರುವಂಥಾದ್ದು ಮೆಚ್ಚುವಂತಹ ವಿಷಯ. ಇನ್ನು ಎಸ್.ಸಿ.ಎಸ್.ಟಿಗೆ ಬ್ಯಾಕ್ ಲಾಗ್ಸ್ ಏನು ಇದೆ, ಅದನ್ನು ಇನ್ನು 6 ತಿಂಗಳಲ್ಲಿ ತುಂಬಿಸುತ್ತೇವೆಂದು ಸರಕಾರ ಹೇಳಿದೆ. ಇದು ಬರೀ ಹೇಳಿಕೆಯಾಗದೆ ಆದಷ್ಟು ಬೇಗ ನೇರ ನೇಮಕಾತಿ ಮಾಡಿ ಬ್ಯಾಕ್ ಲಾಗ್ಸ್ ಏನು ಇದೆ ಅದನ್ನು ತುಂಬಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತೇನೆ.

ಈಗ ನೇಮಕಾತಿಗೆ ಸರಕಾರ ವಯೋಮಿತಿಯನ್ನು ಹೆಚ್ಚಿಸಿರುವುದರಿಂದಾಗಿ ಎಷ್ಟೋ ಜನರಿಗೆ ವಿಜ್ ಬಾರ್ ಆಗಿ ಇನ್ನು ನಮಗೆ ಕೆಲಸ ಸಿಗುವುದಿಲ್ಲವೆಂದಿದ್ದ ನಿರುತ್ಸಾಹಿಗಳಿಗೆ ಹೆಚ್ಚಿನ ಒಂದು ಸಹಾಯವಾಗುತ್ತದೆಂದು ನಾನು ನಂಬಿದ್ದೇನೆ. ಇನ್ನು ಡಾಕ್ಟರ್ ಅಂಬೇಡ್ಕರ್ ರವರ ಶತಮಾನೋತ್ಸವ ಸಂದರ್ಭದಲ್ಲಿ ಹರಿಜನಗಿರಿಜನರಿಗಾಗಿ ಒಂದೊಂದು ತಾಲ್ಲೂಕಿನಲ್ಲಿ ಸಾವಿರ ಮನೆಗಳನ್ನು 15 ಸಾವಿರ ರೂಪಾಯಿಗಳಲ್ಲಿ ಕಟ್ಟಿಸುತ್ತಿರುವುದು ಮೆಚ್ಚುವಂತಹ ವಿಷಯ. ಅದನ್ನು ಕೂಡಲೇ ಜಾರಿಗೆ ತಂದು ಸರಕಾರ ಈ ಬಗ್ಗೆ ಕೆಲಸ ಮಾಡಿದರೆ ಹೆಚ್ಚು ಜನರು ಇದರ ಉಪಯೋಗವನ್ನು ಪಡೆಯುತ್ತಾರೆ. ಮತ್ತು ಅವರು ಸರಕಾರದ ಬಗ್ಗೆ ಹೆಚ್ಚು ಕಳಕಳಿಯನ್ನು ಇಟ್ಟುಕೊಳ್ಳಲಿಕ್ಕೆ ಸಾಧ್ಯವಾಗುತ್ತದೆಂದು ನನ್ನ ಅನಿಸಿಕೆ. ಮನುಷ್ಯನಿಗೆ ಬಹಳ ಮುಖ್ಯವಾಗಿ ಬೇಕಾಗಿರುವುದು ಮನೆ, ನೀರು ಮತ್ತು ಅವರ ಮಕ್ಕಳಿಗೆ ಶಿಕ್ಷಣ. ಈಗ ಮನೆ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಕುಡಿಯುವ ನೀರಿನ ಬವಣೆ ಎಲ್ಲಾ ಕಡೆ ಇದೆ. ಈ ಮಲೆನಾಡಿನಲ್ಲಿ ಬಹಳ ನೀರಿನ ಸಮಸ್ಯೆ ಇದೆ. ಸಮುದ್ರಕ್ಕೆ ಒಡೆತನ ಉಪ್ಪಿಗೆ ಬಡತನ ಎನ್ನುವ ಪರಿಸ್ಥಿತಿ ಇದೆ. ಅಲ್ಲಿ 6 ತಿಂಗಳು ಮಳೆ ಸುರಿದು, ಬೇಸಿಗೆಯಲ್ಲಿ ಎಲ್ಲೂ ಇಲ್ಲದ ನೀರಿನ ಬರಗಾಲ ಇದೆ. ನಮ್ಮಲ್ಲಿ ಬೇಸಿಗೆ ಕಾಲದಲ್ಲಿ ಬೋರ್ ವೆಲ್ ಡ್ರೈ ಆಗುತ್ತದೆ. ಓಪನ್ ವೆಲ್ ಒಣಗುತ್ತದೆ. ಕುಡಿಯುವುದಕ್ಕೆ ನೀರೇನಾದರೂ ಕೊಡಬೇಕೆಂದು ಇದ್ದರೆ ಸಣ್ಣ ಪುಟ್ಟ ಹಳ್ಳಕೊಳ್ಳಗಳ ಪಕ್ಕದಲ್ಲಿ ಓಪನ್ ವೆಲ್ ಅನ್ನು ಮಾಡಿ ಪೈಪ್ ಕನೆಕ್ಷನ್ ಕೊಟ್ಟು ನೀರನ್ನು ತೆಗೆದುಕೊಳ್ಳಬಹುದು.

ಜಿಲ್ಲಾ ಪರಿಷತ್ತಿನವರು ಆ ಕೆಲಸವನ್ನು ಮಾಡಬೇಕು. ಪೈಪ್ ವಾಟರ್ ಸಪ್ಲೈಗೆ ನಮ್ಮ ಹತ್ತಿರ ಸಾಕಷ್ಟು ಹಣ ಹತ್ತಿರವಿಲ್ಲವೆಂದು ಜಿಲ್ಲಾ ಪರಿಷತ್ತಿನವರು ಹೇಳುತ್ತಾರೆ. ಏನಾದರೂ ಮಾಡಿದರೆ ಒಂದೊ ಎರಡೊ ಸ್ಕೀಮ್ ಅನ್ನು ಒಂದೊಂದು ತಾಲ್ಲೂಕಿನಲ್ಲಿ ಮಾಡುತ್ತಾರೆ. ಇದು ಎಷ್ಟರಮಟ್ಟಿಗೆ ನೀರಿನ ಬವಣೆಯನ್ನು ನೀಗುತ್ತದೋ ಗೊತ್ತಿಲ್ಲ. ಈ ಸಲಹೆಯನ್ನು ನಾನು ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳ ಮುಂದೆ ಸಹ ಇಟ್ಟಿದ್ದೇನೆ. ಮಲೆನಾಡಿಗೆ ವಿಶೇಷವಾಗಿ ವಾಟರ್ ಸಪ್ಲೈ ಸ್ಕೀಮನ್ನು ಮಾಡಬೇಕು. ಇಲ್ಲವಾದಲ್ಲಿ ಬೇಸಿಗೆಯಲ್ಲಿ ನೀರಿನ ಬರಗಾಲ ಜಾಸ್ತಿಯಾಗಿ ಇದರಿಂದ ಎಷ್ಟೋ ಜನ ಸಾಯಲಿಕ್ಕೆ ಬರುತ್ತದೆಯೇನೊ ಎನ್ನುವ ಪರಿಸ್ಥಿತಿ ಬರಬಹುದು. ಇದರ ಬಗ್ಗೆ ವ್ಯವಸ್ಥೆ ಮಾಡುವ ಭರವಸೆಯನ್ನು ಅವರು ನೀಡಿದ್ದಾರೆ. ಆದು ಆದರೆ ಮಲೆನಾಡಿನ ಜನರು ನಿಜವಾಗಲೂ ಸರಕಾರವನ್ನು ಅಭಿನಂದಿಸುತ್ತಾರೆ. ಇನ್ನು ಡಾ. ಅಂಬೇಡ್ಕರ್ ಶತಮಾನೋತ್ಸವ ವರ್ಷದಲ್ಲಿ ಹೆಚ್ಚಿನ ಹಣವನ್ನು ಸ್ಪೆಷಲ್ ಕಾಂಪೊನೆಂಟ್ ಸ್ಕೀಮ್

ಮೂಲಕ ಅಂದರೆ, ತೆಂಗಿನ ಗಿಡ ಕೊಡುವುದಾಗಲೀ, ಗೊಬ್ಬರ, ಬೀಜ ಇಂತಹವನ್ನು ಕೊಡುವುದರಲ್ಲಿ ಅರ್ಥವಿಲ್ಲವೆಂದು ನನ್ನ ಅನಿಸಿಕೆ. ಸ್ಪೆಷಲ್ ಕಾಂಪೊನೆಂಟ್ ಸ್ಕೀಮಿನ ಹಣವನ್ನು ಎಲ್ಲಾ ಇಲಾಖೆಗಳಿಂದ ಕ್ರೋಢಿಕರಿಸಿ ಅದನ್ನು ಸಮಾಜ ಕಲ್ಯಾಣ ಇಲಾಖೆಗೆ ಕೊಟ್ಟು ಮಕ್ಕಳ ಓದಿಗಾಗಿ ಖರ್ಚು ಮಾಡಬೇಕೆಂದು ನನ್ನ ಮನವಿ.

ಆದ್ದರಿಂದ ಅಲ್ಲಲ್ಲಿ ಅಂದರೆ ರಾಜ್ಯದ ನಾಲ್ಕಾರು ಕಡೆಗಳಲ್ಲಿ, ರಾಜ್ಯದ ನಾಲ್ಕು ಡಿವಿಜನ್‌ಗಳಲ್ಲಿ ಸೈನಿಕ ಶಾಲೆಗಳ ಟೈಪ್‌ನಲ್ಲಿ ರೆಸಿಡೆನ್ಸಿಯಲ್ ಶಾಲೆಗಳನ್ನು ಪ್ರಾರಂಭಮಾಡಿ ಗ್ರಾಮಾಂತರ ಹರಿಜನರ ಮಕ್ಕಳಲ್ಲಿ ಪ್ರತಿಭಾವಂತರನ್ನು ಸೈನಿಕಶಾಲೆಗಳಲ್ಲಿ ರೆಸಿಡೆನ್ಸಿಯಲ್ ಶಾಲೆಗಳಲ್ಲಿಟ್ಟು ಅವರ ಸರ್ವತೋಮುಖ ಅಭಿವೃದ್ಧಿಗೆ ಓದನ್ನು ಒದಗಿಸಲಿಕ್ಕೆ ಸಹಾಯ ಮಾಡಿದರೆ ಖಂಡಿತಾ ಈ ಜನಾಂಗದ ಅಭಿವೃದ್ಧಿಯಾಗುತ್ತದೆ ಹಾಗೂ ನಿಜವಾಗಿಯೂ ಈ ಜನಾಂಗಕ್ಕೆ ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಇಂತಹ ಒಂದು ಸ್ಕೀಮನ್ನು ಸರ್ಕಾರ ಮಾಡಬೇಕು. ಇಂತಹ ಸ್ಕೀಮ್ ಆಂಧ್ರ ಪ್ರದೇಶದಲ್ಲಿ ಜಾರಿಯಲ್ಲಿದೆ. ಅದನ್ನು ತರಿಸಿಕೊಂಡು ಕರ್ನಾಟಕದ ರಾಜ್ಯದಲ್ಲೂ ಸಹ ಈ ಸ್ಕೀಮನ್ನು ಇಂಪ್ಲಿಮೆಂಟ್ ಮಾಡಿದ್ದೇ ಆದರೆ ನಿಜವಾಗಿಯೂ ಅಂಬೇಡ್ಕರ್‌ರವರ ತತ್ವವನ್ನು ಬಾಯಲ್ಲಿ ಹೇಳುವುದಕ್ಕೆ ಬದಲಾಗಿ ಅವರ ತತ್ವಗಳನ್ನು ಇಂಪ್ಲಿಮೆಂಟ್ ಮಾಡಿದರೆ ಅಂಬೇಡ್ಕರ್ ರವ ಆದರ್ಶವನ್ನು ಪಾಲನೆ ಮಾಡಿದಂತಾಗುತ್ತದೆಂದು ಹೇಳುತ್ತೇನೆ. ಕೆಲವಾರು ವಿಷಯಗಳನ್ನು ನಾನು ಸಭೆಯ ಮುಂದಿಟ್ಟಿದ್ದೇನೆ. ಅದರ ಬಗ್ಗೆ ಸರ್ಕಾರ ಗಮನಹರಿಸಿ ಹೆಚ್ಚಿನ ಆದ್ಯತೆಯನ್ನು ನೀಡಿ ಕೆಲಸ ಮಾಡಬೇಕೆಂದು ಹೇಳಿ ನಾನು ಮತ್ತೊಮ್ಮೆ ಸರ್ಕಾರವನ್ನು ಒತ್ತಾಯಿಸಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಉಪಾಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ SRI B.I.PATIL : (Uchagon) : Madam Depauty Speaker, I oppose the Address of the Governor of Karnataka to the State Legislature since it does not contain any new worthwhile schemes for the economic upliftment of the Border area people in particular and the common people of the State in general.

As the Belgaum, the border area is under dispute, the Government has utterly neglected towards the development of it in all respects. I request the Government to give sufficient funds, particularly under Border Area Development Grant, for the implementation of various schemes, improvement of roads and for general development.

(Smt. Motamma in the chair)

Further, Madam, there is always unscheduled power-cut imposed in and around Belgaum Taluka by the Karnataka Electricity Board which is causing lot of hardship to poor farmers. I request the Hon.Chief Minister to direct the concerned authorities to see that there is continuous power supply to Belgaum Taluka.

Madam, the Governer in para 38 of his Address given to the House has said, "The award of Justice Mahajan Commission is final and has urged the Government of India to implement the award in its entirety". We strongly

condemn this statement and the stand of the Government. The Border area people have never accepted the Mahajan Commission recommendations and that is why, the reoresentatives of the MES are being successfully elected in all the elections so far. All Prime Ministors, Home Ministers and other Central leaders in Parliament and in other forums have catagorically said that the Mahajan commission Report is not the final one. The Mahajan Commission recommendations are contrary to the principles of village as a Unit, geographical contiguity and linguistic affinity and wishes of the people of the Border area. I request the Hon.Chief Minister to give a serious thought to this problem and take up this matter with the Central Government for merger of marathi speaking border area in Maharashtra.

With those words I thank the Chair and conclude the speach.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಭಾಧ್ಯಕ್ಷಿಣಿಯವರೆ, ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ವಿರೋಧಿಸುತ್ತಾ ನನ್ನ ಒಂದೆರಡು ಅನಿಸಿಕೆಗಳನ್ನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ನಮ್ಮ ರಾಜ್ಯದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವ ಕಾಲದಲ್ಲಿ ಪೋಲೀಸ್ ಠಾಣೆಗಳು ಮತ್ತು ಸಿಬ್ಬಂದಿಯನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ಗಮನ ಕೊಟ್ಟಿದೆಯೆಂದು ಹೇಳಿದೆ. ಆದರೆ ಇಲ್ಲಿ ಪ್ರಶ್ನೆ ಇರುವಂತಹದ್ದು, ಪೋಲೀಸ್ ಸಿಬ್ಬಂದಿಯನ್ನು ನೇಮಕ ಮಾಡುವುದನ್ನು ಸ್ವಾಗತ ಮಾಡಿದರೂ ಕೂಡ ಇವತ್ತು ಇರತಕ್ಕ ವ್ಯವಸ್ಥೆಯಲ್ಲಿ ಹೆಚ್ಚಿನ ಪೋಲೀಸ್ ಠಾಣೆಗಳಿಗೆ ವಾಹನದ ವ್ಯವಸ್ಥೆಯಿಲ್ಲ. ಗ್ರಾಮಾಂತರ ಪ್ರದೇಶಗಳ ಜನರು ಪೋಲೀಸ್ ಸ್ಟೇಷನ್‌ಗೆ ದೂರು ಕೋಡಲು ಹೋದಾಗ, ಬಹುಶಃ ಹೋದಂಥ ಬಡವರು ಏನಿದ್ದಾರೆ. ಅವರೇ ವಾಹನ ಮಾಡಿ ಅವರನ್ನು ಕರೆದುಕೊಂಡು ಹೋಗಬೇಕಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಿಜವಾಗಿಯೂ ಗ್ರಾಮಾಂತರ ಪ್ರದೇಶದ ಜನ ತುಂಬಾ ತೊಂದರೆ ಅನುಭವಿಸುತ್ತಿದ್ದಾರೆ.

ಆದ್ದರಿಂದ ಪ್ರತಿಯೊಂದು ಪೋಲೀಸ್ ಸ್ಟೇಷನ್‌ಗೆ ವಾಹನ ಅಥವಾ ಜೀಪನ್ನು ಒದಗಿಸುವುದು ತುಂಬಾ ಅಗತ್ಯ ಇದೆ. ಇದರ ಜೊತೆಗೆ ಹೆಚ್ಚಿನ ಸಿಬ್ಬಂದಿಯನ್ನು ಒದಗಿಸಬೇಕಾಗಿದೆ, ಮತ್ತು ಪೋಲೀಸರಿಗೆ ಬೇಕಾದ ಬೇರೆಬೇರೆ ಅವಶ್ಯಕತೆಗಳು, ವಸತಿ, ಭತ್ಯೆ ಹೆಚ್ಚಿಸುವುದು ಮಾಡಬೇಕು. ಇದು ಶಾಂತಿ ಮತ್ತು ಸೌಹಾರ್ದತೆ ಕಾಪಾಡುವ ದೃಷ್ಟಿ ಬಹಳ ಅಗತ್ಯ ಇದೆ. ಆದರೆ ಒಟ್ಟಿನಲ್ಲಿ ಇವತ್ತು, ನಮ್ಮ ಶಿಕ್ಷಣ ದೃಷ್ಟಿಯಿಂದ ನೋಡಿದಾಗ, ಕರಿಹಲಗೆ ಆಂದೋಳನದ ಉದ್ದೇಶಕ್ಕಾಗಿ 6,700 ತರಗತಿ ಕೋಠಡಿಗಳನ್ನು ಕಟ್ಟಿಸಲು ಸರ್ಕಾರ ಉದ್ದೇಶಿಸಿದೆ ಎಂದು ಹೇಳಿದ್ದಾರೆ. ಆದರೆ ಇವತ್ತು ಶಾಸಕರಿಗೆ ನಾವು ಪ್ರತಿ ಶಾಲೆಗೆ ಭೇಟಿ ಕೊಟ್ಟಾಗ ಸಾಮನ್ಯವಾಗಿ ನಮಗೆ ದೂರು ಬರುವಂಥಾದ್ದು ಅಥವಾ ಮನವಿ ಬರುವಂಥಾದ್ದು ಒಂದೇ ವಿಷಯದಲ್ಲಿ. ನಮ್ಮ ಶಾಲೆಗಳಲ್ಲಿ ಅಧ್ಯಾಪಕರುಗಳ ಕೊರತೆ ಇದೆ, ಕೊಠಡಿಗಳ, ಪಿಠೋಪಕರಣಗಳ ಕೊರತೆ ಇದೆ ಎಂದು ಹೇಳುತ್ತಾರೆ. ನಾವು ಮುಖ್ಯವಾಗಿ ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಮೂಲಭೂತ ಅವಶ್ಯಕತೆಗಳನ್ನು ಪೂರೈಸದೆ ಇದ್ದರೆ ಬಹುಶಃ ನಾವು ಇವತ್ತು ಏನು ಸಾಕ್ಷರತಾ

ಆಂದೋಳನದ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ, ಅದಕ್ಕೆ ಏನೂ ಅರ್ಥ ಬರುವುದಿಲ್ಲ.

ಆ ದೃಷ್ಟಿಯಿಂದ ಇವತ್ತು ಯಾವ್ಯಾವ ಶಾಲೆಗಳಿಗೆ ಕೊಠಡಿಗಳ ಅವಶ್ಯಕತೆ ಇದೆ ಅದನ್ನು ಪೂರೈಸಬೇಕು ಮತ್ತು ಅಧ್ಯಾಪಕರ ಕೊರತೆಯನ್ನು ನೀಗಿಸಬೇಕು, ಅದರೊಟ್ಟಿಗೆ ಪೀಠೋಪಕರಣಗಳನ್ನು ಕೊಡಬೇಕು. ಈ ವ್ಯವಸ್ಥೆಯನ್ನು ಮಾಡಿದಾಗ ಮಾತ್ರ ಶಿಕ್ಷಣದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿ ಶಿಕ್ಷಣಕ್ಕೆ ಮಹತ್ವ ಕೊಟ್ಟಂತಾಗುತ್ತದೆ. ಆ ದಿಕ್ಕಿನಲ್ಲಿ ಸರ್ಕಾರ ಆಲೋಚನೆ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನು, ಈ ರಾಜ್ಯದಲ್ಲಿ ನೈಸರ್ಗಿಕ ಸಂಪನ್ಮೂಲಗಳು ಹೇರಳವಾಗಿವೆ. ಹಾಗೆ ಹೇರಳವಾಗಿದ್ದರೂ ಅದನ್ನು ರಕ್ಷಣೆ ಮಾಡುವಂಥಾದ್ದು ಮತ್ತು ಅದನ್ನು ಉಪಯೋಗಿಸುವಂಥಾದ್ದು ಏನಿದೆ ಅದನ್ನು ಮೂಲಭೂತವಾಗಿ ಬದಲಾವಣೆ ಮಾಡುವ ಬಗ್ಗೆ ಸರ್ಕಾರ ಗಮನ ಕೊಡಬೇಕಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ನೈಸರ್ಗಿಕ ಸಂಪನ್ಮೂಲಗಳು ಇದ್ದರೂ ಕೂಡ ಅದು ದರೋಡೆ ಆಗುವಂಥಾದ್ದು, ಕಳ್ಳಸಾಗಣಿಕೆ ಮೂಲಕ ಬೇರೆಬೇರೆ ರಾಜ್ಯಗಳಿಗೆ ಹೋಗುವಂಥಾದ್ದು ಆಗಿ ನಮ್ಮ ರಾಜ್ಯಕ್ಕೆ ತುಂಬಾ ತೊಂದರೆಯಾಗಿರುವುದು ಮಾತ್ರವಲ್ಲ ಇವತ್ತು ನಮ್ಮ ನೈಸರ್ಗಿಕ ಸಂಪನ್ಮೂಲಗಳು ಹಾಳಾಗಿ ಹೋಗುತ್ತಿವೆ. ಇದರ ಬಗ್ಗೆ ಕೂಡ ಸರ್ಕಾರ ಸರಿಯಾದ ಗಮನ ಕೊಡುವುದು ತುಂಬ ಅವಶ್ಯಕತೆ ಇದೆ. ಇವತ್ತು ನಮ್ಮ ದೇಶದಲ್ಲಿ ಹಳ್ಳಿಗಳೇ ಭಾರತದ ಜೀವಾಳ, ರೈತರೇ ದೇಶದ ಬೆನ್ನೆಲುಬು ಎಂದು ಹೇಳಿದ್ದಾರೆ. ಖಂಡಿತವಾಗಿಯೂ ರೈತರು ದೇಶದ ಬೆನ್ನೆಲುಬು. ಆದರೆ ಇವತ್ತು ರೈತರ ಬಗ್ಗೆ ಚಿಂತನೆ ಮಾಡುವುದು ಮಾತ್ರ ಬಹಳ ಕಡಿಮೆಯಾಗಿದೆ. ತಮಗೆ ಗೊತ್ತಿರುವ ಹಾಗೆ, ಒಂದು ವರ್ಷದ ಅವಧಿಯಲ್ಲಿ ರೈತರ ಆರ್ಥಿಕ ಉನ್ನತಿಯನ್ನು ಮಾಡುವ ದೃಷ್ಟಿಯಿಂದ ರೈತರ ಸಾಲ ಮನ್ನಾ ಮಾಡಬೇಕೆಂಬ ದೃಷ್ಟಿಯಿಂದ ಹಲವಾರು ಸಲ ವಿರೋಧಪಕ್ಷದಿಂದ ಹೋರಾಟ ಮಾಡಿದರೂ ಕೂಡ, ಇವತ್ತು ಒಂದು ವರ್ಷದ ನಂತರವಾದರೂ ಸಾಲ ಮನ್ನಾ ಆಗಬಹುದು ಎಂದು ಏನು ನಿರೀಕ್ಷೆ ಇಟ್ಟುಕೊಂಡಿದ್ದೆವು, ಇದ್ಯಾವುದೂ ಬಜೆಟ್‌ನಲ್ಲಿ ಕಾಣದೇ ಇರುವಂಥಾದ್ದು ನಮಗೆ ತುಂಬಾ ನಿರಾಶೆಯಾಗಿದೆ.

ಇದರ ಬಗ್ಗೆ ಕೂಡ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ. ಇವತ್ತು ರೈತರು ಬೆಳೆದಿರತಕ್ಕಂಥ ಬೆಳೆಗಳು ಏನಿವೆ, ಅದಕ್ಕೆ ಸರಿಯಾದ ಬೆಲೆ ನಿಶ್ಚಯ ಮಾಡುವಂಥಾದ್ದು ಮತ್ತು ಅವರಿಗೆ ಎಲ್ಲ ದೃಷ್ಟಿಯಿಂದ ಪ್ರೋತ್ಸಾಹ ಕೊಡುವುದು ಆಗಬೇಕಾಗಿದೆ. ಇವತ್ತು ನಮ್ಮ ಸರ್ಕಾರ 60 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ತುಂಬಾ ದೃಢ ಹಾಗೂ ಯಶಸ್ವಿ ಕ್ರಮಗಳನ್ನು ಕೈಗೊಂಡಿದೆ ಎಂದು ಹೇಳಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಾದದ್ದು 60 ಸಾವಿರ ಐ.ಪಿ. ಸೆಟ್ಟುಗಳಿಗೆ ಕನೆಕ್ಷನ್ ಕೊಡುವುದು ಮಾತ್ರವಲ್ಲ, ಹಿಂದೆ ಇದ್ದಂಥ ಐ.ಪಿ.ಸೆಟ್‌ಗಳನ್ನೂ ಸಹ ರನ್ ಮಾಡಬೇಕಾಗಿದೆ. ಈಗ ಹೆಚ್ಚು ಪಂಪುಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟನಂತರ ಹಿಂದೆ ಇದ್ದಂಥ ಪಂಪುಸೆಟ್‌ಗಳು ರನ್ ಆಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕಾಗಿದೆ. ಇವತ್ತು ನಮ್ಮ ಸರ್ಕಾರ ಏನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ 6ಗಂಟೆ ಮಾತ್ರ ಲೋಡ್ ಶೆಡ್ಡಿಂಗ್ ಮಾಡುತ್ತಿದ್ದೇವೆ ಎಂದು ಹೇಳಿಕೆ ಕೊಡುತ್ತಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಮಾತನಾಡುವುದಾದರೆ, ನಾನೂ ಕೂಡ ಒಬ್ಬ ಸಾಮಾನ್ಯ ರೈತ ಕುಟುಂಬದಿಂದ ಬಂದಿದ್ದೇನೆ. ನಾವು ಈ ಆರುಗಂಟೆ ಸಮಯ ಬಿಟ್ಟು ಉಳಿದ ಸಮಯದಲ್ಲಿ ಪಂಪ್ ರನ್ ಮಾಡಿ ಮನೆಗೆ ಬಂದು ಮುಟ್ಟಿದಾಗ ಕರೆಂಟ್ ಹೋಗುವಂಥಾದ್ದು ಅನವರತ ನಡೆಯುತ್ತಿದೆ. ಇದು ಒಂದು ದಿನಕ್ಕೆ ಹಲವಾರು ಸಲ ನಡೆಯುತ್ತದೆ. ಇದರಿಂದಾಗಿ ರೈತರು ತುಂಬಾ ತೊಂದರೆಯನ್ನು ಅನುಭವಿಸುತ್ತಿದ್ದಾರೆ.

ಮಲೆನಾಡು ಅಭಿವೃದ್ಧಿ ದೃಷ್ಟಿಯಿಂದ ಕೋಟಿಗಟ್ಟಲೆ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಅದರ ಜೊತೆಗೆ ಕರಾವಳಿ ಪ್ರದೇಶಗಳು ಬೆಟ್ಟಗುಡ್ಡಗಳಿಂದ ಕೂಡಿದ ಭಾಗವಾಗಿದ್ದು, ವರ್ಷದಲ್ಲಿ ನಾಲ್ಕು ತಿಂಗಳು ಧಾರಾಳವಾಗಿ ಮಳೆ ಬೀಳುತ್ತದೆ. ಜಾಸ್ತಿ ಮಳೆಯಿಂದಾಗಿ ಅಲ್ಲಿ ಯಾವುದೇ ರಸ್ತೆಯಲ್ಲಿ ವಾಹನ ಸಂಚಾರ ಮಾಡಲಿಕ್ಕೆ ಸಾಧ್ಯವಾಗಿಲ್ಲ. ಇಂತಹ ಪರಿಸ್ಥಿತಿ ನಿರ್ಮಾಣವಾಗಿರುವಾಗ ಈ ರಸ್ತೆಗಳನ್ನು ಪುನರ್ರಚಿಸುವ ದೃಷ್ಟಿಯಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಮುಖ್ಯವಾಗಿ ಜಾಸ್ತಿ ಹಣ ಕೊಡಬೇಕೆಂದು ಕೂಡ ನಾನು ಈ ಸಂದರ್ಭದಲ್ಲಿ ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಇವತ್ತು ಸಾಮಾನ್ಯ "ದುರ್ಬಲವರ್ಗಗಳ ಜನರಿಗೆ ಹಂಚಿಕೆ ಮಾಡುವ ಉದ್ದೇಶದಿಂದ ಕಟ್ಟಲಾಗುವ ಪ್ರತಿಯೊಂದು ಮನೆಗೂ ಒಂದು ಹೆಚ್ಚಿನ ಕೊಠಡಿ ಹಾಗೂ ನೈರ್ಮಲ್ಯ ವ್ಯವಸ್ಥೆ ಇರುವ ಶೌಚಾಲಯವನ್ನು ಒದಗಿಸಲು ಸಹ ಸರ್ಕಾರವು ಉದ್ದೇಶಿಸಿದೆ"ಎಂದು ಹೇಳಿದ್ದಾರೆ. ಇಲ್ಲಿ ನಾವು ಗಮನಿಸಬೇಕಾಗಿರುವುದು, ಹಿಂದೆ ಹುಡ್ಕೋ ಮೂಲಕ ಬಡವರಿಗೆ ಮನೆಗಳನ್ನು ಕೊಟ್ಟಿದ್ದಾರೆ. ಒಂದೊಂದು ತಾಲ್ಲೂಕಿನಲ್ಲೂ ಈ ಮನೆಗಳ ಬಾಬ್ತು 15-20 ಲಕ್ಷ ರೂಪಾಯಿಗಳು ಬಾಕಿ ಇದೆ. ಮೊದಲು ಈ ಬಾಕಿಯನ್ನು ಕೊಡುವುದಕ್ಕಾಗದೇ, ಕೇವಲ ಪ್ರಚಾರಕ್ಕಾಗಿ ಈ ರೀತಿ ಪುನಃ ಹೆಚ್ಚಿನ ಕೊಠಡಿಗಳನ್ನು ಕಟ್ಟಿಸಲಾಗುತ್ತದೆಂದು ಹೇಳಿದ್ದಾರೆ. ಇದು ಕೇವಲ ಪ್ರಚಾರವಾಗಬಹುದೇ ಹೊರತು, ನಿಜವಾಗಿಯೂ ಸಾಮಾನ್ಯ ಜನರಿಗೆ ಪ್ರಯೋಜನವಾಗುವುದಿಲ್ಲ. ಖಂಡಿತವಾಗಿಯೂ ಈ ಸಂದರ್ಭದಲ್ಲಿ ಹುಡ್ಕೋ ಸ್ಕೀಮ್‌ನಲ್ಲಿ ಕೊಡತಕ್ಕ ಬಾಕಿ ಹಣವನ್ನು ಪೂರ್ತಿ ಕೊಡುವ ಬಗ್ಗೆ ಸರ್ಕಾರ ಗಮನಹರಿಸಬೇಕೆಂದು ಹೇಳಿ ಮುಖ್ಯವಾಗಿ ನನ್ನ ಜಿಲ್ಲೆಯಲ್ಲಿರುವ ಕೆಲವು ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ತುಂಬೆ ವೆಂಟೆಡ್ ಡ್ಯಾಂ ಇದೆ. ಈ ಡ್ಯಾಂ ಮೂಲಕ ಮಂಗಳೂರು ಕಾರ್ಪೊರೇಷನ್‌ನವರು ಜನತೆಗೆ ವಾಟರ್ ಸಪ್ಲೈ ಮಾಡುತ್ತಿದ್ದಾರೆ. ತುಂಬೆ ವೆಂಟೆಡ್ ಡ್ಯಾಮ್ ವ್ಯವಸ್ಥೆಯಿಂದ, ಕರಾವಳಿ ಪ್ರದೇಶದ ನೇತ್ರಾವತಿ ಹೊಳೆಯ ಪ್ರದೇಶದಲ್ಲಿರತಕ್ಕ ರೈತರಿಗೆ ಫೆಬ್ರವರಿ ನಂತರ ವಿದ್ಯುತ್ ಸಂಪರ್ಕ ಕಟ್ ಮಾಡಿ, ನೇತ್ರಾವತಿ ಹೊಳೆಯಿಂದ ನೀರು ಎತ್ತುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ.

ನಾನು ಹೇಳುವಂಥಾದ್ದು ಏನೆಂದರೆ ತುಂಬೆ ವೆಂಟೆಡ್ ಡ್ಯಾಮ್ ಏನಿದೆ, ಇದನ್ನು ಆದಷ್ಟು ಬೇಗ ಪೂರ್ಣಮಾಡಿ ಮಂಗಳೂರು ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು ಮತ್ತು ರೈತರಿತಗೆ ತೊಂದರೆಯಾಗದಂತೆ ಮಾಡಬೇಕು. ಆಮೇಲೆ ಸರಪುರ ಅಣೆಕಟ್ಟು ನಿರ್ಮಾಣದ ಕೆಲಸ ಪ್ರಾರಂಭವಾಗಿದೆ. ಆದರೆ ಬಹಳ ನಿಧಾನಗತಿಯಿಂದ ನಡೆಯುತ್ತಿದೆ. ಇದನ್ನು ಆದಷ್ಟು ತ್ವರಿತಗತಿಯಿಂದ ಮಾಡಬೇಕು. ಮತ್ತು ಬಂಟ್ವಾಳ ಪುರಸಭೆ ಕ್ಷೇತ್ರದ ಮಧ್ಯದಲ್ಲಿ ನೇತ್ರಾವತಿ ಹೊಳೆ ಹರಿಯುತ್ತಿದೆ. ಈ ಎರಡು ಬದಿಯಲ್ಲಿರತಕ್ಕ ಜನರಿಗೆ ಕುಡಿಯುವ ನೀರಿನ ತೊಂದರೆ ಇದೆ. ಮಧ್ಯದಲ್ಲಿ ಹೊಳೆ ಹರಿಯುತ್ತಿದೆ. ಇಲ್ಲಿನ ಜನತೆಗೆ ಕುಡಿಯುವ ನೀರಿನ ಸಮಸ್ಯೆ ಇದೆ. ಈ ಪುರಸಭೆಯವರು ಒಂದು ಯೋಜನೆ ತಯಾರು ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಸರ್ಕಾರ ಇದನ್ನು ಮಂಜೂರ್ಮಾಡಿ, ಆ ಪ್ರದೇಶದ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ. ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿನ ಸೇಂದಿ ಬಗ್ಗೆ ಕಳೆದ ಸಲವೂ ಚರ್ಚೆಯಾಗಿದೆ. ಸೇಂದಿ ಮಾರಾಟ ನಿಷೇದ ಮಾಡಿರುವುದನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ವಿನಾಯಿತಿಗೊಳಿಸಿದ್ದಾರೆ.

ಇದರ ಬಗ್ಗೆ ಇನ್ನೂ ವ್ಯವಸ್ಥೆಯಾಗಿಲ್ಲ. ಇವತ್ತು ಎಲ್ಲೆಲ್ಲಿ ಸಾಧ್ಯವಿದೆ, ಅಲ್ಲಿ ಮಾರಾಟ ಮಾಡುವಂಥ ವಾತಾವರಣ ನಿರ್ಮಾಣವಾಗಿದೆ. ಅದಕ್ಕೆ ಒಂದು ಸರಿಯಾದ

ವ್ಯವಸ್ಥೆಯನ್ನು ಮಾಡಿಕೊಂಡು, ನಿಜವಾಗಿಯೂ ಮೂರ್ತೇದಾರರು ಯಾರಿದ್ದಾರೆ, ಅವರಿಗೆ ಅನುಕೂಲವಾಗಬೇಕು. ಮತ್ತು ಸರ್ಕಾರಕ್ಕೆ ಆದಾಯ ಬರುವ ರೀತಿಯಲ್ಲಿ ಸರ್ಕಾರ ಸರಿಯಾದ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿರತಕ್ಕ ಹೆಚ್ಚಿನ ಆಸ್ಪತ್ರೆಗಳಲ್ಲಿ ಡಾಕ್ಟರುಗಳ ನೇಮಕ ಮಾಡಿಕೊಡಬೇಕೆಂದು ಹೇಳುತ್ತೇನೆ. ಇವತ್ತೂ ಮೈನರ್ ಇರಿಗೇಷನ್ ಮೂಲಕ ರೈತರಿಗೆ ಹೆಚ್ಚಿನ ನೀರಾವರಿಯಾಗಬೇಕು. ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಅಂದರೆ ನನ್ನ ಕ್ಷೇತ್ರದಲ್ಲಿ ಕರಮಾರಗುಂಡಿ ಏತನೀರಾವರಿ ಯೋಜನೆ ಮಂಜೂರಾಗಿ ಸುಮಾರು 6-7ವರ್ಷವಾಗಿದೆ. ಈಗ್ಗೆ ಎರಡು ವರ್ಷಗಳಿಂದ ಯೋಜನೆಯ ಕೆಲಸ ನಿಂತುಹೋಗಿದೆ. ನಾನು ಇದರ ಬಗ್ಗೆ ನಿನ್ನೆ 334ರ ನಿಯಮದಡಿ ಪ್ರಸ್ತಾಪರ ಮಾಡಿದಾಗ, ಈ ಯೋಜನೆಯ ಕೆಲಸ ಪ್ರಗತಿಯಲ್ಲಿದೆ, ಬರುವ ವರ್ಷ ಆಗಬಹುದೆಂದು ಹೇಳಿದ್ದಾರೆ. ನಿಜವಾಗಿಯೂ ಎರಡು ವರ್ಷಗಳಿಂದ ಅಲ್ಲಿ ಕೆಲಸ ನಿಂತುಹೋಗಿದೆ. ಆದನ್ನು ಆದಷ್ಟುಬೇಗ ಮಾಡಬೇಕೆಂದು ಸರ್ಕಾರವನ್ನು ಒತ್ತಾಯಿಸಿ, ಈ ಸಂದರ್ಭದಲ್ಲಿ ನನಗೆ ನಾಲ್ಕು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಸನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ರಾಜ್ಯಪಾಲರು ಮಾಡಿದ ಭಾಷಣವನ್ನು ವಿರೋಧಿಸುತ್ತಾ ನಾನು ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇವೆ. ಈ ರಾಜ್ಯಪಾಲರ ಭಾಷಣದಲ್ಲಿ ಬರಗಾಲದ ಬಗ್ಗೆ ಒಂದು ಮಾತೂ ಇಲ್ಲ. ಪ್ರತಿಯೊಬ್ಬರೂ ಇದರ ಬಗ್ಗೆ ಹೇಳಿದ್ದಾರೆ. ಬರಗಾಲ ಇವತ್ತು ಭಯಂಕರವಾಗಿದೆ. ಕುಡಿಯುವ ನೀರಿನ ಸಮಸ್ಯೆ ಬಹಳ ಗಂಭೀರವಾಗಿದೆ. ಈ ರೀತಿಯ ಗಂಭೀರವಾದ ಪರಿಸ್ಥಿತಿ ಸರ್ಕಾರದ ಗಮನಕ್ಕೆ ಬಂದಿಲ್ಲವೇ ಅಥವಾ ಏಕೆ ಈ ಮಾತನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಲಿಲ್ಲವೆಂದು ಕೇಳಬೇಕಾಗುತ್ತದೆ. ಇದು ಬಹಳ ಮುಖ್ಯವಾದುದು. ಇಂತಹ ಮಹತ್ವವಾದ ವಿಷಯ ರಾಜ್ಯಪಾಲರ ಭಾಷಣದಲ್ಲಿ ಬರಬೇಕಾಗಿತ್ತು. ಇತ್ತೀಚೆಗೆ ರಾಜ್ಯದಲ್ಲಿ ದರೋಡೆಗಳು ಜಾಸ್ತಿಯಾಗಿವೆ, ಇವತ್ತು ಬೆಳಿಗ್ಗೆ ಬೀದರ್‌ನಲ್ಲಿ ಮತ್ತೆ ಕಳ್ಳತನವಾಗಿದೆ. ನಿನ್ನೆ ರಾಮನಗರದಲ್ಲಿ ಆಗಿದೆ. ದರೋಡೆ, ಕಳ್ಳತನಗಳು ಹೆಚ್ಚಾಗಿವೆ. ಯಾವರೀತಿಯಲ್ಲಿ ಇವು ಕಡಿಮೆಯಾಗುತ್ತವೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದರಲ್ಲಿ ಎಲ್ಲಿ ತಪ್ಪುತ್ತಿದ್ದೀರಿ. ನಿನ್ನೆ ನಾಗರಾಜ್‌ರವರು ಎರಡು ಗುಂಪಾಗಿದೆ ಎಂದು ಹೇಳುತ್ತಿದ್ದರು. ಆ ಎರಡು ಗುಂಪಿನಲ್ಲಿ ಮತ್ತೆ ಯಾವುದಾದರೂ ಗುಂಪು ಆಗುತ್ತಿದೆಯೇ, ಅದರಲ್ಲಿ ವಿಶೇಷ ಏನಾದರೂ ಇದೆಯೇ ಎನ್ನತಕ್ಕಂಥ ಮಾತು ನಮಗೆ ಅರ್ಥವಾಗುತ್ತಾ ಇಲ್ಲ. ಈ ರೀತಿಯಲ್ಲಿ ಏಕೆ ಆಗುತ್ತಿದೆ ಎಂಬ ಬಗ್ಗೆ ಸರ್ಕಾರದವರು ಹೇಳಬೇಕು.

ಮತ್ತೊಂದು ಕಡೆ 162 ಪೋಲೀಸ್ ಸ್ಟೇಷನ್ಸ್ ಅಪ್‌ಗ್ರೇಡ್ ಮಾಡುತ್ತೇವೆಂದು ಹೇಳಿದಿರಿ. ಅಪ್‌ಗ್ರೇಡ್ ಮಾಡುವಾಗ ಎರಡು ಸಬ್‌ಇನ್‌ಸ್ಪೆಕ್ಟರ್‌ಗಳು ಇದ್ದ ಕಡೆ ಒಂದು ಮಾಡಿದ್ದೀರಿ. ಸಿವಿಲ್ ಮತ್ತು ಕ್ರೈಮ್ ಎಂದು ಎರಡು ಇದ್ದುದನ್ನು ಒಂದು ಮಾಡಿ, ತಾಲ್ಲೂಕಿಗೆ ಒಬ್ಬರು ಇನ್‌ಸ್ಪೆಕ್ಟರ್ ಇದ್ದುದನ್ನು ಎರಡು ಮಾಡಿರುತ್ತೀರಿ. ಅಲ್ಲಿಂದಲ್ಲೇ ಅಡ್‌ಜಸ್ಟ್ ಮಾಡಿರುತ್ತೀರಿ. ಅಪ್‌ಗ್ರೇಡ್‌ಮಾಡಿ ವಿಶೇಷವಾಗಿ ದಳ ಹೆಚ್ಚಿಸುತ್ತೇವೆ ಹೆಚ್ಚಿನ ಜನರನ್ನು ಸೇರಿಸಿಕೊಳ್ಳುತ್ತೇವೆ. ಎಂಬುದು ನಮಗೆ ಕಂಡು ಬರುತ್ತಿಲ್ಲ. ಅಪ್‌ಗ್ರೇಡ್ ಎಂದರೆ ಅಲ್ಲಿಂದಲೇ ಸರಿಪಡಿಸುವುದು, ಅವರನ್ನೇ ಇಡುವುದು ಆಗಿದೆ. ಒಳ್ಳೆಯ ವ್ಯಕ್ತಿಗಳನ್ನು, ಒಳ್ಳೆಯವರನ್ನು ಹೊರಗಿನಿಂದ ತಂದು ಏನಾದರೂ ಮಾಡಬೇಕು. ಹಳಬರಿಂದ ನಮಗೆ ಬಹಳ ತೊಂದರೆಯಾಗಿದೆ. ಐದು ರೂಪಾಯಿ, ಹತ್ತು ರೂಪಾಯಿ ತಿನ್ನುತಕ್ಕಂಥವರು ಜಾಸ್ತಿಯಾಗಿದ್ದಾರೆ. ಅಂತಹವರನ್ನು, ಹಳಬರನ್ನು

ಸ್ವಲ್ಪ ತೆಗೆಯಬೇಕು. ರಿಟೈರ್‌ಮೆಂಟ್ ಮಾಡಿ ಮನೆಗೆ ಕಳುಹಿಸಿ ಒಳ್ಳೆಯವರನ್ನು ರೆಕ್ರೂಟ್‌ಮೆಂಟ್ ಮಾಡಿ, ಚೆನ್ನಾಗಿರುವವರನ್ನು ಹಾಕಿ ಒಳ್ಳೆಯ ಆಡಳಿತ ಕೊಡುವ ವ್ಯವಸ್ಥೆ ಮಾಡಿದರೆ ಸರಿಯಾಗಿ ಆಗುತ್ತದೆ. ಮಾನ್ಯ ಧರ್ಮಸಿಂಗ್‌ರವರು ಅನುಭವಿಗಳಿದ್ದಾರೆ. ನಮ್ಮ ಖರ್ಗೆಯವರೂ ಇದ್ದಾರೆ. ಅವರು ಬಹಳ ಚೆನ್ನಾಗಿ ಮಾಡುತ್ತಾರೆ. ನಮ್ಮ ಕಡೆ ರೀಜನ್‌ಗೆ ಒಳ್ಳೆಯದು ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅವರೂ ಜೊತೆಯಲ್ಲಿದ್ದಾರೆಯೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇಬ್ಬರೂ ಜೊತೆಯಲ್ಲಿದ್ದರೆ ನಮ್ಮ ಏರಿಯಾಕ್ಕೆ ಬಹಳ ಅನುಕೂಲವಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಇಬ್ಬರ ಇಲಾಖೆಯೂ ಬೇರೆ ಬೇರೆ ಅಲ್ಲವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇಬ್ಬರ ಇಲಾಖೆ ಬೇರೆ ಬೇರೆ ಇದ್ದರೂ ಇಬ್ಬರೂ ಜೊತೆಗೆ ಇರುತ್ತಾರೆ.

ಚೇರ್‌ಮನ್ (ಶ್ರೀಮತಿ ಮೋಟಮ್ಮ) : ಮಾನ್ಯ ನಾಗರಾಜ್‌ರವರೇ ಇದು ಪ್ರಶ್ನೋತ್ತರ ವೇಳೆಯಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅದಕ್ಕೆ ಇದರ ಬಗ್ಗೆ ಸ್ವಲ್ಪ ಸರಿಪಡಿಸಬೇಕು. ಚುನಾವಣೆ ಆದಮೇಲೆ ಎರಡು ತಿಂಗಳಲ್ಲಿ ಒಂದು ಗಲಾಟೆ ಆಯಿತು. ಪೋಲೀಸರು ಜಿಲ್ಲಾ ಪರಿಷತ್ ಮೆಂಬರ್‌ನ್ನು ಹಿಡಿದು ಕೊಂಡು ಹೊಡೆದರು. ಸಾವಿರಾರು ಸಲ ಇಲ್ಲಿ ಹೇಳಿದೆವು. ಅಪ್ಲಿಕೇಷನ್ ಕೊಟ್ಟೆವು. ಚೀಫ್ ಮಿನಿಸ್ಟರ್‌ರವರು ನಮಗೂ ಒಂದು ಕೊಡಿ ಎಂದರು, ಅವರಿಗೂ ಕೊಟ್ಟಿದ್ದೇನೆ. ಇವತ್ತಿನತನಕ ಏನೂ ಆಗಿಲ್ಲ. ಅವರ ಮೇಲೆ ಹೊಡೆದು ಬಡಿದು ಫಜೀತಿ ಮಾಡಿ ಇವತ್ತು ಕೇಸ್ ನಡೆಯುತ್ತಿದೆ. ಅವರಮೇಲೆ ಉಲ್ಟಾ ಕೇಸ್ ಹಾಕಿದ್ದಾರೆ. ಪೋಲೀಸರು ಹೊಡೆಯುವುದು, ಉಲ್ಟಾ ಅವರ ಮೇಲೆ ಕೇಸ್ ಮಾಡುವುದು. 200 ಜನರನ್ನು ಕೋರ್ಟಿಗೆ ಕರೆದುಕೊಂಡು ಹೋಗುತ್ತಿದ್ದಾರೆ. ಜಿಲ್ಲಾ ಪರಿಷತ್ ಮೆಂಬರ್ ಜಾಧವ್ ಅವರಿಗೆ ಮತ್ತು ಇನ್ನೂ 3-4 ಜನರಿಗೆ ಹೊಡೆದರು. ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಸ್ವತಃ ಇಷ್ಟೆಲ್ಲಾ ಮಾಡಿದರೂ ಅವರಿಗೆ ಒಳ್ಳೆಯ ಜಾಗಕ್ಕೆ ಪ್ರಮೋಷನ್ ಕೊಟ್ಟರು. ನಾವೆಲ್ಲಾ ಅಪ್ಲಿಕೇಷನ್ ಕೊಟ್ಟಮೇಲೆ ಪ್ರಮೋಷನ್ ಕೊಟ್ಟು ಒಳ್ಳೆಯ ಜಾಗದಲ್ಲಿ ಹಾಕಿದ್ದಾರೆ. ಯಾರಾದರೂ ಇದರಲ್ಲಿ ಪಾರ್ಟಿ ಪಕ್ಷ ತಂದರೆ ಬಹಳ ಕಷ್ಟವಾಗುತ್ತದೆ. ಚುನಾವಣೆಯಲ್ಲಿ ನಾವೂ ಅರಿಸಿಬರುತ್ತೇವೆ. ನೀವೂ ಅರಿಸಿ ಬರುತ್ತೀರಿ.

ಈಗ ಅವರಿಗೆ ಹೇಗೆ ಬುಕ್ ಮಾಡಬೇಕೆಂದು ತಿಳಿಯುತ್ತಿಲ್ಲ. 5 ರೂಪಾಯಿ, 10 ರೂಪಾಯಿ ತಿನ್ನುವವರಿಗೆ, ಹೊಡೆಯಲಿ ಬಡಿಯಲಿ, ಏನೇನೂ ನಮಗೆ ಅರ್ಥವಾಗುತ್ತಿಲ್ಲ, ಇಷ್ಟು ತೊಂದರೆಯಾಗಿದೆ ಎಂದರೆ, ಜಿಲ್ಲಾ ಪರಿಷತ್ ಮೆಂಬರ್‌ಗೇ ಹೊಡೆಯುತ್ತಾರೆ ಎಂದರೆ ಯಾರೂ ಕೇಳುವವರು ಹೇಳುವವರು ಇಲ್ಲ ಎಂದರೆ ಹೇಗೆ? ಇವತ್ತಿನ ದಿವಸ ಉಲ್ಟಾ ಅವರ ಮೇಲೆ ಕೇಸ್ ಹಾಕುತ್ತಿದ್ದಾರೆ. ತಪ್ಪು ಯಾರೂ ಮಾಡಿಲ್ಲ ಸ್ವಾಮಿ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : 5-ರೂಪಾಯಿ 10 ರೂಪಾಯಿ ತಿನ್ನುವವರು ಬಹಳ ಒಳ್ಳೆಯವರು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ಜಿಲ್ಲಾಪರಿಷತ್ ಮೆಂಬರ್ ತಪ್ಪು ಮಾಡಿದರೆ ಹೊಡೆಯಬಾರದು ಎಂದು ನಿಮ್ಮ ವಾದ ಇದ್ದರೆ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸ್ವಾಮಿ, ಜಿಲ್ಲಾ ಪರಿಷತ್ ಮೆಂಬರ್ ಅಲ್ಲ, ಎಂ.ಎಲ್.ಎ ತಪ್ಪು ಮಾಡಿದರೂ ಅವರಿಗೆ ಹೊಡೆಯಿರಿ. ಶಿವರಾಮೇಗೌಡರು ತಪ್ಪು ಮಾಡಿದರೆ ಅವರಿಗೂ ಹೊಡೆಯಲಿ. ನಾನು ಅದನ್ನು ಹೇಳುತ್ತಿಲ್ಲ, ಅದನ್ನು ಕೇಳುತ್ತಿಲ್ಲ. ಆದರೆ ಅನಾವಶ್ಯಕವಾಗಿ ಪಂಚಾಯಿತಿ ಮಾಡಿ ಅವಮಾನ ಮಾಡತಕ್ಕ ವ್ಯವಸ್ಥೆ ಬೇಡ. ಸಾವಿರಾರು ಜನ ಕೂಡಿ, ನೀರು ಬೇಕೆಂದು ಒತ್ತಾಯ ಮಾಡಿದರು. ಇವರನ್ನು ಹೊಡೆದು ಬಡಿದು ಫಜೀತಿ ಮಾಡಿ ಹೊರಗೆ ಕಳುಹಿಸಿದರು. ಸಿಕ್ಕಾಬಟ್ಟೆ ಅವಮಾನ ಮಾಡಿದರು. ಇದನ್ನು ಪರಿಶೀಲಿಸಿ ಈಗಲಾದರೂ ಏನಾದರೂ ಮಾಡುತ್ತೀರಾ? ಇನ್ನೂ ಅವರು ಕೋರ್ಟಿಗೆ ಅಲೆಯಬೇಕೆಂದು ಇದೆಯೇ? ಅವರಿಗೆ ಪ್ರಮೋಷನ್ ಕೊಟ್ಟಿದ್ದೀರಿ. ಇದೊಂದು ಮಾತನ್ನು ತಮಗೆ ಕೇಳುತ್ತಿದ್ದೇನೆ. ಇದರ ಬಗ್ಗೆ ತಾವು ದಯವಿಟ್ಟು ವಿಚಾರ ಮಾಡಬೇಕಾಗಿದೆ.

ಈ ಸರ್ಕಾರ ಏನಾಗಿದೆಯೆಂದರೆ ರೈತ ವಿರೋಧಿ ಸರಕಾರವಾಗಿದೆ. ಒಂದು ಕಡೆ ರೈತ ಬೆನ್ನೆಲುಬು ಎಂದು ಹೇಳುತ್ತೀರಿ. ಇದರಿಂದ ರೈತರ ಬಗ್ಗೆ ಬಹಳ ಕಾಳಜಿ ಇದೆ, ವಿಶೇಷ ಪ್ರೀತಿ ಇದೆ ಎಂದು ಅರ್ಥವಾಗುತ್ತದೆ. ಆದರೆ ಇಲ್ಲಿ ನೋಡಿದರೆ ರೈತರ ಬಗ್ಗೆ ಏನೂ ಇಲ್ಲ. ರೈತರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಒಂದು ಪಾಸ್‌ಬುಕ್ ಕೊಟ್ಟಿದ್ದೀರಿ, ಸಂತೋಷ, ಧನ್ಯವಾದಗಳು ಕೊಟ್ಟಿದ್ದೀರಿ ಅದು ಒಳ್ಳೆಯದು ಎಂದು ಹೇಳಬೇಕು. ಆದರೆ ಬರೀ ಪಾಸ್‌ಬುಕ್ ಕೊಟ್ಟರೆ ಅವನಿಗೆ ಲಾಭವಾಗುವುದಿಲ್ಲ, ಅದರಲ್ಲಿ ಸಿಂಗಲ್ ವಿಂಡೋ ಸಿಸ್ಟಂ ಮಾಡಿದರೆ ಅವನಿಗೆ ಲಾಭವಾಗುತ್ತದೆ. ಬರೀ ಪಾಸ್‌ಬುಕ್ ಕೊಡುವುದರಿಂದ ರೈತರಿಗೆ ಲಾಭವಾಗುವುದಿಲ್ಲ. ಈ ಬಗ್ಗೆ ತಾವು ವಿಚಾರ ಮಾಡಬೇಕಾಗುತ್ತದೆ. ರೈತರು ಬೆನ್ನೆಲುಬು ಎಂದು ಒಂದು ಮಾತು ಹೇಳಿ ಕಣ್ಣೊರೆಸಿದರೆ ಸಾಕೇ? ಅವರ ಬಗ್ಗೆ ಒಳ್ಳೆಯ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸಾಲ ಮನ್ನಾ ಎಂದು ಹೇಳಿದಿರಿ. ಸಾಲ ಮನ್ನಾ ಬಗ್ಗೆ ಬರೆಯುತ್ತೇವೆ, ಹೇಳುತ್ತೇವೆ, ಮಾಡುತ್ತೇವೆ ಎಂದರೆ ಅದರಿಂದ ಏನೂ ಅರ್ಥ ಆಗುವುದಿಲ್ಲ. ಎರಡು ಪರ್ಸೆಂಟ್ ಬಡ್ಡಿ ಏನಾದರೂ ಮನ್ನಾ ಮಾಡಿದರೋ? ರೈತರು ಅವರ ಕಾಲ ಮೇಲೆ ಅವರು ನಿಲ್ಲುತಕ್ಕ ವ್ಯವಸ್ಥೆ ಏನಾದರೂ ಮಾಡಿದ್ದೀರೋ? ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ? ಇಲ್ಲಿ ಭಾಷಣದಲ್ಲಿ ಮಾತ್ರ ಹೇಳುತ್ತೀರಿ. ಇವತ್ತು ಬೆಳಗ್ಗೆ ನಮ್ಮ ಸ್ನೇಹಿತರು ಹೇಳಿದರು. ಮಾರ್ಚ್ 31ನೇ ತಾರೀಖಿನವರೆಗೆ ಸಾಲ ವಸೂಲಿ ಮಾಡುವುದಿಲ್ಲ. ಎಂದು ಇಲ್ಲಿ ಪ್ರಾಮಿಸ್ ಮಾಡುತ್ತೀರಿ, ಇನ್ನೊಂದು ಕಡೆ ಹೊಡೆದು ಬಡಿದು ವಸೂಲು ಮಾಡುತ್ತೀರಿ, ಹರಾಜು ಮಾಡುತ್ತೀರಿ. ಹರಾಜು ಮಾಡಿ ಫಜೀತಿ ಮಾಡಿ ಅವಮಾನ ಮಾಡಿ ಮನೆಯಲ್ಲಿದ್ದ ಗಂಗಳ ತಂಬಿಗೆ ಎಲ್ಲಾ ಹೊರಗೆ ತಂದಿದ್ದಾರೆ. ಈ ರೀತಿ ಮಾಡುವುದಿಲ್ಲ ಎಂದು ಅಸೆಂಬ್ಲಿಯಲ್ಲಿ ಹೇಳುತ್ತೀರಿ. ಅಲ್ಲಿ ಹಾಗೆ ಮಾಡುತ್ತೀರಿ. ಇಲ್ಲಿ ಬೇಡ ಎಂದೂ ,ಅಲ್ಲಿ ಮಾಡಿ ಎಂದೂ ಹೇಳುತ್ತೀರೋ ಏನೋ ನನಗೆ ಅರ್ಥವಾಗುತ್ತಿಲ್ಲ. ಇದು ಏತಕ್ಕೆ ಹೀಗೆ ಆಗುತ್ತಿದೆ. ನಿಜವಾಗಿ ರೈತರ ಬಗ್ಗೆ ಕಳಕಳಿ ಇದ್ದರೆ, ವಿಶೇಷವಾಗಿ ಸಹಾಯ ಮಾಡಬೇಕೆಂದು ಆಶೆ ಇದ್ದರೆ, ತಾವು ಅವರ ಬಗ್ಗೆ ಯೋಜನೆಗಳನ್ನು ಹಾಕಿಕೊಳ್ಳಿ. ಯಾವುದಾದರೂ ಕೆಲವು ಯೋಜನೆಗಳನ್ನು ಒಳ್ಳೆಯ ರೀತಿಯಿಂದ ಹಾಕಿಕೊಳ್ಳಿ. ಇವತ್ತು ಅವರಿಗೆ ತೊಂದರೆ ಏನಾಗಿದೆ ಎಂದರೆ, ಸಹಕಾರ ಸಂಘಗಳು ಮುಳುಗಿ ಹೋಗಿವೆ. ಸಾಲ ಮನ್ನಾ ಮಾಡಿದ ಮೇಲೆ ಏನು ತೊಂದರೆಯಾಗಿದೆ ಎಂದು ಹೇಳಬೇಕಾಗುತ್ತದೆ. ನಮ್ಮ ನಂಜುಂಡಸ್ವಾಮಿಯವರು ಹೇಳಿದ ಹಾಗೆ ನಾನು ಸಾಲ ಮನ್ನಾ ಮಾಡಿ ಎಂದು ಹೇಳುವವನಲ್ಲ. ಪರಂತು ಅವರ ಕಾಲ ಮೇಲೆ ನಿಲ್ಲುತಕ್ಕಂಥ ಸಂಪೂರ್ಣವಾದ ಸಾಲ ತಾವು ಕೊಟ್ಟಿದ್ದರೆ ಅವರಿಗೆ ಅನುಕೂಲವಾಗುತ್ತಿತ್ತು. ಇಲ್ಲದೇ ಹೋದರೆ ಅವರಿಗೆ ಅನುಕೂಲ ಆಗುವುದಕ್ಕೆ ಸಾಧ್ಯ ಇಲ್ಲ.

ಸಾಲ ಮನ್ನಾ ಈ ಪ್ರಕಾರವಾಗಿ ನಡೆಯುತ್ತಿದೆ. ಸಾಲದ ಮೇಲಿನ ಬಡ್ಡಿ 1983ರಲ್ಲಿ ಒಂದು ಸಾರಿ ಮನ್ನಾ ಆಯಿತು. ಮತ್ತೆ 1986ರಲ್ಲಿ ರೈತರ ಸಾಲದ ಮೇಲಿನ ಬಡ್ಡಿ ಮನ್ನಾ ಆಯಿತು. ಆದರೆ ಯಾರು ಸಾಲ ಪಾವತಿ ಮಾಡಿದ್ದರೋ ಅವರಿಗೆ ಏನೂ ಲಾಭ ಆಗಲಿಲ್ಲ. ಲಾಭ ಆಗಿದ್ದು ಯಾರು ಸಾಲ ಕೊಡದೆ ಇದ್ದರೋ ಅವರಿಗೆ ಮಾತ್ರ. ಅವರು ಪುನಃ ಸಾಲ ತೆಗೆದುಕೊಂಡರು. 1983ನೇ ಇಸವಿಯಲ್ಲಿ ಮನ್ನಾ ಆದ ಮೇಲೆ ಮತ್ತೆ ಸಾಲ ವಾಪಸ್ ತೆಗೆದುಕೊಂಡರು. ಮತ್ತೆ ಆ ಸಾಲದ ಮೇಲಿನ ಬಡ್ಡಿ 1986ರಲ್ಲಿ ಮನ್ನಾ ಆಯಿತು. ಸಾಲ ಪಾವತಿ ಮಾಡುವವರು ಮಾಡಿದರು ಅವರಿಗೆ ಏನೂ ಲಾಭ ಇಲ್ಲ. ಸಾಲ ಕೊಡದೆ ಇರುವವರಿಗೆ ಲಾಭ ಆಯಿತು. ಮತ್ತೆ ಅವರಿಗೆ ಸಾಲ ಸಹ ಸಿಕ್ಕಿತು. ನಾವು ಯಾವುದಾದರೊಂದು ನೀತಿ ಮಾಡುವಾಗ ಎಲ್ಲರಿಗೂ ಅನುಕೂಲವಾಗುವಂತೆ ಇರಬೇಕು. ಇಂಥಾದ್ದರಲ್ಲಿ ನಾವ್ಯಾರೂ ರಾಜಕೀಯ ಮಾಡಬಾರದು. ಸಹಕಾರ ಕ್ಷೇತ್ರದಲ್ಲಿ ರಾಜಕೀಯ ಮಾಡುವುದು ಬೇಡ. ಸಹಕಾರ ಹೇಗೆ ಇರಬೇಕೆಂದರೆ, ನಾವು ಮಂದಿರಕ್ಕೆ ಹೋಗುವಾಗ ಪಾದರಕ್ಷೆಗಳನ್ನು ಹೇಗೆ ಹೊರಗಡೆ ಬಿಟ್ಟು ಹೋಗುತ್ತೇವೆಯೋ ಆ ರೀತಿ ರಾಜಕೀಯವನ್ನು ಇಲ್ಲಿ ಹೊರಗೆ ಇಟ್ಟು ಹೋದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಸಹಕಾರ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಸ್. ಪಾಟೀಲ್ : ಪಾದರಕ್ಷೆಗಳು ಇಲ್ಲದೆ ಇರುವವರು ಇದ್ದಾರೆ. ಅವರು ಇನ್ನು ಪಾದರಕ್ಷೆಗಳನ್ನು ಹೊರಗೆ ಇಟ್ಟು ಹೋಗುವ ಪ್ರಶ್ನೆ ಎಲ್ಲಿ ಬರುತ್ತದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಸ್ವಾಮಿ ನಿಮಗೆ ಸಹಕಾರ ಕ್ಷೇತ್ರದಲ್ಲಿ ಅನುಭವ ಇಲ್ಲ. ನಿಮಗೆ ಸಾಮರ್ಥವಿಲ್ಲವೆಂದರೆ ಯಾರೇನು ಮಾಡುವುದಕ್ಕೆ ಆಗುತ್ತದೆ. ಯಾರು ಅಲ್ಲಿ ಚೆನ್ನಾಗಿ ಕೆಲಸ ಮಾಡಿರುತ್ತಾರೋ, ಯಾರು ಜನರ ಪ್ರೀತಿ ವಿಶ್ವಾಸ ಗಳಿಸಿರುತ್ತಾರೋ ಅವರು ಅಲ್ಲಿಗೆ ಬರುತ್ತಾರೆ.

ಶ್ರೀ ಎಂ.ಎಸ್. ಪಾಟೀಲ್ : ಮೆಂಬರ್ಸ್ ಮಾಡಿಕೊಳ್ಳುವುದಕ್ಕೆ ಕೆಲವು ಸೊಸೈಟಿಗಳಲ್ಲಿ ಬಿಡುವುದಿಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಮಾನ್ಯ ಅಧ್ಯಕ್ಷರು ನನಗೆ ಸಮಯ ಕೊಟ್ಟಿರುವುದೇ 10 ನಿಮಿಷ. ಅದರಲ್ಲಿ ಮಧ್ಯೆ ಮಧ್ಯೆ ನಿಮ್ಮ ಕಾಟ ಬೇರೆ.

ಶ್ರೀ ಆರ್.ಎನ್. ನಾಯಕ್ : ಕೆಲವು ಸಂಘಗಳಲ್ಲಿ ಮೆಂಬರ್ ಮಾಡಿಕೊಂಡರೆ ಬೇರೆಯವರು ಎಲ್ಲಿ ಬಂದುಬಿಡುತ್ತಾರೋ ಎನ್ನುವ ಭಯ.....

(ಗೊಂದಲ)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮೆಂಬರ್ಸ್‌ನ್ನು ಏತಕ್ಕೆ ಮಾಡಿಕೊಳ್ಳುವುದಿಲ್ಲ, ಮಾಡಿಕೊಳ್ಳುತ್ತಾರೆ. ನಿಮ್ಮಲ್ಲಿ ಆ ಸಾಮರ್ಥ್ಯ ಇಲ್ಲ ಎಂದು ಹೇಳಿದೆನಲ್ಲ.

ಶ್ರೀ ಎಂ.ಎಸ್. ಪಾಟೀಲ್ : ನೀವು ನಮ್ಮ ಕಡೆ ನೋಡಿ , ಏತಕ್ಕೆ ಮಾತನಾಡುತ್ತಿದ್ದೀರಿ, ತಾವು ಅಧ್ಯಕ್ಷರ ಕಡೆ ನೋಡಿ ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀವು ಮಧ್ಯೆದಲ್ಲಿ ಏತಕ್ಕೆ ಮಾತನಾಡುವುದಕ್ಕೆ ಬರುತ್ತಿದ್ದೀರಿ.

ಶ್ರೀ ಆರ್.ಎನ್. ನಾಯಕ್ : ನೀವು ಬಹಳ ಒಳ್ಳೆಯ ಪಾಯಿಂಟ್ಸ್ ಮಾತನಾಡುತ್ತಿದ್ದೀರಿ ಮಾತನಾಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ನೀವು ಇಲ್ಲಿದ್ದಾಗ ಅದೇ ಮಾಡುತ್ತಿದ್ದುದು.

ಶ್ರೀ ಆರ್.ಎನ್. ನಾಯಕ್ : ಅದಕ್ಕೆ ನಾವು ನಿಮ್ಮನ್ನು ಅಲ್ಲಿಗೆ ಕಳುಹಿಸಿ ನಾವು ಇಲ್ಲಿಗೆ ಬಂದಿದ್ದುದು.

ಶ್ರೀ ಡಿ.ಎ. ಚಿನ್ನಪ್ಪ : ಇನ್ನೊಂದು ಸಾರಿ ನಿಮ್ಮನ್ನು ಅಲ್ಲಿಂದಲೇ ಹೊರಗಡೆ ಕಳುಹಿಸಿಬಿಡುತ್ತೇವೆ ಬಿಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ನೀವು ನೀವು ಏಕೆ ಕಚ್ಚಾಡುತ್ತೀರಿ? ಬರುವುದೇ ನಾವು.

ಶ್ರೀ ವಾಟಾಳ್ ನಾಗರಾಜ್ : ತಾವು ಎಲ್ಲಿಗೆ ಬರುತ್ತೀರೋ ಗೊತ್ತಿಲ್ಲ.

ಶ್ರೀ ಆರ್.ಎನ್. ನಾಯಕ್ : ತಾವು ಮಂತ್ರಿ ಆಗಿದ್ದಿರಲ್ಲವೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹೌದು, 7 ದಿವಸ ಮಂತ್ರಿಯಾಗಿದ್ದೆ ಸಂತೋಷಪಡಿ. ನೀವು ಅದೂ ಆಗಲಿಲ್ಲ, ದುರ್ದೈವ.

4. ಪಿ.ಎಂ.

ಇದು ರೈತ ವಿರೋಧಿ ಸರ್ಕಾರವೆಂದು ನಾನು ಏಕೆ ಹೇಳುತ್ತಿದ್ದೇನೆಂದರೆ, ಬರಗಾಲದ ಬಗ್ಗೆ ಒಂದು ಮಾತನ್ನೂ ಹೇಳಿಲ್ಲ. ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು ಗಾಳಿ, ನೀರು, ಊಟ. ಈ ನೀರು ಮಾತ್ರ ಇವರಿಂದ ಕೊಡುವುದಕ್ಕಾಗುತ್ತಿಲ್ಲ. ನಮ್ಮ ಬೀದರ್ ಜಿಲ್ಲೆಯಲ್ಲಿ ಪದೇ ಪದೇ ಬರಗಾಲ ಬಂದು ಬಹಳ ಜನ ತೊಂದರೆಗೀಡಾಗಿದ್ದಾರೆ. ನಮ್ಮಲ್ಲಿ ನೀರೇ ಸಿಗುತ್ತಿಲ್ಲ. ನಮ್ಮಲ್ಲಿ ನೀರಿನ ಬರಗಾಲ ಎಷ್ಟಿದೆಯೆಂದರೆ ಒಂದು ಕೊಡ ನೀರು ತೆಗೆದುಕೊಂಡು ಬಂದು ಮಂಚದ ಮೇಲೆ ನಿಂತು ಸ್ನಾನ ಮಾಡುತ್ತಾರೆ. ಮಂಚದ ಕೆಳಗೆ ಬೀಳುವ ಸ್ನಾನ ಮಾಡಿದ ನೀರನ್ನು ಶೇಖರಣೆ ಮಾಡಿ ಬೇರೆ ಕೆಲಸಕ್ಕೆ ಉಪಯೋಗ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಗುರುಪಾದಪ್ಪನವರು ಈ ಪರಿಸ್ಥಿತಿ ಯಾವ ಹಳ್ಳಿಯಲ್ಲಿ ಇದೆಯೆಂದು ಆ ಹಳ್ಳಿಯ ಹೆಸರನ್ನು ಹೇಳಿದರೆ ನಾನು ಕೂಡಲೇ ಡೆಪ್ಯೂಟಿ ಕಮಿಷನ್‌ರಿಗೆ ಹೇಳಿ ನಾಳೆಯೇ ವಾಟರ್ ಟ್ರಾನ್ಸ್‌ಪೋರ್ಟೇಷನ್ ಮಾಡಿಸುತ್ತೇನೆ. ಇಲ್ಲವೇ ಬೋರ್‌ವೆಲ್ಲನ್ನು ಹಾಕಿಸುತ್ತೇನೆ. ಅಂತಹ ಪರಿಸ್ಥಿತಿ ಇರುವ ಹಳ್ಳಿಯ ಹೆಸರನ್ನು ಅವರು ಸ್ಪಷ್ಟವಾಗಿ ಹೇಳಬೇಕು. ಏಕೆಂದರೆ ನಿಮ್ಮ ಜಿಲ್ಲೆಯ ಡೆಪ್ಯೂಟಿ ಕಮಿಷನರ್‌ರವರು ಅಭಾವ ಪರಿಹಾರಕ್ಕಾಗಿ ಎಷ್ಟು ಹಣವನ್ನು ಕೇಳಿದ್ದಾರೋ ಅಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಬೇಕಾದರೆ ನೀವು ಡೆಪ್ಯೂಟಿ ಕಮಿಷನರ್‌ರವರಿಗೆ ಫೋನ್ ಮೂಲಕ ತಿಳಿದುಕೊಂಡು ನಾಳೆ ನಮಗೆ ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಎಲ್ಲೆಲ್ಲಿ ವಿಶೇಷ ತೊಂದರೆ ಇದೆ ಅಂತಹ ಹಳ್ಳಿಗಳ ಪಟ್ಟಿಯನ್ನು ಕೊಡುತ್ತೇನೆ. ಅಲ್ಲಿ ತಾವು ನೀರಿನ ವ್ಯವಸ್ಥೆ ಮಾಡಿದರೆ ಬಹಳ ಸಂತೋಷ. ನಮ್ಮಲ್ಲಿ ಅತಿವೃಷ್ಟಿಯಾಗಿ ಹೊಲಗಳಲ್ಲಿ ಇದ್ದ ಪಂಪುಸೆಟ್ಟುಗಳೆಲ್ಲಾ ಹೋದವು, ರೋಡುಗಳೆಲ್ಲಾ ಕಿತ್ತು ಹೋದವು, ಈಗ ಅಂಥಾ ಕಡೆ ಬಸ್‌ಗಳೇ ಓಡಾಡುವುದಿಲ್ಲ. ಈ ಕೆಲಸಗಳನ್ನು ಮಾಡಿಸುವುದಕ್ಕೆ ನಾವು 35 ಕೋಟಿ ರೂಪಾಯಿಗಳನ್ನು ಕೇಳಿದರೆ ನೀವು ಕೊಟ್ಟಿರುವುದು 35 ಲಕ್ಷ ರೂಪಾಯಿಗಳನ್ನು ಮಾತ್ರ. ಈ 35 ಲಕ್ಷ ರೂಪಾಯಿಗಳಲ್ಲಿ ಈ ಪರಿಸ್ಥಿತಿಯನ್ನು ಹೇಗೆ ಸುಧಾರಣೆ ಮಾಡುವುಕ್ಕಾಗುತ್ತದೆ. ನಮ್ಮಲ್ಲಿ ಈಗ ಬರಗಾಲ ಹೆಚ್ಚಿಗೆ ಇರುವುದರಿಂದ ಹೆಚ್ಚು ಪರಿಹಾರವನ್ನು ಕೊಡಬೇಕು. ಆಮೇಲೆ, ಈ ವರ್ಷದಲ್ಲಿ ಸಾಮಾಜಿಕ,ಆರ್ಥಿಕ, ಶೈಕ್ಷಣಿಕವಾಗಿ ಯಾವುದಾದರೂ ಒಳ್ಳೆಯ ಕಾರ್ಯಕ್ರಮ ಹಾಕಿಕೊಂಡಿದ್ದಾರೆಯೇ ಎಂದರೆ ಏನೂ ಇಲ್ಲ. ಇವರು ಬರೀ ಭಾಷಣ ಮಾಡುತ್ತಾರೆ. ಇನ್ನು ವಿದ್ಯುಚ್ಛಕ್ತಿ ಅಭಿವೃದ್ಧಿಗೆ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಕೆಲವು ದಿವಸಗಳ ಹಿಂದೆ ಕರೆಂಟ್‌ಗೆ

ಇಬ್ಬರು ಸಿಕ್ಕಿ ಸತ್ತು ಹೋಗಿದ್ದಾರೆ. ಇವರಿಗೆ ಪರಿಹಾರ ಕೊಡಬೇಕಾಗಿದೆ. ಮೊನ್ನೆ ಒಬ್ಬ ನಿಜವಾಗಿ ಸಾಯಬೇಕೆಂದು ಹೋದರೆ ಅವತ್ತು ಕರೆಂಟ್ ಇರಲಿಲ್ಲ. ಈಗಿನ ಕಾಲದಲ್ಲಿ ಕರೆಂಟೇ ಇಲ್ಲದೆ ಇರುವಾಗ ಈ ಇಬ್ಬರು ಹೇಗೆ ಸತ್ತರೆಂದು ನನಗೆ ಆಶ್ಚರ್ಯವಾಗುತ್ತದೆ. ಈ ವಿದ್ಯುಚ್ಛಕ್ತಿ ಸುಧಾರಣೆ ಬಗ್ಗೆ ಏನೂ ಪರಿವರ್ತನೆ ಆಗುವುದಕ್ಕೆ ಸಾಧ್ಯವಿಲ್ಲ. ಇದನ್ನು ಹೇಗೆ ಸರಿಪಡಿಸುತ್ತೀರೋ ಗೊತ್ತಾಗುವುದಿಲ್ಲ. ಇನ್ನು ಹೈದರಾಬಾದ್-ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಮಾಡಿರುವುದು ನನಗೆ ಬಹಳ ಸಂತೋಷವಾಗಿದೆ. ನಮ್ಮ ಸರ್ಕಾರ ಇದ್ದಾಗ ಅದನ್ನು ಮಾಡಿತ್ತು. ಅದನ್ನು ಸಪರೇಟಾಗಿ ಮಾಡಬೇಕು. ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ಬರುವ ಎಲ್ಲಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಪ್ರತಿ ಕ್ಷೇತ್ರಕ್ಕೆ 50ಲಕ್ಷ ರೂಪಾಯಿಗಳ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಪ್ರತಿಯೊಬ್ಬ ಎಂ.ಎಲ್.ಎ.ಗಳು ಯಾವ ಯಾವ ಕೆಲಸಗಳನ್ನು ಮಾಡಿಸಬೇಕೆಂದು ತಿಳಿಸುವುದಕ್ಕೆ ಹೇಳಲಾಗಿತ್ತು. ಪ್ರತಿ ತಾಲ್ಲೂಕಿನಲ್ಲಿ ಆಯಾ ಎಂ.ಎಲ್.ಎ.ಗಳು ತೋರಿಸಿದ ಕೆಲಸಗಳನ್ನು 50 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮಾಡಬೇಕೆಂದು ಹೈ ಪವರ್ ಕಮಿಟಿಯಲ್ಲಿ ತೀರ್ಮಾನವಾಗಿತ್ತು.

ಅದಕ್ಕೆ ನಮಗೆ ಲೆಟರ್ ಬಂತು. ನಾವುಎಲ್ಲಾ ಲೆಟರ್ ಕಳಿಸಿದ್ದೇವೆ. ಒಸ್ಟಿಮೇಟ್ ಮಾಡಿದರು. ಎಸ್ಟಿಮೇಟ್ ಮಾಡಿ ಇಲ್ಲಿ ಬಂತು. ಇಲ್ಲಿ ಬಂದ ಮೇಲೆ ಆರ್‌ಡಿಸಿ ಸೆಕ್ರೆಟರಿಗೆ ಕಳಿಸಿದ್ದೇವೆ ಎನ್ನುತ್ತಾರೆ ಆರ್.ಡಿ.ಸಿ. ಸೆಕ್ರೆಟರಿ ಅವರು ಮತ್ತೊಬ್ಬ ಸೆಕ್ರೆಟರಿಗೆ ಗಳಿಸಿದ್ದೇವೆ ಎಂದು ಹೇಳುತ್ತಾರೆ. ಹೀಗೆ ಆ ಸೆಕ್ರೆಟರಿ ಈ ಸೆಕ್ರೆಟರಿ ಎಂದು ಓಡಾಡುತ್ತಿರುತ್ತದೆ. ಹೀಗೆ ಓದಾಡುತ್ತಿರುತ್ತವೆಯೇ ಹೊರತು ಖರ್ಚು ಯಾವಾಗ ಮಡಬೇಕು ಅಂದರೆ ಮಾರ್ಚ್ ಒಳಗೆ 50 ಲಕ್ಷ ರೂಪಾಯಿ ಖರ್ಚು ಮಾಡಬೇಕು.

ಶ್ರೀ ಬಸವರಾಜ ರಾಯ ರೆಡ್ಡಿ: ನೀವು ಹೇಳುವುದನ್ನು ಯೂರೂ ಬರೆದುಕೊಳ್ಳುತ್ತಿಲ್ಲ. ಸುಮ್ಮನೇ ಮಾತನಾಡಿದ ಹಾಗೆ ಆಗುತ್ತದೆ.

(ಗೊಂದಲ)

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ: ನೀರಿನ ವ್ಯವಸ್ಥೆ ಬಗ್ಗೆ ಹೇಳಿದರು. ನಾನು ಬರೆದುಕೊಂಡಿದ್ದೇನೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೈ ಪವರ್ ಕಮಿಟಿಯಲ್ಲಿ ಅಪ್ರೂವ್ ಆಗಿದೆ ಕೆಲಸ ನಡೆದಿಲ್ಲ. ಎಂದು ಹೇಳಿದರು ನಾನು ಕೇಳುತ್ತಾ ಇದ್ದೇನೆ. ಪಕ್ಕದಲ್ಲಿ ಹನುಮೇಗೌಡರು ಸಹ ಕುಳಿತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಚೀಫ್ ಸೆಕ್ರೆಟರಿಯವರ ಹತ್ತಿರ ನಾವು ಹೋಗಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವ ಬಗ್ಗೆ ನಿಮಗೆ ಆದೇಶ ಬಂದಿದೆ ತಕ್ಷಣ ಕೆಲಸ ಶುರು ಮಾಡಿ ಎಂದು ಕೇಳಿದೆವು. ಅವರು ಹೇಳುತ್ತಾರೆ ನಮ್ಮಲ್ಲಿ ಯಾವ ಆದೇಶವೂ ಇಲ್ಲ. ನಮಗೆ ಬರಿ ಎಸ್ಟಿಮೇಟ್ ಮಾಡಿ ಕಳಿಸಿ ಎಂದು ಹೇಳಿದ್ದಾರೆ. ಎಸ್ಟಿಮೇಟ್ ಮಾಡಿ ಕಳಿಸಿದ್ದೇವೆ ಕೆಲಸ ಮಾಡತಕ್ಕ ಬಗ್ಗೆ ನಮ್ಮಲ್ಲಿ ಯಾವ ಆದೇಶವೂ ಇಲ್ಲ ಅದಕ್ಕೆ ಆದೇಶ ಕೊಡಿ ಎನ್ನುತ್ತಾರೆ ನೀವು ಆದೇಶ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಆದೇಶ ಕೊಟ್ಟಿದ್ದಾರೆ ಯಾರ್ಯಾರು ಕ್ವಾಲಿಫಿಕೇಶನ್ ಕೇಳಿದ್ದಾರೊ ಅವರಿಗೆ ಚೀಫ್ ಸೆಕ್ರೆಟರಿಯವರು ಈಗಾಗಲೇ ಹೇಳಿದ್ದಾರೆ ಪೆಂಡಿಂಗ್ ಅಪ್ರೂವಲ್ ಗೆ 50 ಲಕ್ಷ ರೂಪಾಯಿಯ ಪ್ರಪೋಸಲ್ ಇದ್ದರೆ ನೀವು 30 ಲಕ್ಷ ರೂಪಾಯಿವರೆಗೆ ಕೆಲಸ ತೆಗೆದುಕೊಳ್ಳಬಹುದು ಮತ್ತು ಸ್ಪ್ಲಿಟ್ ಆಫ್ ಮಾಡಿ ಕೂಡ ಟೆಂಡರ್ ಕಾಲ್‌ಫಾರ್ ಮಾಡುವುದಕ್ಕೆ ಲೇಟ್ ಆದರೂ ಪೀಸ್

ವರ್ಕ್ ಒಂದೊಂದು ಲಕ್ಷ ರೂಪಾಯಿಯಂತೆ ಮೂರು ಲಕ್ಷವರೆಗೆ ನೀವು ಒಂದು ಒಂದೊಂದು ಬಿಲ್ ಮಾಡಿ ತೆಗೆದುಕೊಳ್ಳಬೇಕು ಎಂದು ಓರಲ್ ಇನಸ್ಟ್ರಕ್ಷನ್ ಕೊಟ್ಟಿದ್ದಾರೆ ಮೊನ್ನೆ ನಮ್ಮ ಚೀಫ್ ಸೆಕ್ರೆಟರಿಯವರು ಅದೇ ಪ್ರಾಬ್ಲಮ್ ಇದೆ ಎಂದು ಬಂದಿದ್ದರು ಅವರಿಗೆ ಕ್ಲಿಯರ್ ಇನ್‌ಸ್ಟ್ರಕ್ಷನ್ಸ್ ಕೊಟ್ಟಿದ್ದಾರೆ. ಅದು ಕೆಲಸದ ಹಿಂದೆ ಇದೆ ಬಹುಶಃ ತಮ್ಮ ಚೀಫ್ ಸೆಕ್ರೆಟರಿಯವರು ಓದಿರಲಿಕ್ಕಿಲ್ಲ ಒಂದು ವೇಳೆ ಅಂಥಾದ್ದು ಏನಾದರೂ ಇದ್ದರೆ ಇನ್ನೊಮ್ಮೆ ನಮ್ಮ ಚೀಫ್ ಸೆಕ್ರೆಟರಿಯವರನ್ನು ಕರೆಸಿಕೊಳ್ಳೋಣ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾನು ಮೊನ್ನೆ ಹೋಗಿ ಕೇಳಿದ್ದೇನೆ. ಆದೇಶ ಕಳಿಸಿ ಎಷ್ಟು ದಿವಸ ಆಯಿತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾವಾಗ ಪ್ರೊಪೋಸಲ್ ಕಳಿಸಿದ್ದಾರೆ ಅದರ ಹಿಂದೆ ಕಳಿಸಿದ್ದೇವೆ. ಒಂದು ವೇಳೆ ಅವರು ಕ್ಲಾರಿಫಿಕೇಶನ್ ಕೇಳಿರಲಿಲ್ಲ, ಎಂದರೆ ಅವರಿಗೆ ಹೋಗದೇ ಇರಬಹುದು. ಆದರೆ ಎಲ್ಲಾ ಕಡೆ ಕೂಡ ಕ್ಲಾರಿಫಿಕೇಶನ್ ಬಂದಿದೆ. ನಿಮ್ಮದು ಹೋಗಿಲ್ಲ ಎಂದರೆ ಮಾತನಾಡಿ ಕೊಡಿಸೋಣ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಬರೇ ಲ್ಯಾಂಡ್ ಆರ್ಮಿಗಾದರೂ ಕೊಡಲಿ ಯಾರಿಗಾದರೂ ಕೊಟ್ಟು ಕೆಲಸ ಮಾಡಿಸಬೇಕು. ಪೀಸ್ ವರ್ಕ್ ಮಾರ್ಚ್ ಒಳಗೆ ಆಗಬೇಕು. ಇಲ್ಲದಿದ್ದರೆ 50 ಲಕ್ಷ ರೂಪಾಯಿಗಳ ಕೆಲಸಗಳು ಆಗುವುದಿಲ್ಲ. ನಾವು ಊರಿಗೆ ಹೋದರೆ 50 ಲಕ್ಷ ರೂಪಾಯಿ ಏನು ಆಯಿತು ಎಂದು ಎಲ್ಲರೂ ನಮ್ಮನ್ನು ಹಿಡಿದುಕೊಂಡು ಕೇಳುತ್ತಾರೆ. ನಮ್ಮ ಘಜೇತಿಯನ್ನು ತಪ್ಪಿಸಬೇಕು. ತಕ್ಷಣ ಆರ್ಡರನ್ನು ಹೊರಡಿಸಬೇಕು. ಆರ್ಡರ್ ಹೊರಡಿಸಿದ್ದರೆ ಸಂತೋಷ ಹೊರಡಿಸಿಲ್ಲ ಎಂದರೆ ತಕ್ಷಣ ಆರ್ಡರ್ ಹೊರಡಿಸಬೇಕು. ಆದೇಶ ಕೊಟ್ಟು ತಕ್ಷಣ ಕೆಲಸ ಶುರು ಮಾಡುವುದಕ್ಕೆ ಹೇಳಬೇಕು. ಚೀಫ್ ಸೆಕ್ರೆಟರಿಯಿಂದ ಹೋಗಬೇಕು. ಆರ್.ಡಿ.ಸಿ. ಸೆಕ್ರೆಟರಿಗೆ ಇವರು ಕೊಟ್ಟಿದ್ದಾರೆ. ಬಿಲ್ ಅವರ ಹತ್ತಿರ ಇರಬಹುದು. ಕೆಲಸ ಯಾರು ಮಾಡಬೇಕೋ ಗೊತ್ತಿಲ್ಲ. ಇವರ ಮೇಲೆ ಅವರು ಅವರ ಮೇಲೆ ಇವರು ಹೇಳುವುದು. ಅಧಿಕಾರದಲ್ಲಿ ಬಂದು ಕಷ್ಟ ಏನಿದೆ ಅಂದರೆ ಇಂತಹ ಒಂದು ಸಣ್ಣದು ವಿಷಯ ಇದೆ ಎಂದರೆ ಒಂದು ಕ್ಲಾರಿಫಿಕೇಶನ್ ಕೇಳುವುದು. ಅದು ಅಲ್ಲಿ ಇಲ್ಲಿ ಬಿದ್ದು ಬಿಡುವುದು, ನಾವು ಗೋವಿಂದ ಎಂದು ಕುಳಿತುಕೊಳ್ಳುವುದು, ಅದು ಆಗುವುದೇ ಇಲ್ಲ ಯಾವುದಾದರೂ ಒಂದು ವಿಷಯ ಕೇಳಿದರೆ ಅದಕ್ಕೆ ಒಂದು ಕ್ಲಾರಿಫಿಕೆಶನ್‌ಗೆ ಬರುವುದು ಆದರಿಂದ ಏನೂ ಆಗುವುದಿಲ್ಲ ಅದು ಆಲ್ಲಿಯೇ ಇದು ಇಲ್ಲಿಯೇ ನಾವು ಇಲ್ಲಿಯೇ ನಮಗೆ ಅಲ್ಲಿ ಜನರ ಕಾಟ ತಪ್ಪುವುದಿಲ್ಲ. ಇದನ್ನು ತಾವು ತಪ್ಪಿಸಬೇಕು. ಯಾರೋ ಒಬ್ಬರಿಂದ ಕೆಲಸ ಮಾಡಿಸಬೇಕು. ಯಾರು ಕೆಲಸ ಮಾಡಬೇಕು ಎಂಬ ಬಗ್ಗೆ ತಾವು ವ್ಯವಸ್ಥೆ ಮಾಡಬೇಕು.ಇಲ್ಲ ಎಂದರೆ ಬಹಳ ಕಷ್ಟ ಆಗುತ್ತದೆ.

ಛೇರ್ಮನ್ : 20 ನಿಮಿಷ ತೆಗೆದುಕೊಂಡಿದ್ದೀರಿ ದಯಮಾಡಿ ಮುಗಿಸಬೇಕು. ನಾನು ಬೇರೆಯವರ ಹೆಸರನ್ನು ಕರೆಯಬೇಕಾಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಒಂದು ನಿಮಿಷ ತಡೆಯಿರಿ..... ಛೇರ್ಮನ್ 20 ನಿಮಿಷ ಆಗಿದೆ. ನೀವು ಮುಗಿಸಿಲ್ಲ ನೀವು ನೆರವಾಗಿ ಸಬ್ಜೆಕ್ಟ್‌ಗೂ ಬರುವುದಿಲ್ಲ. ಕಾನ್ವರ್ಜೇಷನ್ನಿಗೆ ಹೋಗುತ್ತೀರಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನೀವು ಬಿಟ್ಟರೆ ಮಾತನಾಡುತ್ತೇನೆ. ಐದು ನಿಮಿಷ ಅವಕಾಶ ಕೊಡಿ.

ಛೇರ್ಮನ್ : ಮೂರು ನಿಮಿಷ ಮಾತ್ರ ಅವಕಾಶ ಇದೆ ಅಷ್ಟರಲ್ಲಿ ಮುಗಿಸಿಬಿಡಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಈಗ ಸಹಕಾರ ಸಂಘದಲ್ಲಿ 10 ಸಾವಿರಕ್ಕಿಂತ ಹೆಚ್ಚಗೆ ಸಾಲ ತೆಗೆದುಕೊಂಡರೆ 30 ಸಾವಿರ 40 ಸಾವಿರ ಆಗುತ್ತದೆ. ಇಂಡಸ್ಟ್ರಿಸ್ ನವರಿಗೆ ಅನುಕೂಲ ಇದೆ. 30-40 ಸಾವಿರ ಕೊಟ್ಟರೆ ರಿಜಿಸ್ಟರ್ ಮಾಡುವುದಕ್ಕೆ ಎಷ್ಟು ಹಣ ಆಗುತ್ತದೆ. ತಾವು ಇದಕ್ಕೆ ಒಂದು ಅಮೆಂಡ್‌ಮೆಂಟ್ ತರಬೇಕು. ಅಮೆಂಡ್‌ಮೆಂಟ್ ತರಲಿಲ್ಲ ಎಂದರೆ ರೈತರಿಗೆ ಬಹಳ ತೊಂದರೆ ಆಗುತ್ತದೆ. ಈಗ ಯಾವುದೇ ಒಂದು ಕೆಲಸ ಕೊಟ್ಟರೂ 30 ಸಾವಿರ ಆಗುತ್ತದೆ ಅವರು ರಿಜಿಸ್ಟರ್ ಮಾಡಬೇಕು. ಆದರಿಂದ ಎಷ್ಟು ತೊಂದರೆ ಆಗುತ್ತದೆ? ನೀವು ಏನು ಬರೆದಿದ್ದೀರಿ ಅಂದರೆ 15 ಸಾವಿರದವರೆಗೆ ಸಣ್ಣ ಕಾರ್ಮಿಕರಿಗೆ ಎಂದು ಬರೆದಿದ್ದೀರಿ. ಸಣ್ಣ ಸಣ್ಣ ಸಹಕಾರ ಸಂಘಗಳಲ್ಲಿ ತಾವು ವಿನಾಯಿತಿ ಕೊಡತಕ್ಕ ವ್ಯವಸ್ಥೆ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ. ಆ ಮೇಲೆ ಬಸ್ ವಿಷಯ. ಮಾನ್ಯ ಅಜೀಜ್ ಸೇಠರ ಬಸ್ಸನ್ನು ದೇವರೇ ಕಾಪಾಡಬೇಕು. ಹಿಂದೆ ಸಿಂಧ್ಯಾ ಸಾಬ್ ಆಯಾ ಎನ್ನುತ್ತಿದ್ದರು ಈಗ ಅಜೀಜ್ ಸೇಠ್ ಅಯಾ ಎಂದು ಹೇಳುತ್ತಾರೆ. ಏಕೆಂದರೆ ಸಿಂಧ್ಯಾರವರು ಚೆನ್ನಾಗಿ ಕೆಲಸ ಮಾಡಿದರು. ಈಗ ಇವರು ಯಾರಿಗೂ ಸಿಗುವುದಿಲ್ಲ. ನಗು ನಗುತ್ತಾ ಉತ್ತರ ಕೊಡುತ್ತಾರೆ.

ಛೇರ್ಮನ್ : ಈ ತಮಗೆ ಏನು ಆಗಬೇಕೊ ಅದನ್ನು ಹೇಳಿ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಮಗೆ ಆಗಬೇಕಾಗಿರುವುದು ಒಂದೆ ಒಂದು ಸಾರಿ ಮಾನ್ಯ ಅಜೀಜ್ ಸೇಠರವರು ಬಸ್‌ನಲ್ಲಿ ಔರಾದ್‌ಗೆ ಪ್ರಯಾಣ ಮಾಡಿ ಬೆಂಗಳೂರಿಗೆ ಬಂದರೇ ಸಾಕು. ನಮ್ಮದು ಎಲ್ಲಾ ಬಸ್ಸಿನ ಕೆಲಸ ಮುಗಿಯುತ್ತದೆ. ಇವರು ಪ್ರಯಾಣ ಮಾಡಿ ಬರಬೇಕು. ಏಕೆಂದರೆ ಇವರಿಗೆ ಬಸ್ಸಿನ ಗಂಧವೇ ಇಲ್ಲ. ರೋಡ್ ಇಲ್ಲ ಯಾವ ಊರಿಗೂ ಬಸ್ ಇಲ್ಲ. ಊರೂರಿಗೆ ಬಸ್ ಮಾಡುತ್ತೇವೆ ಎಂದು ಹೇಳುತ್ತಾರೆ. ಯಾವ ಊರಿಗೂ ಬಸ್ ಇಲ್ಲ. ಯಾವ ಊರಿಗೆ ಹೋದರೂ ಪಜೀತಿ ನಮ್ಮನ್ನು ಜನ ಫೇರಾವ್ ಮಾಡುತ್ತಾರೆ. ಊರಿಗೆ ಬಸ್ ಇಲ್ಲ ಜನ ಏನು ಬಿಡುವುದು? ವಿಧಾನ ಸೌಧವನ್ನು ತಂದು ಆ ಊರಿನಲ್ಲಿ ಇಡಬೇಕು ಎಂದು ಕೇಳುವುದಿಲ್ಲ. ಲೋಕಸಭೆಯನ್ನು ತಂದು ಇಡಬೇಕು ಎಂದು ಹೇಳುವುದು ಅವರಿಗೆ ಬೇಕಾಗಿರುವುದು ಅಂಗನವಾಡಿಗಳು ರೋಡ್ ಬಸ್ ನೀರು ಇತ್ಯಾದಿ.

ಶ್ರೀ ಎ.ಎಂ. ಹಿಂಡಸಗೇರಿ : ಇವರ ಸರ್ಕಾರ ಇದ್ದಾಗ ಯಾವ ಮಿನಿಸ್ಟರ್ ಬಸ್ಸಿನಲ್ಲಿ ಹೋಗಿದ್ದಾರೆ. ಸಾರಿಗೆ ಮಂತ್ರಿಗಳು ಹೋಗಿದ್ದಾರಾ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ: ಹೋಗಿದ್ದಾರೆ. ನಮ್ಮ ಸಿಂಧ್ಯಾರವರು ಹೋಗಿದ್ದಾರೆ.

ಶ್ರೀ ಎ.ಎಂ. ಹಿಂಡಸಗೇರಿ : ಹಾಗಾದರೆ ಇವರೂ ಹೋಗುತ್ತಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನನಗೆ ಮಾತನಾಡುವುದಕ್ಕೆ ಬಿಡಿ. ಅವರು ಬೆಲ್ ಹೊಡೆಯುತ್ತಿದ್ದಾರೆ. ನಾನು ಇನ್ನೂ ಮಾತನಾಡಿಯೇ ಇಲ್ಲ. ಈ ಸದನದಲ್ಲಿ ನಾನು ಒಂದು ಪ್ರಶ್ನೆ ಕೇಳಿದ್ದೆ. ಸರ್‌ಚಾರ್ಜನ್ನು ಮತ್ತೊಮ್ಮೆ ಜಾಸ್ತಿ ಹಾಕುತ್ತಿರಾ ಎಂದು ಕೇಳಿದ್ದೆ ಅದಕ್ಕೆ ಹೌದು ಎಂದು ಸರಕಾರದವರು ಹೇಳಿದ್ದಾರೆ. ಈ ಬಗ್ಗೆ ಉತ್ತರದಲ್ಲಿ ಸರ್‌ಚಾರ್ಜ್ ಹಾಕುತ್ತಿರೋ ಇಲ್ಲವೋ ಎಂಬ ಬಗ್ಗೆ ತಾವು ಉತ್ತರದಲ್ಲಿ ಹೇಳಬೇಕು. ಆ ಮೇಲೆ ಈಗ ಬಜಾವತ್ ಅವಾರ್ಡ್ ಪ್ರಕಾರ ನಮ್ಮಲ್ಲಿ ಕೃಷ್ಣ ಬೇಸಿನ್ ಬರುವುದಿಲ್ಲ. ಕಾವೇರಿ ಬೇಸಿನ್‌ನಲ್ಲಿಯೂ ಬರುವುದಿಲ್ಲ. ನಮಗೆ ಬರುವುದು ಗೋದಾವರಿ ಬೇಸಿನ್‌ನಲ್ಲಿ ಮಾತ್ರ. ಗೋದಾವರಿ ಬೇಸಿನ್‌ನಲ್ಲಿ ಬರತಕ್ಕಂಥ ನೀರು ಎಷ್ಟಾಗುತ್ತದೆ. ಎಂದು ಒಂದು ಪ್ರಶ್ನೆಯನ್ನು ಕೇಳಿದ್ದೇ ಅದಕ್ಕೆ ಮಾಹಿತಿ ಇಲ್ಲ.

ಎಂದು ಉತ್ತರವನ್ನು ಕೊಟ್ಟಿದ್ದಾರೆ ಅದರ ಉತ್ತವನ್ನು ನಾನೇ ಬೇಕಾದರೆ ಹೇಳುತ್ತೇನೆ. ನಮಗೆ 15.15 ಟಿ.ಎಂ.ಸಿ ನೀರು ಗೋದಾವರಿ ಬೇಸಿನ್‌ಗೆ ನಿಜಾಮನಗರದ ಒಳಗಡೆ ಹರಿಯತಕ್ಕಂಥ ನೀರು ಬರುತ್ತದೆ. ಅದರಲ್ಲಿ ಕಾರಂಜಾಕ್ಕೆ 9 ಟಿ.ಎಂ.ಸಿ. ನೀರು ಉಪಯೋಗ ಮಾಡಿದ್ದೀರಿ. ಇನ್ನೂ 4 ಟಿ.ಎಂ.ಸಿ ನೀರು ಹಾಗೆಯೆ ಇದೆ. ಅದಕ್ಕೆ ಮಾಂಜರಾ ಲಿಫ್ಟ್ ಇರಿಗೇಶನ್ ಮಾಡಿ ಎಂದು ಒತ್ತಾಯ ಮಾಡುತ್ತಾ ಇದ್ದೇವೆ. ಅಲ್ಲಿ ನೀರು ಇಲ್ಲ ಎಂದು ರಿಪೋರ್ಟ್ ಕಳುಹಿಸುತ್ತೀರಿ ಅದಕ್ಕೆ ದಯಮಾಡಿ ಮಾಂಜರ ಲಿಫ್ಟ್ ಇರಿಗೇಷನ್ ಯೋಜನೆಯ ಬಗ್ಗೆ ಎಷ್ಟೋ ವರ್ಷಗಳಿಂದ ನಮ್ಮಲ್ಲಿ ಪ್ರೊಪೋಸಲ್ಸ್ ಇದೆ, ಅದನ್ನು ಮಾಡಿ. ಏಕೆಂದರೆ ಈ ನಾಲ್ಕು ಟಿ.ಎಂ.ಸಿ. ನೀರನ್ನು ನಾವು 2000 ಇಸವಿಯೊಳಗಾಗಿ ಉಪಯೋಗ ಮಾಡಿಲ್ಲ ಎಂದರೆ ನಮ್ಮ ನೀರಿನ ಹಕ್ಕು ಹೋಗುತ್ತದೆಯಾದ ಕಾರಣ ಅದನ್ನು ದಯಮಾಡಿ ಉಪಯೋಗ ಮಾಡಬೇಕು. ಇನ್ನೊಂದು 2.50 ಟಿ.ಎಂ.ಸಿ. ನೀರು ನಿಜಾಮಸಾಗರದ ಹೊರಗಡೆ ಹರಿಯತಕ್ಕಂಥದ್ದು ಏನಿದೆ ಅದರಲ್ಲಿ ತಾವು ಉಪಯೋಗ ಮಾಡಿಕೊಂಡಿದ್ದು 0.65 ಟಿ.ಎಂ.ಸಿ. ಮಾತ್ರವಾಗಿದ್ದು ಉಳಿದಿರತಕ್ಕಂಥದ್ದು 1.85 ಟಿ.ಎಂ.ಸಿ. ಮಾತ್ರ. ಈ ನೀರು ಔರಾದ್ ತಾಲ್ಲೂಕಿನಲ್ಲಿ ಮಾತ್ರ ಬರುತ್ತಿದ್ದು ಅದು ಕೂಡ ಸಣ್ಣ ಸಣ್ಣ ಕೆರೆಗಳಿಗೆ ಬರುತ್ತದೆ. ಅದನ್ನು ಕೂಡ 2000 ವರ್ಷದೊಳಗಾಗಿ ಮಾಡಿಲ್ಲ. ಅಂದರೆ ಬಹಳ ಅನಾಹುತ ಮತ್ತು ಅನ್ಯಾಯವಾಗುತ್ತದೆ. ಏಕೆಂದರೆ ನಮ್ಮಲ್ಲಿ ದೊಡ್ಡದಾದ ಯಾವ ಪ್ರಾಜೆಕ್ಟ್‌ಗಳೂ ಇಲ್ಲ. ಈ ಕೆಲಸವನ್ನು 2000 ಇಸವಿಯೊಳಗಾಗಿ ತಾವುಗಳು ಮಾಡುತ್ತೀರಿ ಎಂದು ನಂಬುತ್ತೇನೆ. ಉತ್ತರದಲ್ಲಿ ದಯವಿಟ್ಟು ಈ ಬಗ್ಗೆ ಹೇಳಬೇಕು.

ಹಾಗೇಯೇ ಬೀದರ್ ಜಿಲ್ಲೆಯನ್ನು ನೋ ಇಂಡಸ್ಟ್ರೀ ಜಿಲ್ಲೆ ಎಂದು ಪರಿಗಣಿಸಿದ್ದೀರಿ. ಅಲ್ಲಿ ಏನಾಗಿದೆ ಅಂದರೆ ಬಹಳಷ್ಟು ಜನರು ಕೈಗಾರಿಕೆಗಳನ್ನು ತೆರೆಯಲು ಮುಂದೆ ಬರುವುದಿಲ್ಲ. ವಿದ್ಯುಚ್ಛಕ್ತಿಯ ಸೌಲಭ್ಯ ಇಲ್ಲದೆ ಕೈಗಾರಿಕೆಗಳನ್ನು ಮಾಡುವುದಾದರೂ ಹೇಗೆ? ಅಲ್ಲಿ ನೀರಿನ ವ್ಯವಸ್ಥೆ ಇಲ್ಲ ವಿದ್ಯುತ್ ವ್ಯವಸ್ಥೆ ಇಲ್ಲ ಸಬ್ಸಿಡಿಯನ್ನು ಕೂಡ ಸೂಕ್ತವಾಗಿ ಸಕಾಲದಲ್ಲಿ ಕೊಡುವುದಿಲ್ಲ ಅಥವಾ ಕೊಡುವುದೇ ಇಲ್ಲ. ಹೀಗಾಗಿ ಯಾರು ಕೂಡ ಬೀದರ್‌ನಲ್ಲಿ ಇಂಡಸ್ಟ್ರೀ ಮಾಡಲು ಮುಂದೆ ಬರುವುದಿಲ್ಲ. ಬಂದವರು ಕೂಡ ತೊಂದರೆಗಳನ್ನು ಅನುಭವಿಸಿ ಫಜೀತಿ ಮಾಡಿಕೊಂಡು ಲುಕ್ಸಾನು ಮಾಡಿಕೊಂಡು ಮನೆಗೆ ಹೋಗಿದ್ದಾರೆ ಮನೆ ಮಾರು ಕಳೆದುಕೊಂಡು ಹೋಗಿದ್ದಾರೆ. ಇದು ಅಲ್ಲಿನ ಇಂಡಸ್ಟ್ರೀಯ ವಿಚಾರವಾಗಿದೆ. ಇದನ್ನು ಸರಿಪಡಿಸುತ್ತೀರಾ? ಇದರ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳುತ್ತೀರಿ ಎಂಬ ಬಗ್ಗೆ ಸ್ಪಷ್ಟವಾಗಿ ತಮ್ಮ ಉತ್ತರದಲ್ಲಿ ಹೇಳಬೇಕು.ಇನ್ನು ಅರಣ್ಯ ಭೂಮಿಯ ಒತ್ತುವರಿ ವಿಚಾರದಲ್ಲಿ ಹೇಳುವುದಾರೆ 1978ರಲ್ಲಿ ಯಾರು ಒತ್ತುವರಿ ಮಾಡಿಕೊಂಡಿದ್ದರು. ಅಂಥವರಿಗೆ 'ಸಿ' ಫಾರ್ಮ್ ಕೊಡುತ್ತೇವೆ. ಅದರ ನಂತರದವರಿಗೆ ಕೊಡುವುದಿಲ್ಲ. ಎಂದು ಹೇಳಿದ್ದಾರೆ. ಆದರೆ ಅಂಥವರಿಗೂ ಕೂಡ ಈವೊತ್ತಿನವರೆಗೆ 'ಸಿ' ಫಾರ್ಮ್‌ನ್ನು ಕೊಟ್ಟಿಲ್ಲ. ತಾವು ಆಶ್ರಮ ಜಮೀನನ್ನು ಸಕ್ರಮ ಗೊಳಿಸುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಯಾವಾಗ ಮಾಡುತ್ತೀರಿ? ಇದರಿಂದಾಗಿ ನಮ್ಮ ಬಾಗದಲ್ಲಿನ ಹರಿಜನ ಗಿರಿಜನರು ತುಂಬಾ ತೊಂದರೆಗೊಳಗಾಗಿದ್ದಾರೆ. ಅವರು ಪ್ರತಿ ದಿವಸ ಬಂದು ನಮ್ಮನ್ನು ಕೇಳಿಕೊಳ್ಳುತ್ತಿದ್ದಾರೆ. ಅವಿರಗೆ ಸಿ ಫಾರ್ಮ್ ಸಿಗುತ್ತಿಲ್ಲ ಎಂದು ಹೇಳುತ್ತಾರೆ. ಅವರಿಗೆ ಸಿ ಫಾರ್ಮ್ ಕೊಡತಕ್ಕಂಥ ಒಂದು ವ್ಯವಸ್ಥೆಯನ್ನು ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ಉತ್ತರದಲ್ಲಿ ದಯಮಾಡಿ ಹೇಳಬೇಕು.

ಇನ್ನು ಅರಣ್ಯ ಇಲಾಖೆಯಲ್ಲಿ ದಿನಗೂಲಿ ನೌರರು ಬಹಳಷ್ಟು ಜನರಿದ್ದಾರೆ. ಅವರು ತಮ್ಮ ಹೋರಾಡದ ಸಲುವಾಗಿ ಹತ್ತಾರು ಸಾರಿ ಉಪವಾಸ ಸತ್ಯಾಗ್ರಹ ಕುಳಿತರು. ನಾವೇ ಹೋಗಿ ಅವರನ್ನು ಸಮಾಧಾನ ಮಾಡಿ ಎಬ್ಬಿಸಿದ್ದೇವೆ. ಅವರನ್ನು

ಖಾಯಂಗೊಳಿಸುವ ಬಗ್ಗೆ ನಾನು ಕೂಡ ಇಲ್ಲಿ ಪ್ರಶ್ನೆಯೊಂದರ ಮೂಲಕ ಪ್ರಸ್ತಾಪ ಮಾಡಿದ್ದೆ. ಅದು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಯಾಯಿತು. ಹಾಗಾಗಿ ಇಲ್ಲಿ ಮಾತನಾಡುವುದು ಸಾಧ್ಯವಾಗಲಿಲ್ಲ ಅದರಲ್ಲಿಯೂ ಕೂಡ ಕೆಲವು ಜನರನ್ನು ಖಾಯಂ ಮಾಡಿದ್ದಾರೆ. ಔರಾದ್‌ನಲ್ಲಿ ಇದ್ದವರನ್ನು ಮಾತ್ರ ಖಾಯಂಗೊಳಿಸಿಲ್ಲ. ಅವರಿಗೆ ಇವರಿಗೆ ಏನಾದರೂ ಜಗಳ ಇತ್ಯಾದಿ ಇದ್ದರೆ ದಯಮಾಡಿ ಅದನ್ನು ಪರಿಹರಿಸಿ. ಎಷ್ಟು ಜನ ದಿನಗೂಲಿ ನೌಕರರನ್ನು ಖಾಯಂಗೊಳಿಸುವ ಬಗ್ಗೆ ನಿಮ್ಮಲ್ಲಿ ವ್ಯವಸ್ಥೆ ಇದೆ? ಈ 240 ಜನರನ್ನು ತಾವು ಯಾವಾಗ ಖಾಯಂಗೋಳಿಸುತ್ತೀರಿ? ಈ ಬಗ್ಗೆ ದಯಮಾಡಿ ತಿಳಿಸಬೇಕು.

ಕಾರಾಂಜಾ ಪ್ರಾಜೆಕ್ಟ್‌ನಲ್ಲಿ ಜಮೀನು ಕಳೆದುಕೊಂಡವರ ಮಕ್ಕಳಿಗೆ ಉದ್ಯೋಗ ಕೊಡುವ ಬಗ್ಗೆ ಹೇಳಿದ್ದೀರಿ. ಆದರೆ ಇದುವರೆಗೆ ಯಾರಿಗೂ ಉಪಯೋಗ ಕೊಟ್ಟಿಲ್ಲ. ಅದರ ಬಗ್ಗೆ ಅವರು ಸತ್ಯಾಗ್ರಹ ಮಾಡಿದರು ಅವರ ಪಜೀತಿ ಯಾರಿಗೂ ಬೇಡ ನಾವು ಅಲ್ಲಿಗೆ ಹೋದಾಗ ನಮ್ಮನ್ನು ಘೇರಾವ್ ಮಾಡಿದರು. ಆ ಬಗ್ಗೆ ಒಂದು ಸೂಕ್ತ ವ್ಯವಸ್ಥೆಯನ್ನು ಮಾಡಿ ಅವರಿಗೆ ನ್ಯಾಯ ದೊರಕಿಸಿಕೊಡಿ. ಇಲ್ಲಿ ಸದನದಲ್ಲಿ ಆ ಕುರಿತು ಪ್ರಶ್ನೆ ಕೇಳಿದರೆ ಉತ್ತರ ಸಿಗುತ್ತಾ ಇಲ್ಲ. ಅದನ್ನು ಮುಂದೂಡಲಾದ ಪ್ರಶ್ನೆ ಎಂದು ಮಾಡುತ್ತಾರೆ. ಈ ಬಗ್ಗೆ ಸಕಾಲಿಕ ಕ್ರಮವನ್ನು ತೆಗೆದುಕೊಳ್ಳುತ್ತೀರೋ ಇಲ್ಲವೋ ಎಂಬ ಬಗ್ಗೆ ಹೇಳಬೇಕು.

ಹಿಂದೆ ಇದ್ದ ಮುಖ್ಯ ಕಾರ್ಯದರ್ಶಿಯ ಬಗ್ಗೆ ಎಲ್ಲರೂ ಬಹಳ ಹೇಳುತ್ತಿದ್ದಾರೆ ಏನೆಂದು ನನಗೆ ಅರ್ಥವಾಗುತ್ತಿಲ್ಲ. ಯಾರು ಸತ್ಯವಂತರು ಹರಿಶ್ಚಂದ್ರರು ಎಂದು ನನಗೆ ಅರ್ಥವಾಗುತ್ತಿಲ್ಲ. ನನಗೆ ತಿಳಿದಂತೆ ಹಿಂದೆ ಇದ್ದ ಮುಖ್ಯ ಕಾರ್ಯದರ್ಶಿಯವರು ಆಗ ಎಂ.ಎಸ್.ಟಿ.ಎಲ್. ಮತ್ತು ಕೆ.ಎಸ್. ವಿ.ಐ.ಡಿ.ಸಿ. ಸಂಸ್ಥೆಗಳ ಜೊತೆ ಸಂಬಂಧ ಇದ್ದವರು. ಅವೆರಡರಲ್ಲಿ ಒಂದು ದೊಡ್ಡ ಸಂಸ್ಥೆ ಇನ್ನೊಂದು ಚಿಕ್ಕ ಸಂಸ್ಥೆ ಅಂದರೆ ಎಂ.ಎಸ್.ಐ.ಎಲ್. ಸಣ್ಣ ಸಂಸ್ಥೆ ಮುಖ್ಯಕಾರ್ಯದರ್ಶಿಯವರು ಎಂ.ಎಸ್.ಐ.ಎಲ್.ಗೆ ಅಧ್ಯಕ್ಷರಾಗಿದ್ದರು ಆದರೆ ಕೆ.ಎಸ್.ಐ.ಐ.ಡಿ.ಸಿ.ಗೆ ಬರೀ ಡೈರೆಕ್ಟರಾಗಿದ್ದರು. ಸಣ್ಣ ಸಂಸ್ಥೆಗೆ ಅದು ಹೇಗೆ ಅಧ್ಯಕ್ಷರಾಗಬಯಸಿದರು. ಅದರಲ್ಲಿ ಏನು ಅಂತಹ ವಿಶೇಷ ಇತ್ತು ಎಂದು ತಮ್ಮ ಮೂಲಕ ಸರ್ಕಾರವನ್ನು ಕೇಳುತ್ತೇನೆ ಇದಕ್ಕೆ ಸರ್ಕಾರ ಉತ್ತರ ಹೇಳಬೇಕು. ಅವರು ಫೈನಾನ್ಸ್ ಕಮಿಷನರಾಗಿದ್ದಾಗ ಎಂ.ಎಸ್.ಐ.ಎಲ್.ಗೆ ಡೈರೆಕ್ಟರಾಗಿದ್ದರು. ಡೈರೆಕ್ಟರಾಗಿದ್ದಾಗ ಮಾಡಿರತಕ್ಕ ಅನಾಹುತಗಳು ಬೇಕಾದಷ್ಟು ಜೂನ್ 9ನೇ ತಾರೀಖು ಟ್ರೈನಿಂಗ್‌ಗೆಂದು ಡೆಲ್ಲಿಗೆ ಹೋದರು ಆಗ ಅವರು ಇಳಿದುಕೊಂಡಿದ್ದು ಪಂಚಾತಾರಾ ಹೋಟಲ್‌ನಲ್ಲಿ ಅಂದರೆ ತಾಜ್‌ಮಹಲ್ ಹೋಟೆಲಿನಲ್ಲಿ ಅಲ್ಲಿ ಎಂಟು ದಿವಸ ಇದ್ದರು. ಎಷ್ಟು ಬಿಲ್ ಆಗಿರಬಹುದೆಂದು ಯೋಚನೆ ಮಾಡಿ. ಕರ್ನಾಟಕ ಭವನ ಬರೀ ಶಾಸಕರಿಗೆ ಮಾತ್ರ ಇದೆಯೋ ಅಧಿಕಾರಿಗಳಿಗೆ ಇಲ್ಲವೇ ಆ ಹೋಟಲಿನಲ್ಲಿ ಆದ ಬಿಲ್ ಅನ್ನು ಎಂ.ಎಸ್.ಐ.ಎಲ್. ಕೊಟ್ಟಿತು.

ಅವರ ಮಗ ಒಬ್ಬ ಡೆಲ್ಲಿಯಲ್ಲಿ ಓದುತ್ತಿದ್ದಾನೆ ಅಲ್ಲಿ ಅವನಿಗೊಂದು ಎಂ.ಎಸ್.ಐ.ಎಲ್. ಕಾರ್ ಇಲ್ಲಿ ಇವರಿಗೊಂದು ಕಾರ್. ಯಾರು ಸತ್ಯವಂತರು ಈಗ ಪ್ರಭಾಕರರರಾಯರ ಮೇಲೆ ಆರೋಪ ಮಾಡುತ್ತಿದ್ದಾರೆ. ಪಾಪ ಕೆಲಸ ಮಾಡುವವರು ಒಂದು ಸಲ ಎಡವಬಹುದು. ತಪ್ಪು ಮಾಡಬಹುದು ಆದರೆ ಈತ ಪತಿವ್ರತೆನಾ? ಏನು ಮಾಡಿದ್ದಾನೆಂದು ಹೇಳಿ. ಜಿಲ್ಲೆಯಲ್ಲಿ 30 ಸಾವಿರ ಕಾರಿಗೆ ಬಿಲ್ಲಾಗಿದೆ. ಎಂ.ಎಸ್.ಐ.ಎಲ್. ಯಾರು ಡೈರೆಕ್ಟರಾಗಿರುತ್ತಾರೋ ಅವರು ರೇಸ್ ಕ್ಲಬ್‌ನಲ್ಲಿ ಡೈರೆಕ್ಟರಾಗಿರುತ್ತಾರೆ. ಅವರಿಗೆ ಅವಕಾಶ ಇದೆಯೆಂದು ತನ್ನು ಹೆಂಡತಿ ಜೊತೆ ಕಲ್ಕತ್ತ ಬಾಂಬೆ ಡೆಲ್ಲಿಗಳಿಗೆ ಟೂರ್ ಹೋದರು. ಅದರ ಬಾಬ್ತು ಲಕ್ಷಗಟ್ಟಲೆ ಬಿಲ್ ಬಂದಿದೆ. ಇದು ಸತ್ಯವಂತಿಕೆಯೇ? ಪತಿವ್ರತಾಧರ್ಮವೇ? ಇವರ ವಿರುದ್ಧ

ಅಲ್ಲಿ ಡೆಲ್ಲಿಯಲ್ಲಿ ಒಂದರ ಮೇಲೆ ಇನ್ನೊಂದು ಎನ್‌ಕ್ವಯಿರಿ ನಡೆಯುತ್ತಿದೆ ದೆಹಲಿಯಲ್ಲಿ ಒಬ್ಬ ಉಚ್ಚ ಅಧಿಕಾರಿ ಅವರ ಸಂಬಂದಿಕರಿದ್ದಾರೆ. ಇಂಟಲಿಜೆನ್ಸ್ ಬ್ಯೂರೋದಲ್ಲಿ ಆತ ಫೈಲನ್ನು ಮುಚ್ಚಿಟ್ಟಿದ್ದಾರೆ. ಅದನ್ನು ತೆಗೆಸಿ ವಿಷಯ ತಾನಾಗೇ ಹೋರಬರುತ್ತದೆ.ಅವರು ಯಾವಾಗ ಎಂ.ಎಸ್.ಐ.ಲ್.ನಲ್ಲಿ ಡೈರೆಕ್ಟರಾಗಿದ್ದರು ಆಗ ಹದಿನೇಳು ಕೋಟಿಯದು ಒಂದು ಇನ್ನೊಂದು ಮೂರು ಕೊಟಿಯದು ಇಷ್ಟು ಬೆಲೆಯ ಸಿಮೆಂಟನ್ನು ಹೊರಗಿನ ದೇಶದಿಂದ ತರುವ ವ್ಯವಹಾರ ಮಾಡಿದರು.

SRI R. DAYANANDA RAO : Who is that officer? Lot us know.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಹಿಂದಿನ ಮುಖ್ಯಕಾರ್ಯದರ್ಶಿಯಾಗಿದ್ದ ಶ್ರೀ ಶಂಕರನಾರಾಯಣನ್ ಹೊರಗಡೆಯಿಂದ ಸಿಮೆಂಟ್ ತರಲು 17.24 ಕೋಟಿ ಮತ್ತು 3.2 ಕೋಟಿ ರೂಪಾಯಿಗಳನ್ನು ಸರ್ಕಾರದಿಂದ ಜಮಾ ಮಾಡಿದರು 19.83-84 ರಲ್ಲಿ ಸಿಮೆಂಟ್ ಪರ್ಚೇಸ್ ಮಾಡಿದ್ದರು ವ್ಯವಹಾರ ಮುಗಿಯಿತು. ಅದರ ಬಾಬ್ತು 2.40 ಕೋಟಿ ರೂಪಾಯಿಗಳನ್ನು ಸರ್ಕಾರಕ್ಕೆ ಕೊಡಬೇಕು. ಆದರೆ ಇವತ್ತಿಗೂ ಕೊಟ್ಟಿಲ್ಲ. ಆ ದುಡ್ಡು ಎಲ್ಲಿಗೆ ಹೋಯಿತು. ಆ ದುಡ್ಡು ಅಲ್ಲಿ ಏಕೆ ಉಳಿಯಿತು. ಈ ವಿವರವೆಲ್ಲ ಪುಸ್ತಕದಲ್ಲಿದೆ. ಪಾಪ ಶ್ರೀನಿವಾಸನ್ ಅನ್ನುವ ಫೈನಾನ್ಸಿಯಲ್ ಅಡ್ವೈಸರ್ ರಿಟೈರಾಗಿದ್ದಾರೆ. ಇವತ್ತು ಗೋಳಡುತ್ತಿದ್ದಾರೆ. ನನ್ನ ಗತಿ ದೇವರೇ ಗತಿ ಎಂದು ಅವರು ಬರೆದಿರುವ ಲೆಟರ್ ನನ್ನ ಬಳಿ ಇದೆ ಬೇಕಾದರೆ ಕೊಡುತ್ತೇನೆ ತೆಗೆದುಕೊಳ್ಳಿ. ಇಂಥ ಒಂದು ಪರಿಸ್ಥಿತಿ ಇದೆ. ರಿಟೈರ್ಡ್ ಆದಾಗ ನೆಮ್ಮದಿಯಾಗಿ ಮನೆಯಲ್ಲಿ ಮಲಗುವುದಕ್ಕೆ ಬಿಡಿ, ಮತ್ತು 2.49 ಕೋಟಿ ರೂಪಾಯಿಗಳನ್ನು ಕಂಪನಿಯಲ್ಲಿ ಏನಾದರೂ ಮಾಡಿ ಅಡ್ಜೆಸ್ಟ್ ಮಾಡಿಬಿಡಿ ಎಂದು ಹೇಳಿದ್ದಾರೆ. ಈ ಕಂಪನಿಯವರು ಒಂದು ವ್ಯವಹಾರವನ್ನು ತೆಗೆದುಕೊಂಡರು. ಈ ರೀತಿ ಇವರ ಹತ್ತಿರ 2.40 ಕೋಟಿ ರೂಪಾಯಿಗಳು ಇದ್ದಾಗ ಹೊರಗಡೆಯಲ್ಲಿ ಏತಕ್ಕೆ ಸಾಲವನ್ನು ತರಬೇಕಾಗಿತ್ತು ಸ್ವಾಮಿ? ಈ ದುಡ್ಡನ್ನು ಏನು ಮಾಡಿದರು ಎಂದರೆ ಶಂಕರನಾರಾಯಣನ್‌ಗೆ ತಿರುಗಾಡುವುದಕ್ಕೆ ಈ ಕಡೆಗೆ ಆ ಕಡೆಗೆ ಕಾರಿಗೆ ಮತ್ತು ದೊಡ್ಡ ದೊಡ್ಡ ಹೋಟೆಲ್‌ನಲ್ಲಿ ಮಜಾ ಮಡುವುದಕ್ಕೆ ಎಂದು ದುಡ್ಡು ಅಲ್ಲಿಗೆ ಹೋಯಿತು. ಇಂಥವರನ್ನು ನಾವು ಸತ್ಯವಂತರು ಎಂದು ಹೇಳುತ್ತೇವಲ್ಲಾ ಯಾರು ಸತ್ಯವಂತರು ಎಲ್ಲಿ ಇದ್ದಾರೆ ಎಂದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ಬೇಕಾದರೆ ಎನ್‌ಕ್ವಯಿರಿ ಮಾಡಿ ಸತ್ಯಾಂಶ ಹೊರಗೆ ಬರುತ್ತದೆ ನಾಲ್ಕು ಜನರಿಗೆ ಅದು ಗೊತ್ತಾಗಬೇಕು. ನನಗೆ ತಿಳಿದಮಟ್ಟಿಗೆ ನಾನು ಹೇಳುತ್ತಿದ್ದೇನೆ. ನಿಮಗೆ ರಿಪೋರ್ಟನ್ನು ನಾನು ಕೊಡುತ್ತಿದ್ದೇನೆ ಇದರ ಬಗ್ಗೆ ತಾವು ದಯವಿಟ್ಟು ನೋಡಬೇಕು. ಆಮೇಲೆ ಎನ್.ಜಿ.ಇ.ಎಫ್.ನಲ್ಲಿ.

ಉಪಾಧ್ಯಕ್ಷಿಣಿಯವರು : ತಾವು ಮುಗಿಸಬೇಕು. ಹೊಸ ಸಬ್ಜೆಕ್ಟ್‌ನ್ನು ತೆಗೆದುಕೊಳ್ಳುತಿದ್ದೀರಿ. ಇನ್ನು ಮಾನ್ಯ ಸಿಂಧ್ಯಾರವರು ಮಾತನಾಡುವುದರಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಆಯಿತು ಮುಗಿಸಿಬಿಡುತ್ತೇನೆ. ಎನ್.ಜಿ.ಇ.ಎಫ್. ನಲ್ಲಿ ನಾಲ್ಕು ಜನ ಅಧಿಕಾರಿಗಳಿಗೆ ಪ್ರಮೋಷನ್ನು ಕೊಟ್ಟಿದಾರೆ. ಮೊನ್ನೆ ನಮ್ಮ ಬೈರೇಗೌಡರು ಓದುತ್ತಿದ್ದರಲ್ಲಾ ಆ ರೆಸಲ್ಯೂಷನ್ ಇಲ್ಲಿ ಇದೆ. ಅಲ್ಲಿ ಯಾರು ತಪ್ಪು ಮಾಡಿದ್ದಾರೆ. ಅವರಿಗೆ ಪ್ರಮೋಷನನ್ನು ಕೊಟ್ಟಿದ್ದಾರೆ. ಯಾರು ಸುಮ್ಮನೆ ಕುಳಿತಿದ್ದಾರೆ. ಅವರಿಗೆ ಶಿಕ್ಷೆ. ಇದು ಯಾವ ಧರ್ಮ? ಇದು ಯಾವ ನ್ಯಾಯ? ಇದರ ಬಗ್ಗೆ ತಾವು ಪರಿಶೀಲನೆ ಮಾಡಬೇಕು. ಈ ರೆಸಲ್ಯೂಷನನ್ನು ನಾನು ತಮಗೆ ಕಳುಹಿಸಿಕೊಡುತ್ತೇನೆ. ಇದನ್ನು ಓದಬೇಕಾಗಿತ್ತು. ಆದರೆ ಉಪಾಧ್ಯಕ್ಷರು 'ಸಾಕು ಮುಗಿಸಿ' ಎಂದು ಹೇಳುತ್ತಿರುವುದರಿಂದ ಇದನ್ನು ತಮಗೆ ನಾನು ಕಳುಹಿಸಿಕೊಡುತ್ತಿದ್ದೇನೆ. ಇನ್ನು ಹೇಳುವುದಕ್ಕೆ ಬಹಳ ವಿಷಯಗಳು ಇದೆ ಆದರೆ ಉಪಾಧ್ಯಕ್ಷಿಣಿಯವರು ಏತಕ್ಕೋ ಬಿಡುತ್ತಿಲ್ಲ, ನೀರಂತೂ ನಮಗೆ ಕೊಡುವುದಕ್ಕೆ ಆಗುತ್ತಿಲ್ಲ. ತಮ್ಮಲ್ಲಿ ವಿನಾದರೂ

ಬೀರಿನ ವ್ಯವಸ್ಥೆ ಪೈಪ್ ಸಿಸ್ಟಂ ಏನಾದರೂ ಇದೆಯೋ ಏಕೆಂದರೆ ಪೈಪ್ ಸಿಸ್ಟಂ ಮಾಡಿ ಸುದ್ದಿಯನ್ನು ಮಿನಿಮಮ್ ಬಿಲ್ ಬರುವ ಹಾಗೆ ತಮ್ಮಲ್ಲಿ ಮನೆಮನೆಗೆ ಏನೋ ಇದೆ ಎಂಬ ಸುದ್ದಿಯನ್ನು ಕೇಳಿದ್ದೇನೆ. ಆ ರೀತಿ ಪೈಪನ್ನು ಹಾಕಿ ಎಲ್ಲಾ ಕಡೆ ಮನೆಮನೆಗೆ ಬೀರು ವಿಸ್ಕಿ ಸಪ್ಲೈ ಮಾಡಿ ನಿಮ್ಮ ಬಿಲ್ ಬರುವ ಹಾಗೆ ಏನಾದರೂ ಮಾಡುವುದಕ್ಕೆ ತಮ್ಮಲ್ಲಿ ವ್ಯವಸ್ಥೆ ಇದೆಯೇ? ನೀರಂತೂ ಕೊಡುವುದಕ್ಕಾಗುವುದಿಲ್ಲ. ನಲ್ಲಿಯಂತೂ ಖಾಲಿ ಇದೆ. ಅದರಲ್ಲಿ ಹೊಗೆ ಬರುತ್ತಿದೆ. ಆದ್ದರಿಂದ ಈ ವ್ಯವಸ್ಥೆ ತಮ್ಮಲ್ಲಿದೆಯೇ ಎಂದು ಕೇಳುತ್ತೇನೆ ಆ ಮೇಲೆ ಸರ್ಕಾರದವರು ಈ ಕಾರ್ಯಕ್ರಮಗಳಲ್ಲಿ ವಿಫಲರಾಗಿದ್ದಾರೆ, ಯಾವುದನ್ನೂ ಸರಿಯಾಗಿ ಮಾಡುತ್ತಿಲ್ಲ ಅದಕ್ಕಾಗಿ ನಾನು ರಾಜ್ಯಪಾಲರ ಭಾಷಣವನ್ನು ವಿರೋಧಿಸುತ್ತಾ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಸನ್ಮಾನ್ಯ ಉಪಾಧ್ಯಕ್ಷೆಯವರೇ ನನ್ನ ಸಹೊದ್ಯೋಗಿಗಳಾದ ಶ್ರೀಮತಿ ಚಂದ್ರಪ್ರಭಾ ಅರಸ್‌ರವರು ಸನ್ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ವಂದನಾ ನಿರ್ಣಯವನ್ನು ಏನು ಮಾಡಿಸಿದ್ದಾರೆ. ಅದರ ಬಗ್ಗೆ ಕಳೆದ ಎರಡು ವಾರಗಳಲ್ಲಿ ಸಾಕಷ್ಟು ಚರ್ಚೆಯನ್ನು ಎರಡು ಕಡೆಯ ಸದಸ್ಯರುಗಳ ಅಭಿಪ್ರಾಯಗಳನ್ನೂ ನಾವು ಕೇಳಿದ್ದೇವೆ. ಈ ಸಂಧರ್ಭದಲ್ಲಿ ನಾನು ಈ ವಂದನಾ ನಿರ್ಣಯದ ಬಗ್ಗೆ ಎರಡು ತಿದ್ದುಪಡಿಗಳನ್ನು ಸಹಿತ ಸನ್ಮಾನ್ಯ ಅಧ್ಯಕ್ಷರು ಮತ್ತು ತಮ್ಮ ಕಾರ್ಯಾಲಯಕ್ಕೂ ಸಹಾ ಕಳುಹಿಸಿಕೊಟ್ಟಿದ್ದೇನೆ. ಈ ತಿದ್ದುಪಡಿಗಳ ಬಗ್ಗೆ ನಾನು ನಾಳೆ ಮಾತನಾಡುವವನಿದ್ದೇನೆ. ಇವತ್ತಿನ ದಿವಸ ಈ ಒಂದು ಚರ್ಚೆಯಲ್ಲಿ ನಮ್ಮ ಕರ್ನಾಟಕ ರಾಜ್ಯದ ಜನತೆಯ ದುರ್ದೈವ ಎಂದು ನಾನು ತಿಳಿದಿದ್ದೇವೆ. ಅದು ಕಳೆದು ಎರಡು ವರ್ಷಗಳಲ್ಲಿ ನಮಗೆ ಮೂರು ಜನ ರಾಜ್ಯಪಾಲರು ಮೂರು ಭಾಷಣಗಳನ್ನು ಮಾಡಿದ್ದಾರೆ.

ಸಾಮಾನ್ಯವಾಗಿ ರಾಜ್ಯಪಾಲರುಗಳ ಭಾಷಣ ನಮಗೆಲ್ಲಾ ಗೊತ್ತಿರುವ ಹಾಗೆ ಸರ್ಕಾರದ ನೀತಿ ಸರ್ಕಾರದ ನಿಲುವು ಮತ್ತು ಸರ್ಕಾರ ಏನು ಮಾಡಬೇಕೆಂದು ಬಯಸುತ್ತದೆ ಎನ್ನತಕ್ಕಂಥದ್ದನ್ನು ರಾಜ್ಯಪಾಲರ ಮೂಲಕ ನಾವು ಹೇಳಿಸುತ್ತೇನೆ. ರಾಜ್ಯಪಾಲರ ಮನಸ್ಸಿನಲ್ಲಿ ಏನು ಇದೆ ರಾಜ್ಯಪಾಲರು ಏನು ಮಾಡಬೇಕು ಎಂದು ಇದ್ದಾರೆ ಎನ್ನುವುದು ಸಾಮಾನ್ಯವಾಗಿ ಆ ಭಾಷಣದಲ್ಲಿ ಬರುವುದಿಲ್ಲ. ಸನ್ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣ ಏನು ಇದೆ, ಇದು ಸರ್ಕಾರದ ನೀತಿ ಎಂದು ತಿಳಿದು ಆ ನೀತಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕಿಂತ ಮುಂಚೆ ಈ ಭಾಷಣವನ್ನು ನಾನು ಓದಿ ಈ ಸರ್ಕಾರ ಮಾಡಿದತಕ್ಕಂಥ ಅಭಿವೃದ್ಧಿ ಪಥದಲ್ಲಿ ರಾಜ್ಯದ ಜನತೆಯನ್ನು ಕೊಂಡೊಯ್ಯುವಲ್ಲಿ ಏನಾದರೂ ಮಾಡಿದೆಯೇ ಎನ್ನತಕ್ಕಂಥ ವಿಚಾರವನ್ನು ಸಹಿತ ನಾನು ಮಾಡಿದ್ದೇವೆ. ನಾನು ಈ ನಿರ್ಣಯವನ್ನು ವಿರೋಧ ಮಾಡುತ್ತಿದ್ದೇನೆ.

ಆದರೂ ಸಹಿತ ಸರ್ಕಾರ ಒಂದೆರಡು ಒಳ್ಳೆಯ ಕಾರ್ಯಕ್ರಮಗಳನ್ನು ಮಾಡಿದೆ ಎಂದು ಹೇಳದೆ ಹೋದರೆ ತಪ್ಪಾಗುತ್ತದೆಂದು ನಾನು ತಿಳಿದಿದ್ದೇನೆ. ಒಂದು ಬಹಳ ಮುಖ್ಯವಾಗಿ ಬಡವರಿಗೆ ಬರುತ್ತಿದ್ದಂತಹ ವೃದ್ಧಾಪ್ಯ ವೇತನವನ್ನು 50 ರಿಂದ 75 ರೂಪಾಯಿ ಮಾಡಿರತಕ್ಕದ್ದನ್ನು ನಾವು ಒಪ್ಪಬಹುದು. ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಯಾದ ಮೇಲೆ ರಾಜ್ಯದ ರೈತರಿಗೆ ಅನುಕೂಲವಾಗುವಂತೆ ಐ.ಪಿ.ಸೆಟ್ಸ್ ಏನರ್ಜೈಸೇಷನ್ ಹೆಚ್ಚು ಮಾಡಿರತಕ್ಕದ್ದು ಮತ್ತು ಕಾವೇರಿ ಟ್ರಿಬ್ಯುನಲ್ ವಿಚಾರದಲ್ಲಿ ತೀರ್ಪು ಬಂದಿದೆ. ಆ ತೀರ್ಪು ಬರಬೇಕಾದರೆ ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಮೊಯಿಲಿಯವರು ಬಹಳ ಆಸಕ್ತಿ ವಹಿಸಿದ್ದಾರೆಂದು ನಾನು ಕೇಳಿದ್ದೇವೆ. ಅದರ ಜೊತೆಗೆ ಕಾನೂನು ಇಲಾಖೆಯ ಅಧಿಕಾರಿಗಳು ಮತ್ತು ಸಂಬಂಧಪಟ್ಟ ನೀರಾವರಿ

ಇಲಾಖೆಯ ಅಧಿಕಾರಿಗಳು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಅದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದೆರಡು ಕೆಲಸಗಳನ್ನು ಈ ಸರ್ಕಾರ ಮಾಡಿದೆ. ಇದು ಮಕ್ಕಳಿಗೆ ಮಧ್ಯಾಹ್ನ ಉಪಾಹಾರ ಕೊಡತಕ್ಕ ವಿಚಾರ. ಇದು ಬಹಳ ದಿವಸಗಳಿಂದ ಅಗತ್ಯವಿತ್ತು. ಅನೇಕ ಜನ ತಜ್ಞರು ಇದರಿಂದ ಹೆಚ್ಚಿನ ಉಪಯೋಗವಾಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಇದರಿಂದ ಉಪಯೋಗ ಇದೆ ಎಂದು ನಾನು ತಿಳಿದಿರತಕ್ಕವನು. ಇದನ್ನೂ ಸಹಿತ ನಾನು ಸ್ವಾಗತ ಮಾಡುತ್ತೇನೆ. ಈ ಹೈದರಾಬಾದ್-ಕರ್ನಾಟಕ ಅಭಿವೃದ್ಧಿ ಕೆಲಸ ಪ್ರಾರಂಭವಾಗಿರುವುದು, ಮಲೆನಾಡು ಅಭಿವೃದ್ಧಿ ಯೋಜನೆ ಪ್ರಾರಂಭವಾಗಿರತಕ್ಕದ್ದು ಮಹಿಳೆಯರಿಗೆ ಕೆಲಸದಲ್ಲಿ ಒಂದು ಆದ್ಯತೆಯನ್ನು ಕೊಡತಕ್ಕದ್ದು ಮತ್ತು ಅಂಗವಿಕಲರನ್ನೂ ಸರ್ವೆ ಮಾಡಿ ಅವರ ಜಾಬ್ ರಿಜರ್‌ವೇಶನ್ ಅನ್ನು ಪಬ್ಲಿಕ್ ಸೆಕ್ಟಾರ್ ಅಂಡರ್ ಟೇಕಿಂಗ್ಸ್‌ನಲ್ಲಿ ಮಾಡಿರತಕ್ಕದ್ದು ಈ ಒಂದೆರಡು ವಿಚಾರಗಳು ಈ ಸರ್ಕಾರ ಸರಿಯಾದ ದಾರಿಯಲ್ಲಿ, ಧೋರಣೆಯಲ್ಲಿ ಹೋಗಲಿಕ್ಕೆ ಪ್ರಯತ್ನ ಮಾಡಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಆದರೆ ಒಟ್ಟಾರೆ ತೆಗೆದುಕೊಂಡಾಗ, ಕರ್ನಾಟಕ ರಾಜ್ಯದಲ್ಲಿ ಇದೊಂದು ದೊಡ್ಡ ದುರ್ದೈವ ಎಂದು ನಾನು ತಿಳಿದಿದ್ದೇನೆ. 1989ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನತೆ ಬೆಂಬಲ ಕೊಟ್ಟಂತಹ ಸಂದರ್ಭದಲ್ಲಿ ಬಹಳ ದೊಡ್ಡ ನಿರೀಕ್ಷೆಯನ್ನು ಇಟ್ಟುಕೊಂಡು ಓಟನ್ನು ಕೊಟ್ಟಿದ್ದರು. ಅದು ತಮಗೆ ಗೊತ್ತಿದೆ. ತಾವು ಚುನಾವಣೆಯ ಮುಂಚೆ ಹೇಳಿದ್ದೀರಿ. ಮಾನ್ಯ ವೀರೇಂದ್ರ ಪಾಟೀಲರನ್ನು ನಾವು ಮುಖ್ಯಮಂತ್ರಿಯನ್ನಾಗಿ ಮಾಡುತ್ತೇವೆ ಅನ್ನತಕ್ಕ ಮಾತನ್ನೂ ಸಹಿತ ಹೇಳಿ, 180 ಜನ ಶಾಸಕರನ್ನು ಈ ರಾಜ್ಯದ ಇತಿಹಾಸದಲ್ಲಿ ಮೊದಲನೆಯ ಬಾರಿಗೆ ನಿಮಗೆ ಓಟು ಕೊಟ್ಟು ಗೆಲ್ಲಿಸಿದ್ದರು. ಆದರೆ ಇವತ್ತಿಗೆ ಇನ್ನೂ ಎರಡು ವರ್ಷ ಆಗಿಲ್ಲ. ಎರಡು ವರ್ಷದಲ್ಲಿಯೇ ಈ ಸರ್ಕಾರದ ಪಂಚೇಂದ್ರಿಯಗಳು ಯಾವುವು ಕೆಲಸ ಮಾಡುತ್ತಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಈ ಸರ್ಕಾರ ಒಂದು ರೀತಿಯಾಗಿ ರೂಪುಗೊಂಡಿರುತ್ತದ್ದಲ್ಲಾ ಅದು ರುಬ್ಬು ಗುಂಡಿನಂತೆ ಎಂದು ನನಗೆ ಅನ್ನಿಸಲಿಕ್ಕೆ ಪ್ರಾರಂಭವಾಗಿದೆ. ಏಕೆಂದರೆ, ಈ ರಾಜ್ಯಪಾಲರ ಭಾಷಣದಲ್ಲಿ ಒಂದು ನಿರ್ದಿಷ್ಟವಾದಂತಹ ಗುರಿಯನ್ನು ನಾವು ಒಂದು ಸಮಾಜವಾದಿ ರಾಷ್ಟ್ರವನ್ನು ಕಟ್ಟಬೇಕು ಅಥವಾ ಬಡವರ ಒಂದು ಏಳಿಗೆಯನ್ನು ನಾವು ಯಾವರೀತಿ ಮಾಡಬೇಕು, ನಿರ್ದಿಷ್ಟವಾಗಿ ಯಾರ ಪರವಾಗಿ ಈ ಸರ್ಕಾರ ಇದೆ ಎನ್ನುವುದನ್ನು ಗುರುತು ಮಾಡಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ನಮ್ಮ ರಾಜ್ಯವನ್ನು ಕಾಡುತ್ತಾ ಇರತಕ್ಕ ಸಮಸ್ಯೆಗಳ ಹತ್ತಿರ ಹೋಗಲಿಕ್ಕೆ ಸಹಿತ ಈ ಸರ್ಕಾರ ಪ್ರಯತ್ನ ಮಾಡಿಲ್ಲವೇನೋ ಎನ್ನತಕ್ಕೆ ಮಾತನ್ನು ನಾನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ರಾಜ್ಯಪಾಲರ ಕನ್ನಡದ ಒಂದು ಭಾಷೆಯ ವಿಚಾರದಲ್ಲಿ, ಮೈಸೂರಿನಲ್ಲಿ ಒಂದು ದೊಡ್ಡ ಸಮ್ಮೇಳನವನ್ನು ಮಾಡಿ, ರಾಷ್ಟ್ರಕವಿ ಕುವೆಂಪು ಸಹಿತ ಇದರಲ್ಲಿ ಭಾಗವಹಿಸಿದ್ದರು ಎಂದು ಹೇಳಿದ್ದಕ್ಕೆ ಬಹಳ ಸಂತೋಷದ ವಿಚಾರ, ಅದಕ್ಕೆ ಮುಖ್ಯ ಮಂತ್ರಿಗಳು ಹೋಗಿದ್ದರು.

ಶ್ರೀ ವಾಟಾಳ್ ನಾಗರಾಜ್ : ಅವರು ಹೇಗೆ ಭಾಗವಹಿಸಿದರು ಎಂದರೆ ಅವರನ್ನು ಅತ್ತೂ ಕರೆದು ಕರೆದುಕೊಂಡು ಬಂದರು ಏಕೆಂದರೆ, ಅವರಾಗಿಯೇ ಬಂದರು ಎಂದು ನಿಮ್ಮ ಮೇಲೆ ಮೇಬಾಶನಿ ಮಾಡಿಕೊಂಡರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ರಾಷ್ಟ್ರಕವಿ ಕುವೆಂಪುರವರು ಭಾಗವಹಿಸಿದ್ದರು. ನಾವು ಎಲ್ಲಾ ಅಕಾಡಿಮಿಗಳನ್ನು ಎರಡು ತಿಂಗಳಲ್ಲಿ ರಚನೆ ಮಾಡಿಬಿಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದರು. ಇದನ್ನು ಮಾನ್ಯ ರಮೇಶ್‌ರವರು ಆಗ್ಗಿಂದಾಗ್ಗೆ ಹೇಳಿಕೊಂಡು ಬಂದಿದ್ದಾರೆ. ಮುಖ್ಯಮಂತ್ರಿಗಳು ಸಹಿತ ಈ ಮಾತನ್ನು ಹೇಳಿದ್ದಾರೆ. ನಾನು ಅದರ

ಬಗ್ಗೆಯೂ ಮಾತನಾಡುತ್ತಿಲ್ಲ. ಆದರೆ ಈ ಸರ್ಕಾರದ ನೀತಿಯಲ್ಲಿ ಎಲ್ಲಿ ತಪ್ಪು ಹೆಜ್ಜೆ ಹಾಕುತ್ತಿದೆ ಎಂಬುದನ್ನು ಹೇಳುತ್ತೇನೆ. ಇದುವರೆಗೂ ಸಹಿತ ಇಂಗ್ಲಿಷ್ ಶಾಲೆಗಳು ನಗರ ಪ್ರದೇಶದಲ್ಲಿ ಮಾತ್ರ ಸೀಮಿತವಾಗಿದ್ದವು. ಆದರೆ ಇವತ್ತು ಏನಾಗಿದೆ ಅಂದರೆ, ತಾಲ್ಲೂಕು ಪ್ರದೇಶದಲ್ಲಿಯೂ ಸಹಿತ ಅದೇ ತರಹ ಇಂಗ್ಲಿಷ್ ಶಾಲೆಗಳು ಪ್ರಾರಂಭವಾಗಿದೆ. ಇದು ಬಹಳ ದುರ್ದೈವದ ಸಂಗತಿಯಾಗಿದೆ. ನಮ್ಮ ರಾಜ್ಯದ ಒಂದು ಭಾಷಾ ದೃಷ್ಟಿಯಿಂದಾಗಿ ರಾಜಕೀಯ ಬೆರೆಸಲಿಕ್ಕೆ ಪ್ರಯತ್ನ ಮಾಡುತ್ತಿಲ್ಲ, ತಾವು ಅರ್ಥಮಾಡಿಕೊಳ್ಳಬೇಕು. ಇವತ್ತು ಏನಾಗುತ್ತಿದೆ ಅಂದರೆ ಆಡಳಿತದಲ್ಲಿರತಕ್ಕಂಥ ಜನಗಳ ಧೋರಣೆ ಏನಿದೆ ಎನ್ನುವುದನ್ನು ಬಹಳ ಚೆನ್ನಾಗಿ ವ್ಯವಹಾರ ಮಾಡತಕ್ಕವರು ಲೆಕ್ಕ ಹಾಕುತ್ತಾರೆ. ಆಡಳಿತ ಪಕ್ಷದ 100 ಜನ ಶಾಸಕರು ಇದರ ಪರವಾಗಿ ಇದ್ದಾರೆಂದು ಹೇಳಿದರೆ ಸರ್ಕಾರ ನಮ್ಮ ಪರವಾಗಿದೆ ಎನ್ನುವ ಭಾವನೆ ಅವರಲ್ಲಿ ಬರುತ್ತದೆ.

ಇವೊತ್ತು ಪ್ರತಿ ತಾಲ್ಲೂಕಿನಲ್ಲಿಯೂ ಸಹಿತ ಒಂದಲ್ಲ ಹತ್ತಾರು ಇಂಗ್ಲೀಷ್ ಶಾಲೆಗಳು ಪ್ರಾರಂಭವಾಗಿದೆ. ನಾನು ಈ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರಲ್ಲಿ ಒತ್ತಾಯ ಮಾಡುತ್ತಿದೇನೆ. ನೀವು ಇನ್ನೂ ನೀತಿ ಬಗ್ಗೆ ನಿರ್ಧಾರ ತೆಗೆದುಕೊಂಡಿಲ್ಲ ತಾನೆ. ಈಗಾಗಲೇ ಇಂಗ್ಲೀಷ್ ಶಾಲೆಗಳು ಪ್ರಾರಂಭವಾಗಿವೆ. ನಿಮ್ಮ ಅಧಿಕಾರಿಗಳು ಶಾಮೀಲಾಗಿದ್ದಾರೆ. ನಿಮ್ಮಲ್ಲಿರತಕ್ಕಂಥ ಅನೇಕ ಜನ ಇದಕ್ಕೆ ಪುರಸ್ಕಾರವನ್ನು ಕೊಡುತ್ತಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಇಂಗ್ಲೀಷ್ ಶಾಲೆಗಳು ಪಿಡುಗು ಪ್ರಾರಂಭವಾಗುತ್ತಿದೆ. ಪೋಷಕರ ಶೋಷಣೆ ನಡೆಯುತ್ತಿದೆ. ಈಗಾಗಲೇ ಅಡ್ವಾನ್ಸ್ ಬುಕ್ಕಿಂಗ್ ಆಗುತ್ತಿದೆ. ಇದನ್ನು ದಯವಿಟ್ಟು ನಿಲ್ಲಿಸಲಿಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಈ ಸಂರ್ಭದಲ್ಲಿ ಒತ್ತಾಯ ಮಾಡುತ್ತೇನೆ. ನಾವು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತಿದ್ದೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ತಾವು ಹಿಂದೆ ಪ್ರಾಥಮಿಕ ಶಿಕ್ಷಣ ಇಲಾಖೆಯ ಮಂತ್ರಿಗಳಾಗಿದ್ದಿರಿ. 6,700 ಕ್ಲಾಸ್ ರೂಮುಗಳನ್ನು ಕಟ್ಟುತ್ತೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ಇವೊತ್ತು ಬಹಳ ದೂರ ಹೋಗಬೇಕಾಗಿಲ್ಲ, ಬ್ಲಾಕ್ ಬೋರ್ಡ್ ಯೋಜನೆಯಲ್ಲಿ ಕಟ್ಟಿತ್ತಿರತಕ್ಕಂಥ ಶಾಲಾ ಕೊಠಡಿಗಳಿಗೆ ಕಳೆದ 6 ತಿಂಗಳಲ್ಲಿ ಒಂದು ರೂಪಾಯಿ ಹಣ ಹೋಗಿಲ್ಲ, ಅಲ್ಲೆಲ್ಲ ಗೋಡೆಗಳು ಹಾಗೆಯೇ ನಿಂತಿವೆ. ಬ್ಲಾಕ್‌ಬೋರ್ಡ್ ಸ್ಕೀಂನಲ್ಲಿ ಕೇಂದ್ರ ಸರ್ಕಾದಿಂದ ಬರತಕ್ಕಂಥ ಹಣ ಏನಿದೆ ಆ ಹಣ ಬೇರೆ ಕಡೆಗೆ ಡೈವರ್‌ಷನ್ ಆಗಿದೆ ಎಂದು ನಾನು ಇವತ್ತು ಆಪಾದನೆ ಮಾಡುತ್ತಿದ್ದೇನೆ. ರಾಜ್ಯಸರ್ಕಾರಕ್ಕೆ ಯಾವುದೇ ರೀತಿಯ ಹಕ್ಕಿಲ್ಲ, ಆದರೆ ಇವೊತ್ತು ಆ ಫಂಡ್ ಡೈವರ್ಟ್ ಮಾಡಿ ಶಾಲಾ ಕೊಠಡಿಗಳನ್ನು ಕಟ್ಟಿಸುತ್ತಿದ್ದುದನ್ನು ಅರ್ಧದಲ್ಲಿಯೇ ನಿಲ್ಲಿಸಿದ್ದಾರೆ. ಮತ್ತೆ ರಾಜ್ಯಪಾಲರ ಭಾಷಣದಲ್ಲಿ 6,700 ಶಾಲಾ ಕೊಠಡಿಗಳನ್ನು ಕಟ್ಟಿಸುತ್ತೇವೆಂದು ಹೇಳಿದ್ದಾರೆ. ನಾವು ಶಾಸಕರು ಹೋದಾಗ ಜನ ನಮ್ಮನ್ನು ಕೇಳುತ್ತಾರೆ ನಾನು ಹೇಳುತ್ತಿದ್ದೇನೆ. ನೀವು ಯಾವ ಶಾಲಾ ಕೊಠಡಿಗಳನ್ನು ಕಟ್ಟಿಸಿದ್ದೀರಿ. ಅವು ಮಳೆ ಬಂದರೆ ಬಿದ್ದುಹೋಗುತ್ತವೆ. ಆದ್ದರಿಂದ ಅವುಗಳಿಗೆ ಮೊದಲು ದುಡ್ಡು ಕೊಡುವುದನ್ನು ಕಲಿಯಿರಿ. ಇವೊತ್ತು ಹಳ್ಳಿಗಳಲ್ಲಿ ಶಾಲೆಗಳ ಪರಿಸ್ಥಿತಿ ಏನಾಗಿದೆ ಎಂದು ನಿಮಗೆ ಗೊತ್ತಿದೆ.

ಶಿಕ್ಷಕರ ಗುಣಮಟ್ಟ ನಮ್ಮ ಕಾಲದಲ್ಲಿ ಹಾಗೇ ಇತ್ತು ಇವತ್ತು ಹಾಗೇ ಇದೆ. ಇದರಲ್ಲಿ ಬಹಳ ದೊಡ್ಡ ಸುಧಾರಣೆಯಾಗಿದೆ ಎಂದು ನಾನು ತಿಳಿದಿಲ್ಲ. ಈ ಸಂದರ್ಭದಲ್ಲಿ ನಮ್ಮ ಶಿಕ್ಷಣ ಸಚಿವರು ಇರಬೇಕಾಗಿತ್ತು. ಉನ್ನತ ಶಿಕ್ಷಣದ ಬಗ್ಗೆ ಓಪನ್ ಯೂನಿವರ್ಸಿಟಿ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಆವೊತ್ತಿನ ದಿವಸ ಒತ್ತಾಯವನ್ನು ಮಾಡಿದೆ. ನಿಮ್ಮ ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ಮಾಡದೇ ಹೋದರೆ ನಿಮ್ಮ ಉನ್ನತ ಶಿಕ್ಷಣಕ್ಕೆ ಅರ್ಥ ಇಲ್ಲ. ಇವೊತ್ತು ಪ್ರತಿಯೊಬ್ಬ

ವಿಶ್ವವಿದ್ಯಾನಿಲಯದ ಉಪಕುಲಪತಿಗಳ ಮೇಲೆ, ಜಾತಿಗಳನ್ನು ಪ್ರಚೋದನೆ ಮಾಡತಕ್ಕಂಥ, ಜಾತಿವಾದವನ್ನು ಹಬ್ಬತಕ್ಕಂಥ ಕೆಲಸಗಳಾಗಿವೆ. ಬಹಳ ದುಃಖದಿಂದ ನಾನು ಈ ಮಾತನ್ನು ಹೇಳಬೇಕಾಗಿದೆ. ಇವೊತ್ತು ಲಾರ್ಜ್‌ಸ್ಕೇಲ್ ಕಾಪೀಯಿಂಗ್ ಆಗುತ್ತಿದೆ. ಮಾಲ್‌ಪ್ರಾಕ್ಟೀಸ್ ಆಗುತ್ತಿದೆ ಎಂದು ಹೇಳಿದ್ದೇವೆ. ಅದನ್ನು ಬದಲಾವಣೆ ಮಾಡುವುದರ ಬಗ್ಗೆ ಏನಾದರೂ ಕ್ರಮವನ್ನು ತೆಗೆದುಕೊಳ್ಳುತ್ತಾರೆಯೇ ಅಂದರೆ ಅದರ ಬಗ್ಗೆ ಏನೂ ಹೇಳಲಿಲ್ಲ. ಆದರೆ ಹೈಯರ್ ಎಜುಕೇಷನ್‌ಗೆ ನಾವು ಪುರಸ್ಕಾರ ಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಅದು ಕೇವಲ ಪತ್ರಿಕೆಗಳಲ್ಲಿ ಪ್ರಚಾರಕ್ಕೋಸ್ಕರ ತೆಗೆದುಕೊಡಿರತಕ್ಕದ್ದು ಎಂದು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಇದು ಯಾವ ಮಟ್ಟಕ್ಕೆ ಹೋಗಿದೆ ಅಂದರೆ, ಬೆಂಗಳೂರಿನಲ್ಲಿ ಕಂಪ್ಯೂಟರ್ ಸ್ಕೂಲುಗಳು ಪ್ರಾರಂಭವಾಗಿದೆ. ಅವರಿಗೆ ಸರ್ಟಿಫೈ ಮಾಡತಕ್ಕವರು ಯಾರು. ಕಂಪ್ಯೂಟರ್ ಕೊರ್ಸ್‌ನಲ್ಲಿ ಏನು ಸಿಲಬಸ್ ಇದೆ, ಅದಕ್ಕೆ ಎಷ್ಟು ಹಣ ಇದೆ, ಎಷ್ಟು ಹಣ ಕೊಡಬೇಕು, ಆ ಎಜುಕೇಷನ್‌ಗೆ ಏನಾದರೂ ಅರ್ಥ ಇದೆಯೇ? ಇದನ್ನು ಯಾರೂ ಕೇಳತಕ್ಕಂಥವರು ಇಲ್ಲ. ಈ ಸರ್ಕಾರಕ್ಕೆ ನಾನು ಒತ್ತಾಯ ಮಾಡುತ್ತೇನೆ. ಈ ಮಶ್ರೂಂ ಗ್ರೋತ್ ಕಂಪ್ಯೂಟರ್ ಸ್ಕೂಲ್ಸ್, ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಬೆಳಗಾಂನಲ್ಲಿ, ಏನು ಬರುತ್ತಿವೆ, ಇದನ್ನು ತಡೆಗಟ್ಟಲಿಕ್ಕೆ ಸರ್ಕಾರ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಆ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ, ಸರ್ಕಾರದವರು ಅವರ ವಸೂಲಾತಿಯಲ್ಲಿ ಶಾಮೀಲಾಗಿದ್ದರೆ ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಇನ್ನು ಬಹಳ ಪ್ರಮುಖವಾಗಿರುವ ಪ್ರಶ್ನೆ ಒಂದಿದೆ. ಈ ಸರ್ಕಾರ ಸ್ಪಷ್ಟವಾಗಿ ಹೇಳಿದೆ, ಅದು ಒಂದು, ನನಗೆ ಇರುವುದರಲ್ಲಿ ತೃಪ್ತಿ ಆಯಿತು. ನಮ್ಮ ಬಡ್ಜೆಟ್ ಭಾಷಣದಲ್ಲಿ ಮಾನ್ಯ ಬಂಗಾರಪ್ಪನವರು ಹೇಳೇಬಿಟ್ಟಿದ್ದಾರೆ.

"ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಯನಿರ್ವಹಣೆಯು ಕಳೆದ ಕೆಲವು ವರ್ಷಗಳಿಂದಲೂ ಸುಧಾರಿಸುತ್ತಿದೆ. ಆದಾಗ್ಯೂ, ಎಲ್ಲಾ ಮಾರ್ಗಗಳಿಗೆ ಮುಖ್ಯವಾಗಿ ರಾಜ್ಯದ ಎಲ್ಲಾ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸೌಲಭ್ಯ ಒದಗಿಸಲು ಸಂಸ್ಥೆಗೆ ಸಾಧ್ಯವಾಗುತ್ತಿಲ್ಲ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಓಡಿಸದಿರುವ ಮಾರ್ಗಗಳನ್ನು ಖಾಸಗೀ ವಲಯಗಳಿಗೆ ವಹಿಸಿಕೊಡುವ ವಿಷಯವನ್ನು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ. ಈ ಬಗ್ಗೆ ವಿವರಗಳನ್ನು ಸಿದ್ಧಪಡಿಸಲಾಗುತ್ತಿದೆ"

ಎನ್ನುವ ಮಾತನ್ನು ಹೇಳಿದ್ದಾರೆ. ಯಾವ ಸರ್ಕಾರ ಸಮಾಜವಾದಿ ರಾಷ್ಟ್ರವನ್ನು ಕಟ್ಟಬೇಕು, ಬಡವರ ಪರವಾಗಿ ಮಾತನಾಡತಕ್ಕ ಸರ್ಕಾರ, ರಾಷ್ಟ್ರೀಕರಣದ ಹೆಸರಿನಲ್ಲಿ ಓಟನ್ನು ತೆಗೆದುಕೊಂಡಿರತಕ್ಕ ಸರ್ಕಾರ ಇದೆ. ಅದು ಇವೊತ್ತು ಖಾಸಗಿ ಕ್ಷೇತ್ರಕ್ಕೆ ಸಂಪೂರ್ಣವಾಗಿ ಸರ್ಕಾರದ ಸ್ವತ್ತನ್ನು ಮಾರಲಿಕ್ಕೆ ಹೊರಟಿದೆ ಎನ್ನುವ ಮಾತನ್ನು ನಾನು ಹೇಳಬೇಕಾಗಿದೆ.

ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈಸರ್ಸ್ ಬಗ್ಗೆ ಈ ಸಂದರ್ಭದಲ್ಲಿ ನಾನು ಮಾತನಾಡಲಿಕ್ಕೆ ಬಯಸುತ್ತೇನೆ. ಮಂಗಳೂರು ಕೆಮಿಕಲ್ಸ್ ಆಂಡ್ ಫರ್ಟಿಲೈಸರ್ಸ್‌ನಲ್ಲಿ ಗೋಬರ್ ಟೆಂಡರ್ಸ್‌ನ್ನು ಕರೆಯಬೇಕೆಂದು ನಾವು ಒತ್ತಾಯ ಮಾಡಿದೆವು. ಅಲ್ಲಿ ವ್ಯವಹಾರ ನಡೆಯುತ್ತಿದೆ ಎನ್ನತಕ್ಕ ಮಾತನ್ನು ಆವತ್ತಿನ ಮುಖ್ಯ ಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರಿಗೆ ನಾವು ಹೇಳಿದ್ದೆವು. ಮಾನ್ಯ ರಾಜಶೇಖರ ಮೂರ್ತಿಯವರಿಗೆ ನಾವು ಹೇಳಿದೆವು. ಇಂತಿಂಥ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎಂದು ಹೇಳಿದ್ದೆವು. ಆದರೆ ಗೋಬರ್ ಟೆಂಡರ್ಸ್‌ನ್ನು ಕರೆಯಲಿಲ್ಲ. ಯಾರಿಗೂ ಗೊತ್ತಿಲ್ಲದ ಹಾಗೆ, ಯು.ಬಿ.ಗ್ರೂಪ್ ಆಫ್ ಕಂಪ್‌ನೀಸ್‌ಗೆ ಇವರು ಮಾರಾಟ ಮಾಡಿದ್ದಾರೆ. ಇವರಿಗೆ ನಾಚಿಕೆಯಾಗಬೇಕು. ಇವರು ಇವತ್ತು ಏನು ಕಾರಣವನ್ನು ಕೊಡುತ್ತಿದ್ದಾರೆಂದರೆ ಸರ್ಕಾರಿ ಕ್ಷೇತ್ರದಲ್ಲಿರತಕ್ಕ ಕಾರ್ಖಾನೆಗಳಲ್ಲಿ ನಷ್ಟವಾಗುತ್ತಿದೆ ಫ್ಯಾಕ್ಟರಿ

ಹೇಳುತ್ತಿದ್ದಾರೆ. ಭದ್ರಾವತಿಯಲ್ಲಿರತಕ್ಕ ವಿ.ಐ.ಎಸ್.ಎಲ್.ಫ್ಯಾಕ್ಟರಿಯನ್ನು ಸೇಲ್‌ನವರು ತೆಗೆದುಕೊಂಡರು. ಅದು ಇವತ್ತು ಯಾವರೀತಿ ಪ್ರಾಫಿಟ್ ಮಾಡುತ್ತಿದೆ. ಅದು ಪ್ರಾಫಿಟ್ ಮಾಡುವುದಾದರೆ ಇದು ಏತಕ್ಕೆ ಮಾಡುವುದಕ್ಕಾಗುವುದಿಲ್ಲ? ಎಂ.ಸಿ.ಎಫ್.ನ್ನು ಮಾರಾಟ ಮಾಡಿದರು. ಅಲ್ಲಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ದೋಚಿಕೊಂಡರು. ಈಗ ಮತ್ತೆ ಎಂ.ಇ.ಐ.ನ್ನೂ ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ಇದನ್ನು ಖಾಸಗಿಯವರಿಗೆ ಕೊಡಲಿಕ್ಕೆ ಹೊರಟಿದ್ದಾರೆ. ಕೋಟ್ಯಾಂತರ ರೂಪಾಯಿ ಬೆಲೆಬಾಳತಕ್ಕ ಕರ್ನಾಟಕ ರಾಜ್ಯ ಸರ್ಕಾರದ ಸ್ವತ್ತನ್ನು ಅನ್ಯಾಯವಾಗಿ ಮಾರುತ್ತಿದ್ದಾರೆ. ರೈಲ್ವೆ ಸ್ಟೇಷನ್ ಪಕ್ಕದಲ್ಲಿ 15 ಎಕರೆ ಜಮೀನು ಎಂ.ಇ.ಐ.ಗೆ ಸೇರಿದ್ದು ಇವೆ. ಅದನ್ನು ಖಾಸಗಿಯವರಿಗೆ ಕೊಡಲಿಕ್ಕೆ ಇವರು ಹೊರಟಿದ್ದಾರೆ. ಸರ್.ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಪ್ರಾರಂಭವಾಗತಕ್ಕಂಥ ಶ್ರೀಗಂಧದ ಎಣ್ಣೆಯ ಕಾರ್ಖಾನೆಗಳ ಸಮೂಹವನ್ನು ಪಡೆದಿರತಕ್ಕ ಮೈಸೂರು ಸೋಪ್ಸ್ ಆಂಡ್ ಡಿಟರ್ಜೆಂಟ್ ಫ್ಯಾಕ್ಟರಿಯನ್ನೂ ಕೂಡ ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೆ ಹೊರಟಿದ್ದಾರೆ. ಈ ದಿಸೆಯಲ್ಲಿ ಈ ಸರ್ಕಾರದ ನಿಷ್ಠೆಯನ್ನು ನಾನು ಇವತ್ತು ಕೇಳಬಯಸುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಈ ಸದನದ ಸಮಿತಿಯನ್ನು ಮಾಡಬೇಕೆಂದು ನಾವು ಒತ್ತಾಯ ಮಾಡಿದೆವು. ಗೋಬರ್ ಟೆಂಡರ್ಸ್‌ನ್ನು ಕರೆಯೋಣ ಓಪನ್ ಟೆಂಡರ್ಸ್‌ನ್ನು ಕರೆಯೋಣ, ಮಾನಿಟರ್ ಮಾಡೋಣ ಎನ್ನತಕ್ಕ ಮಾತನ್ನು ನಾವು ಹೇಳಿದೆವು. ಆದರೆ ಅವತ್ತು ಕರೆಯಲಿಲ್ಲ, ನಮ್ಮ ಮಾತನ್ನು ಕೇಳಲಿಲ್ಲ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರವನ್ನು ಹೇಳುವುದಾದರೆ, ಅದು ವಿಕ್ರಾಂತ್ ಟೈರ್ಸ್ ಸಂಸ್ಥೆಯ ವಿಚಾರ. ಈ ಫ್ಯಾಕ್ಟರಿಯಲ್ಲಿ ಇದೇ ಸರ್ಕಾರದ ಒಬ್ಬ ಅಧಿಕಾರಿ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು. ಈ ಸಂದರ್ಭದಲ್ಲಿ ಇಡೀ ರಾಷ್ಟ್ರದಲ್ಲಿ ಬಹಳ ಒಳ್ಳೆಯ ಟೈರನ್ನು ತಯಾರು ಮಾಡತಕ್ಕ ಒಂದು ಕಂಪೆನಿ ಎಂದು ಮಾನ್ಯ ರಾಷ್ಟ್ರಾಧ್ಯಕ್ಷರು ಇದಕ್ಕೆ ಒಂದು ಬಹುಮಾನವನ್ನು ಕೊಟ್ಟರು. ಆದರೆ ಆಲ್ಲಿಗೆ ಇನ್ನೊಬ್ಬ ಅಧಿಕಾರಿಯನ್ನು ಹಾಕಿದ ಮೇಲೆ ಅಂದರೆ ಕಳೆದ 2 ವರ್ಷಗಳಲ್ಲಿ ವಿಕ್ರಾಂತ್ ಟೈರ್ಸ್ ಫ್ಯಾಕ್ಟರಿ ಮುಚ್ಚತಕ್ಕ ಪರಿಸ್ಥಿತಿಗೆ ಬಂದಿದೆ. ವಿಕ್ರಾಂತ್ ಟೈರ್ ಫ್ಯಾಕ್ಟರಿಯಲ್ಲಿರತಕ್ಕ ಒಬ್ಬ ಅಧಿಕಾರಿಯ ಸಂಬಂಧಿ ಹುಬ್ಬಳ್ಳಿಯಲ್ಲಿ ಒಂದು ಕಾರ್ಖಾನೆಯನ್ನು ಪ್ರಾರಂಭ ಮಾಡಿದ್ದಾನೆ. ವಿಕ್ರಾಂತ್ ಟೈರ್ಸ್‌ನವರು ಏನು ಟೈರ್‌ನ್ನು ಮ್ಯಾನುಫ್ಯಾಕ್ಚರ್ ಮಾಡಬೇಕಾಗಿದೆಯೋ ಅದೇ ಟೈರನ್ನು ಹುಬ್ಬಳ್ಳಿಯಲ್ಲಿ ಇವತ್ತು ಮ್ಯಾನುಫ್ಯಾಕ್ಚರ್ ಮಾಡುತ್ತಿದ್ದಾರೆ. ಈ ಅಧಿಕಾರಿ ಮಾನ್ಯ ಮುಖ್ಯ ಮಂತ್ರಿಗಳ ಕಛೇರಿಯಲ್ಲಿ ಅವರ ಕಾರ್ಯದರ್ಶಿಯಾಗಿ ಕುಳಿತಿದ್ದಾರೆ. ಇವರಿಗೆ ನಾಚಿಕೆ ಇರಬೇಕು. ಈ ಸರ್ಕಾರಕ್ಕೆ ಖಾಸಗೀಕರಣವನ್ನು ಕಂಡರೆ ಏತಕ್ಕೆ ಇಷ್ಟೊಂದು ವಿಶ್ವಾಸ ಎಂದು ನಾನು ಕೇಳುತ್ತಿದ್ದೇನೆ. ಈ ರಾಜ್ಯದಲ್ಲಿ 1970ನೇ ಇಸವಿಯಿಂದ ರಾಷ್ಟ್ರೀಕರಣದ ಬಗ್ಗೆ ಸಮಾಜವಾದದ ಬಗ್ಗೆ ಸಮಾಜವಾದದ ತತ್ವದಲ್ಲಿ.....

(ಗೊಂದಲ)

ಶ್ರೀ ಜಿ. ರಾಜೂಗೌಡ : ತಮಗೆ ಕಷ್ಟ ಗೊತ್ತಾಗಬೇಕಾದರೆ, ದಯವಿಟ್ಟು ತಾವು ವಿಚಾರ ಮಾಡಬೇಕು. ಈ ರಾಜ್ಯದ ಆಡಳಿತ ಸೂತ್ರವನ್ನು ಹಿಡಿದಿದ್ದಾಗ 25 ಕೋಟಿ ರೂಪಾಯಿಗೆ ರೂಪಾಯಿಯ ಮಹದೇಶ್ವರ ಸಕ್ಕರೆ ಕಾರ್ಖಾನೆಯನ್ನು ಭುವನೇಶ್ವರರವರಿಗೆ ಕೇವಲ 1 ಕೋಟಿ ರೂಪಾಯಿಗೆ ಕೊಟ್ಟರತಕ್ಕ ತಮ್ಮ ನೀತಿಯ ಬಗ್ಗೆ ಏನು ಹೇಳುತ್ತೀರಿ? ತಮ್ಮ ಕಾಲದಲ್ಲಿ ಇಂಥಾದ್ದು ಎಷ್ಟು ಮಾಡಿದಿರಿ? 25 ಕೋಟಿ ರೂಪಾಯಿ ಬೆಲೆಬಾಳುವ ಫ್ಯಾಕ್ಟರಿಯನ್ನು ಮಾರಾಟ ಮಾಡುವ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟ ಮಾಡಿಸಲಿಲ್ಲ. ಗುಟ್ಟಾಗಿ 1 ಕೋಟಿ ರೂಪಾಯಿಗೆ ಮಾರಾಟ

ಮಾಡಿದಿರಿ. ತಾವು ಅವತ್ತು ಏನಾಗಿದ್ದಿರಿ? ನಿಮ್ಮ ಸರ್ಕಾರದ ನೀತಿಯನ್ನು ನೀವು ಏತಕ್ಕೆ ಹೇಳಲಿಲ್ಲ. ಇದರ ಬಗ್ಗೆ ದಯವಿಟ್ಟು ತಿಳಿಸಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಸರ್ಕಾರಕ್ಕೆ ಖಾಸಗೀಕರಣದ ಬಗ್ಗೆ ಬಹಳ ಪ್ರೀತಿ, ವಿಶ್ವಾಸ ಇದೆ. ಇವರು ಯಾವುದೇ ಖಾಸಗೀಕರಣವನ್ನು ಮಾಡಬೇಕಾದರೂ ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕರ್ನಾಟಕ ರಾಜ್ಯದ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಏತಕ್ಕೆ ಪ್ರಯತ್ನ ಮಾಡುವುದಿಲ್ಲವೆಂದು ನಾನು ಕೇಳುತ್ತಿದ್ದೇನೆ. ರಾಜ್ಯದ ಜನತೆಯ ಮುಂದೆ ಇವರು ಏನು ಹೇಳುತ್ತಿದ್ದಾರೆಂದರೆ, ಕೆ.ಎಸ್.ಆರ್.ಟಿ.ಸಿ.ಯನ್ನು ಇನ್ನೇನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ಇದನ್ನು ಹರಾಜು ಮಾಡುತ್ತೇವೆಂದು ಹೇಳುತ್ತಿದ್ದಾರೆ. ಸ್ವಾಮಿ, ನಾನು ಒಂದು ಸವಾಲನ್ನು ಈ ಸರ್ಕಾರಕ್ಕೆ ಹಾಕುತ್ತಿದ್ದೇನೆ. ನಾನು ಹೇಳಿದಂತೆ ಕೆ.ಎಸ್.ಆರ್.ಟಿ.ಸಿ. ಯನ್ನು ೬ ತಿಂಗಳವರೆಗೆ ನಡೆಸಿ ನೋಡಿ, ಎಷ್ಟು ಲಾಭ ಬರುತ್ತದೆ ಎಂದು. ಆದರೆ ಇದಕ್ಕೆ ನೀವು ತಯಾರಿಲ್ಲ. ಇವತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ "ಎ" ರೂಟ್, "ಬಿ" ರೂಟ್ ಮತ್ತು "ಸಿ" ರೂಟ್ ಎಂದು 3 ರೂಟ್‌ಗಳಿವೆ. "ಎ" ರೂಟ್ ಎಂದರೆ ಪ್ರಾಫಿಟ್ ಮಾಡತಕ್ಕದ್ದು, "ಬಿ" ರೂಟ್ ಎಂದರೆ ಪ್ರಾಫಿಟ್ ಅಥವಾ ಲಾಸ್ ಮಾಡದೇ ಇರತಕ್ಕದ್ದು ಮತ್ತು "ಸಿ" ರೂಟ್ ಎಂದರೆ ಲಾಸ್ ಆಗತಕ್ಕದ್ದು. ಆದರೆ ಇವರು ಏನು ಮಾಡಿದ್ದಾರೆಂದರೆ "ಬಿ" ಮತ್ತು "ಸಿ" ರೂಟನ್ನು ಬಿ.ಟಿ.ಎಸ್. ಮತ್ತು ಕೆ.ಎಸ್.ಆರ್.ಟಿ.ಸಿ. ಗೆ ಇಟ್ಟುಕೊಂಡಿದ್ದಾರೆ. ಆದರೆ "ಎ" ರೂಟನ್ನು ಮಾತ್ರ ಬೇರೆಯವರಿಗೆ ಕೊಡುತ್ತಿದ್ದಾರೆ. ಇದರ ಬಗ್ಗೆ ಆಯವ್ಯಯದ 40 ನೇ ಪುಟದಲ್ಲಿ ಹೇಳಿದ್ದಾರೆ. ಇವರು ಏನು ನೆಪವನ್ನು ತೆಗೆದುಕೊಂಡಿದ್ದಾರೆಂದರೆ, "ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ಸುಗಳನ್ನು ಓಡಿಸದಿರುವ ಮಾರ್ಗಗಳನ್ನು ಖಾಸಗಿ ವಲಯಗಳಿಗೆ ..... ಎಂದು ಹೇಳಿದ್ದಾರೆ. ನಾನಾದರೂ ಕೇಳುತ್ತೇನೆ. ಬೆಂಗಳೂರಿನಿಂದ ತಲಚೇರಿಗೆ ಹೋಗುವಂಥ ಬಸ್ಸು 1 ಕಿಲೋ ಮೀಟರ್ ಓಡಿದರೆ 8.50 ರೂಪಾಯಿ ಪ್ರಾಫಿಟ್ ಇದೆ. ಅದನ್ನು ಪ್ರೈವೇಟ್‌ನವರಿಗೆ ಕೊಟ್ಟಿದ್ದಾರೆ.

ಅದನ್ನು ಕೆ.ಎಸ್.ಆರ್.ಟಿ.ಸಿ.ಯವರೇ ಏಕೆ ನಡೆಸಬಾರದಾಗಿತ್ತು. ಇವತ್ತು ಕೆ.ಎಸ್.ಆರ್.ಟಿ.ಸಿ.ಯಲ್ಲಿ ಏನಾಗಿದೆ ಎಂದರೆ, ಮಾನ್ಯ ಅಜೀಜ್ ಸೇಟ್‌ರವರು ನನಗೆ ಬೇಕಾಗಿರುವವರು ಇರಬಹುದು, ಹಿರಿಯ ಗೌರವಾನ್ವಿತರಾದಂಥ ಸದಸ್ಯರು ಇರಬಹುದು. ಆದರೆ ಅವರು ಇಲಾಖೆಯಲ್ಲಿ 2-3 ಸಾರಿ ನೋಡಿದ್ದಾರೆ. ಈ ಸರ್ಕಾರವನ್ನು ದೂಷಣೆ ಮಾಡತಕ್ಕಂಥದ್ದಷ್ಟೇ ಅಲ್ಲ, ಈ ಸರ್ಕಾರದ ಒಬ್ಬ ಮಂತ್ರಿಯ ರಾಜೀನಾಮೆಯನ್ನು ಅವರು ಕೇಳಿದ್ದಾರೆ. ಆದರ ಬಗ್ಗೆ ನಾನು ಇವತ್ತು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಕೆ.ಎಸ್.ಆರ್.ಟಿ.ಸಿ. ಏನಿದೆ ಇದನ್ನು ಮನಸ್ಸು ಮಾಡಿದರೆ ಎಫಿಶಿಯೆಂಟ್ ಆಗಿ ರನ್ ಮಾಡಬಹುದು. ನೀವು ಡಿನ್ಯಾಷನಲೈಸ್ ಮಾಡಬೇಕೆಂದು ಇದ್ದೀರಿ ತಾನೆ, ಇದನ್ನು ಖಾಸಗೀಯವರಿಗೆ ಕೊಡಬೇಕೆಂದಿದ್ದೀರಿ ತಾನೆ, ಏರಿಯಾವೈಸ್ ಕೊಡಿ. ರೂಟ್ ವೈಸ್ ಏತಕ್ಕೆ ಕೊಡುತ್ತೀರಿ. ಈಗ ನಾನು ಕೇಳುತ್ತಿರತಕ್ಕಂಥದ್ದು ಏನೆಂದರೆ, ಈಗ ಮಂಗಳೂರಿನಲ್ಲಿ ಖಾಸಗೀಯವರು ಬಹಳ ಚೆನ್ನಾಗಿ ನಡೆಸುತ್ತಿದ್ದಾರೆ. ಶಿವಮೊಗ್ಗದಲ್ಲಿ ಖಾಸಗಿಯವರು ಚೆನ್ನಾಗಿ ನಡೆಸುತ್ತಿರಬಹುದು. ಚಿಕ್ಕಮಗಳೂರಿನಲ್ಲಿ ಖಾಸಗಿಯವರು ಚೆನ್ನಾಗಿ ನಡೆಸುತ್ತಿರಬಹುದು. ಅಲ್ಲಿ ಟೋಟಲ್ ಏರಿಯಾ ಏನಿದೆ ಆ ಏರಿಯಾದಲ್ಲಿ ಖಾಸಗಿಯವರು ನಡೆಸುತ್ತಿದ್ದಾರೆ. ಆಗ ಕೆ.ಎಸ್.ಆರ್.ಟಿ.ಸಿ.ಗೂ ಪ್ರೈವೇಟ್‌ನವರಿಗೂ ಕಾಂಪಿಟೇಶನ್ ಬರುವುದಿಲ್ಲ, ಅವರು ಅಲ್ಲಿ ನಡೆಸಿಕೊಳ್ಳುತ್ತಾರೆ, ಇವರು ಇಲ್ಲಿ ನಡೆಸಿಕೊಳ್ಳುತ್ತಾರೆ. ನೀವು ಜನರಿಗೆ ತೋರಿಸಬೇಕಾಗಿದೆ. ನ್ಯಾಷನಲೈಸ್ ಮಾಡುವುದರಿಂದ

ಸರ್ಕಾರಕ್ಕೆ ನಷ್ಟವಾಗುತ್ತದೆ, ಜನರ ಮೇಲೆ ರೈತರ ಮೇಲೆ ನಾವು ಬೆಲೆಗಳನ್ನು ಪದೇಪದೇ ಜಾಸ್ತಿ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನೀವು ಇದನ್ನು ಖಾಸಗಿಯವರಿಗೆ ವಹಿಸಲಿಕ್ಕೆ ಹೊರಟಿದ್ದೀರಿ.

ಇವತ್ತು ಕೆ.ಎಸ್.ಆರ್.ಟಿ.ಸಿ.ಯ ಪ್ರತಿಯೊಬ್ಬ ಅಧಿಕಾರಿಯೂ ಸಹಿತ ನನಗೆ ಹೇಳುತ್ತಿದ್ದಾರೆ. ನಿಮ್ಮದು ಚಿನ್ನದ ಯುಗವಾಗಿತ್ತು. ಇವತ್ತು ಕೆ.ಎಸ್.ಆರ್.ಟಿ.ಸಿ. ಹಾಳಾಗಿ ಹೋಗುತ್ತಿದೆ ಎಂದು ಹೇಳುತ್ತಿದ್ದಾರೆ. ಇದು ಕೇವಲ ವಿಕ್ರಾಂತ್ ಟೈರ್ಸ್ ಅಷ್ಟೆ ಅಲ್ಲ, ಎಂ.ಎ.ಎಸ್. ಅಲ್ಲ, ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ ಅಷ್ಟೇ ಅಲ್ಲ, ಎಂ.ಇ.ಎಸ್. ಮಾದರಿಯಲ್ಲಿ ಇಡೀ ಸರ್ಕಾರವನ್ನು ಖಾಸಗೀಕರಣ ಮಾಡಲಿಕ್ಕೆ ಈ ಸರ್ಕಾರ ಹೋಗಿದೆ ಎನ್ನತಕ್ಕಂಥ ಮಾತನ್ನು ಹೇಳಬೇಕಾಗಿದೆ. ನಾನು ಮೆಟಡಾರ್ ವ್ಯಾನ್‌ನವರಿಗೆ ಪರ್ಮಿಟ್‌ಗಳನ್ನು ಕೊಡಬೇಡಿ ಎಂದು ಹೇಳಿದೆ. 5000 ಪರ್ಮಿಟ್‌ಗಳನ್ನು ಕೊಟ್ಟಿರಿ. ಕೆ.ಎಸ್.ಆರ್.ಟಿ.ಸಿ. ಬಸ್‌ಗಳು ಇರುವುದೇ ಹತ್ತು ಸಾವಿರ. 5000 ಬಸ್‌ಗಳಿಗೆ ನೀವು ಪರ್ಮಿಟ್‌ಗಳನ್ನು ಕೊಟ್ಟರೆ ಕೆ.ಎಸ್.ಆರ್.ಟಿ.ಸಿ. ಹೇಗೆ ನಡೆಯಲಿಕ್ಕೆ ಸಾಧ್ಯ. ನೀವು ಖಾಸಗಿಯವರಿಗೆ ಕೊಡಬೇಕು ತಾನೆ, ಏರಿಯಾವೈಸ್ ಕೊಡಿ. ರೋಡ್ ವೈಸ್ ಏತಕ್ಕೆ ಕೊಡುತ್ತಿದ್ದೀರೆಂದು ನಾನು ಹೇಳಬೇಕಾಗುತ್ತದೆ. ಯಾವುದೋ ಒಂದು ಹಂತದಲ್ಲಿ ಮಾಮೂಲು ತೆಗೆದುಕೊಳ್ಳುವುದಕ್ಕೆ, ದುಡ್ಡನ್ನು ತೆಗೆದುಕೊಳ್ಳುವುದಕ್ಕೆ ನೀವು ಈ ಕೆಲಸವನ್ನು ಮಾಡುತ್ತಿದ್ದೀರೆಂದು ನಾನು ಹೇಳಲೇಬೇಕಾಗುತ್ತದೆ. ನಮ್ಮ ಮಾನ್ಯ ಬಂಗಾರಪ್ಪನವರು ಸಮಾಜವಾದಿಗಳು, ದಿವಂಗತ ಕೋಪಾಲಗೌಡರ ಪರಮಶಿಷ್ಯರು, ತಮಗೆ ಗೊತ್ತಿದೆ. ಮಾನ್ಯ ಗೋಪಾಲಗೌಡರು ಸಾವಿನ ದವಡೆಯಲ್ಲಿ ಇದ್ದಂಥ ಸಂದರ್ಭದಲ್ಲಿ ಅವರ ಸಂಪರ್ಕ ಬಂದಿತ್ತು. ನಾನು ಆಗ ವಿದ್ಯಾರ್ಥಿಯಾಗಿದ್ದೆ, ತಾವು ಮತ್ತು ಪ್ರೊ. ನಂಜುಂಡಸ್ವಾಮಿಯವರು ಅವರ ಜೊತೆಯಲ್ಲಿ ಕೆಲಸ ಮಾಡಿರುವವರು. ಆದರೆ ಸಮಾಜವಾದಿ ಬಂಗಾರಪ್ಪನವರು ಸಂಪೂರ್ಣವಾಗಿ ಸಮಾಜವಾದಕ್ಕೆ ವಿರುದ್ಧವಾಗಿ ಹೋಗುತ್ತಿರುವುದನ್ನು ನೋಡಲಿಕ್ಕೆ ನನಗೆ ತುಂಬಾ ದುಃಖವಾಗುತ್ತಿದೆ.

ನಾನು ಮುಖ್ಯ ಮಂತ್ರಿಗಳಿಂದ ಇದನ್ನು ನಿರೀಕ್ಷೆ ಮಾಡಿರಲಿಲ್ಲ. ನನಗೆ ಬಹಳ ದುಃಖವಾಗುತ್ತಿದೆ. ಹಿಂದುಳಿದ ವರ್ಗಗಳ ಬಗ್ಗೆ ನಾನು ಏನು ಅಂದುಕೊಂಡಿದ್ದೆ ಎಂದರೆ, ಒಬ್ಬ ಹಿಂದುಳಿದ ವರ್ಗದ ಮುಖ್ಯಮಂತ್ರಿಗಳು ಕರ್ನಾಟಕದಲ್ಲಿ ಮೊದಲನೆಯ ಬಾರಿಗೆ ಆಗಿದ್ದಾರೆ, ಹಿಂದುಳಿದ ವರ್ಗಕ್ಕೆ ಏನಾದರೂ ಸಹಾಯ ಮಾಡುತ್ತಾರೆ ಎಂದು ನಾನು ನಿರೀಕ್ಷೆ ಮಾಡಿದ್ದೆ. ಮಾನ್ಯ ಚಿನ್ನಪ್ಪರೆಡ್ಡಿ ಕಮಾಷನ್ ವರದಿ ಬಗ್ಗೆ ನಾವು ವಿಚಾರ ಮಾಡುತ್ತಿದ್ದೇನೆಂದು ಬಾಯಿಮಾತಿನಲ್ಲಿ ಹೇಳಿದ್ದಾರೆ. ವಿಚಾರ ಮಾಡುತ್ತಲೇ ಇದ್ದೀರಿ. ಮಾನ್ಯ ವೀರೇಂದ್ರ ಪಾಟೀಲರು ಅವರು ಹೋಗುತ್ತಾರೆಂದು ನಿರೀಕ್ಷೆ ಮಾಡಿರಲಿಲ್ಲ. ಹಾಗೆ ನೀವು ಕೂಡ ಒಂದು ದಿವಸ ಹೋಗುತ್ತೀರಿ. ಆದ್ದರಿಂದ ವಿಚಾರ ಮಾಡಿಕೊಂಡೇ ಇರಿ, ಪರಿಶೀಲನೆ ಮಾಡುತ್ತಲೆ ಇರಿ.

ಚಿನ್ನಪ್ಪರೆಡ್ಡಿ ಕಮೀಷನ್ ವರದಿಯ ಬಗ್ಗೆ ನೀವು ಕಾರ್ಯಾಚರಣೆ ಮಾಡಲಿಕ್ಕೆ ಆಗಲಿಲ್ಲ ಎನ್ನುವುದು ನನಗೆ ಗೊತ್ತಿದೆ. ಚಿನ್ನಪ್ಪರೆಡ್ಡಿ ಕಮೀಷನ್ ವರದಿಯನ್ನು ಕಾರ್ಯಾಚರಣೆಗೆ ತರಲು ನಿಮ್ಮ ಪಕ್ಷದಲ್ಲಿಯೇ ಕಾಲೆಳೆಯತಕ್ಕಂಥ ಜನರು ಇದ್ದಾರೆ ಏನ್ನುವುದು ನನಗೂ ಗೊತ್ತಿದೆ. ಇದು ಪಕ್ಷಾತೀತವಾಗಿರತಕ್ಕಂಥ ಪ್ರಶ್ನೆ. ಬಡ ಜನರ ಬಗ್ಗೆ, ಹಿಂದುಳಿದ ವರ್ಗದವರ ಬಗ್ಗೆ, ಅಲ್ಪಸಂಖ್ಯಾತರ ಬಗ್ಗೆ ನಿಮಗೆ ಅನುಕಂಪ ಇದೆ ಎನ್ನುವುದಾದರೆ, ನಿಮಗೆ ನಾವು ಎಲ್ಲ ರೀತಿಯ ಸಹಕಾರವನ್ನು ಕೊಡುತ್ತಿದ್ದೆವು, ಆದರೆ ತಾವು ಏನು ಮಾಡಿದ್ದೀರಿ? ತಾವು ಬಂದು ಆಗಲೇ 3 ತಿಂಗಳಾಯಿತು. ಪಾರ್ಲಿಮೆಂಟ್ ಎಲೆಕ್ಷನ್ ಬರುತ್ತಿದೆ, ತೀರ್ಮಾನ ನಿಮ್ಮ ಪರವಾಗಿ ಬರದಿದ್ದರೆ ಅಧಿಕಾರ ಬಿಟ್ಟು ಹೋಗಬೇಕಾಗುತ್ತದೆ. ಅಧಿಕಾರ ಸಿಕ್ಕಿದಾಗಲಾದರೂ ನೀವು ಮಾಡದೇಹೋದರೆ ಇನ್ನು ಯಾವಾಗ ಮಾಡುವುದು. ಪರಿಶಿಷ್ಟಜಾತಿಯ ಕೆಲವು

ಅಧಿಕಾರಿಗಳಿಗೆ ಹಿಂದುಳಿದ ವರ್ಗದ ಕೆಲವು ಅಧಿಕಾರಿಗಳಿಗೆ ಅಲ್ಪಸಂಖ್ಯೆ ಕೆಲವು ಅಧಿಕಾರಿಗಳಿಗೆ ಒಳ್ಳೆಯ ಜಾಗಗಳನ್ನು ಮೇಯಲಿಕ್ಕಿ ಕೊಟ್ಟಿರೆ ಹಿಂದುಳಿದ ವರ್ಗದವರಿಗೆ ಸಹಾಯ ಮಾಡಿದಂತಾಗುತ್ತದೆಯೇ? 40 ವರ್ಷಗಳಲ್ಲಿ ಈ ಹಿಂದುಳಿದ ವರ್ಗದ ಅಧಿಕಾರಿಗಳು, ಅಲ್ಪಸಂಖ್ಯಾತ ಅಧಿಕಾರಿಗಳು ಏನು ಮಾಡಿದ್ದಾರೆ.

ಒಳ್ಳೆಯವರಿದ್ದಲ್ಲಿ ಕೊಡಿ ಬೇಡವೆಂದು ಹೇಳುವುದಿಲ್ಲ. ಅಲ್ಲಿ ದಕ್ಷರಿದ್ದರೆ, ಪ್ರಾಮಾಣಿಕರಿದ್ದರೆ ಅವರಿಗೆ ಕೊಡಿ. ಆದರೆ ಈ ವರ್ಗದ ಜನರಿಗೆ ಏನು ಮಾಡಿದ್ದೀರಿ? ಇವತ್ತು ನಿಮ್ಮ ಬಣ್ಣ ಬಯಲಾಗಿದೆ, ನಿಮ್ಮ ಬಗ್ಗೆ ನನಗೆ ತುಂಬಾ ನಿರಾಶೆಯಾಗಿದೆ. ಬಿ.ಸಿ.ಎಂ. ಕಾರ್ಪೋರೇಷನ್ನಿಗೆ ನಿಮ್ಮ ಸರ್ಕಾರ ಬಂದ ಮೇಲೆ 1990-91ರಲ್ಲಿ ಒಂದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟು ಅವರು 1500 ಜನರಿಗೆ ಸಾಲ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿ 1991-92ರಲ್ಲಿ ಒಂದು ಕೋಟಿ ಬದಲಿಗೆ 3 ಕೋಟಿ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇನ್ನು ಮೈನಾರಿಟಿ ಡೆವೆಲಪ್‌ಮೆಂಟ್ ಕಾರ್ಪೋರೇಷನ್ ಎಂದು ಒಂದು ಇದೆ. ತಾವು ದಯವಿಟ್ಟು ಇದನ್ನು ಗಮನಿಸಬೇಕು. ಸರ್ಕಾರಕ್ಕೆ ಆರ್ಥಿಕವಾಗಿ ಈ ಜನಗಳ ಉದ್ಧಾರ ಮಾಡಬೇಕು ಎಂಬ ಉದ್ದೇಶ ಇದ್ದಿದ್ದರೆ ಎಷ್ಟು ಹಣ ಕೊಟ್ಟಿದ್ದೀರಿ? ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಿಂದ 833 ಜನರಿಗೆ ಸಾಲ ಕೊಡುತ್ತಿದ್ದಾರೆ. ಒಂದು ಕೋಟಿ ರೂಪಾಯಿಗಳನ್ನು ಕಳೆದ ವರ್ಷ ಕೊಟ್ಟಿದ್ದರೆ, ಈ ವರ್ಷ ಹೆಚ್ಚು ಕಡಿಮೆ 2 ಕೋಟಿ ರೂಪಾಯಿಗಳನ್ನು ಕೊಡುತ್ತಾರಂತೆ. ಈ ರಾಜ್ಯದಲ್ಲಿ ಶೇಕಡ 60ರಷ್ಟು ಮಂದಿ ಪರಿಶಿಷ್ಟ ಜಾತಿಯವರು ಪರಿಶಿಷ್ಟ ವರ್ಗದವರು ಹಾಗೂ ಹಿಂದುಳಿದವರು ಇರತಕ್ಕಂಥ ಮೂರು ಕೋಟಿ ಜನರಿಗೆ ತಲಾ ಒಂದು ರೂಪಾಯಿ ಸಾಲ ಕೊಟ್ಟಿದ್ದಾರೆ. ಈ ಸಾಲ ಕೊಡುವುದಕ್ಕೆ ಇವರೇ ಮುಖ್ಯ ಮಂತ್ರಿಗಳಾಗಿರಬೇಕೆ? ಈ ಜನರ ಉದ್ಧಾರ ಮಾಡಬೇಕೆಂದರೆ ಪೊಲಿಟಿಕಲ್ ಕಮಿಟ್‌ಮೆಂಟ್ ಬೇಕಾಗುತ್ತದೆ. ನನ್ನ ಸ್ಥಾನಮಾನ ಹೋದರೂ ಪರವಾಗಿಲ್ಲ, ಅವರನ್ನು ನಾನು ಉದ್ಧಾರ ಮಾಡುತ್ತೇನೆಂಬ ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಆಗ ಈ ರಾಜ್ಯದ ಹಿಂದುಳಿದ ವರ್ಗ, ರಾಜ್ಯದ ಬಡಜನತೆ ನಿಮ್ಮ ಪರವಾಗಿ ನಿಲ್ಲುತ್ತದೆ. ಆ ಒಂದು ರಾಜಕೀಯ ಧೈರ್ಯವನ್ನು ತಾವು ತೋರಿಸಬೇಕಾಗುತ್ತದೆ. ಯಾವ ಗೋಪಾಲಗೌಡರ ಗರಡಿಯಲ್ಲಿ ನೀವು ಪಳಗಿದಿರೋ, ಯಾವ ಸಮಾಜವಾದಿ ತತ್ವದ ಹಿನ್ನೆಲೆಯಲ್ಲಿ ಸೊರಬ ಕ್ಷೇತ್ರದಿಂದ 25 ವರ್ಷಗಳ ಕಾಲ ಸತತವಾಗಿ ಗೆದ್ದು ಬಂದು ಮುಖ್ಯ ಮುಂತ್ರಿಗಳಾಗಿದ್ದೀರೋ ಆ ವರ್ಗದ ಜನರಿಗೆ ಸಿಕ್ಕಿರತಕ್ಕದ್ದು ಮಾತ್ರ ತಿರುಪತಿ ನಾಮ ಎನ್ನುವುದನ್ನು ಹೇಳಬೇಕಾಗುತ್ತದೆ.

ಹಿಂದೆ ನಾವು ಈ ಹೆಸರುಗಳನ್ನು ಹೇಳಿಕೊಂಡು ಅಧಿಕಾರಕ್ಕೆ ಬಂದಿರಲಿಲ್ಲ. ಮಂಡಲ ಆಯೋಗದ ವರದಿಯನ್ನು ಜಾರಿಗೆ ಕೊಡಬೇಕೆಂದು ಇಡೀ ರಾಷ್ಟ್ರವೇ ಹೇಳಿದೆ. ಅದನ್ನು ಜಾರಿಗೆ ಕೊಡದೆ ಒಂದು ಸರ್ಕಾರವೇ ಹೋಯಿತು. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಯಾರದು ಸರಿ. ಯಾರದು ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಮಂಡಲ ಆಯೋಗದ ವರದಿಯನ್ನು ಜಾರಿಗೆ ಕೊಡುವ ಬಗ್ಗೆ ಹಿಂದುಳಿದ ವರ್ಗದ ಮುಖಂಡರಾಗಿರತಕ್ಕ ನೀವು ಬಾಯಿಬಿಡಲಿಲ್ಲ. ತಾವು ಈ ಬಗ್ಗೆ ತೀವ್ರವಾಗಿ ಆಲೋಚಿಸಿ ಮಂಡಲ ಆಯೋಗದ ವರದಿಯನ್ನು ಜಾರಿಗೊಳಿಸಬೇಕೆಂದು ನಾನು ಒತ್ತಾಯಿಸುತ್ತೇನೆ. ಈ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತನ್ನಿ. ನಿಮ್ಮ ಮಂದಿರತಕ್ಕ ಚಿನ್ನಪ್ಪರೆಡ್ಡಿ ಆಯೋಗದ ವರದಿಯನ್ನು ಜಾರಿಗೊಳಿಸಿ,, ಆಗ ನಿಮಗೆ ಶಬಾಶ್‌ಗಿರಿ ಕೊಡುತ್ತೇನೆ. ಅದಕ್ಕೆ ಬದಲಾಗಿ ಕೇವಲ

ರಾಜಕೀಯಕ್ಕೋಸ್ಕರ ಇದನ್ನು ಉಪಯೋಗಿಸಿಕೊಳ್ಳುವುದನ್ನು ಬಿಡಬೇಕು. ಇನ್ನು ನಮ್ಮ ಸ್ನೇಹಿತರೆಲ್ಲ ಹೇಳಿದರು, ಬೆಳಿಗ್ಗೆ ಈ ಸದನದಲ್ಲಿ ರೈತರ ಬವಣೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಕೆಇಬಿಯವರು 60 ಸಾವಿರ ಐ.ಪಿ. ಸೆಟ್ಟುಗಳಿಗೆ ಎನರ್ಜೈಸ್ ಮಾಡುತ್ತಾರೆಂದು ಹೇಳಿದರು.

ನಿಜ, ಈ ದೃಷ್ಟಿಯಲ್ಲಿ ಕಳೆ 2-3 ತಿಂಗಳಲ್ಲಿ ಕೆಇಬಿಯವರು ಮೆಟೀರಿಯಲ್ ಕೊಟ್ಟು ಎನರ್ಜೈಸ್ ಮಾಡುವುದಕ್ಕೆ ಮಾಡಿದ್ದಾರೆ. ಇದ್ದಕ್ಕಿದ್ದ ಹಾಗೆ ಅವತ್ತಿನ ದಿವಸ ತಾವು ಹೇಳಿದ ಹಾಗೆ, ಇನ್‌ಸ್ಪೆಷನ್ ಆಗುವುದು ಬೇಡ. ಒಂದು ಕಂಬ ತೆಗೆದುಕೊಂಡು ಹೋಗಬೇಕಾದರೆ 500 ರೂಪಾಯಿ ಕೊಡಬೇಕು. ಈ ಮಾತನ್ನು ಹೇಳಿ ರಾಜಕೀಯವಾಗಿ ನಿಮ್ಮನ್ನು ದೂಷಣೆ ಮಾಡಬೇಕೆಂದು ಹೇಳುತ್ತಿಲ್ಲ. ಯಾರಾದರೂ ಶಾಸಕರು ನೆಟ್ಟು, ಬೋಲ್ಟು ಕೇಳಿದರೆ ಅಂಗಡಿಯಲ್ಲಿ ಹೋಗಿ ತೆಗೆದುಕೊಂಡು ಬನ್ನಿ, ಹಾಕಿಕೊಡುತ್ತೇವೆಂದು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳು ಹೇಳುತ್ತಾರೆ. ಕೆ.ಇ.ಬಿ. ಮಾಲುಗಳು ಕೆಇಬಿ ಕಛೇರಿಯ ಮುಂದೆ ಅಂಗಡಿಗಳಲ್ಲಿ ಇರುತ್ತದೆ. ಆ ವಿಚಾರ ನಿಮಗೂ ಗೊತ್ತಿದೆ.

ಆಡಳಿತದಲ್ಲಿ ಮುಖ್ಯಮುಂತ್ರಿಗಳಿಗೆ ಇದ್ದಂತಹ ನಿಯಂತ್ರಣ ಪ್ರತಿಕ್ಷಣವೂ ಕಡಿಮೆಯಾಗುತ್ತಿದೆ ಇದು ಬಹಳ ಮುಖ್ಯವಾದ ಅಂಶ. ತಾವು ರಾಜ್ಯಪಾಲರ ಭಾಷಣದಲ್ಲಿ ಬಡವರಿಗೆ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಡಾ. ಅಂಬೇಡ್ಕರ್ ಅವರ ಜನ್ಮ ಶತಾಬ್ದಿಯನ್ನು ಏನು ಆಚರಿಸುತ್ತಿದ್ದೇವೆ ಅದರ ಅಂಗವಾಗಿ 60 ಸಾವಿರ ಮನೆಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಅದಲ್ಲದೆ ಒಂದು ಲಕ್ಷ ಮನೆಗಳನ್ನು ನಾರ್ಮಲ್ ಪ್ರೋಗ್ರಾಂನಲ್ಲಿ ಕಟ್ಟುತ್ತೇವೆಂದು ಹೇಳಿದ್ದಾರೆ. ಇದರ ಜೊತೆಗೆ ತಾಲ್ಲೂಕಿಗೆ ಒಂದು ಸಾವಿರ ಮನೆಗಳನ್ನು ನಿರ್ಮಿಸಿ ಹಂಚುತ್ತೇವೆಂದು ಹೇಳಿದ್ದಾರೆ. ಈ ಪ್ರಕಾರ 1 ಲಕ್ಷದ 75 ಸಾವಿರ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ರಾಜ್ಯಪಾಲರ ಭಾಷಣದ ಮೂಲಕ ನೀವು ಹೇಳಿದ್ದೀರಿ. ಬಹುಶಃ ನಮ್ಮ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಇದನ್ನು ನೋಡಿ ಏನೂ ಹೇಳಲಿಕ್ಕಾಗದೆ ಸುಮ್ಮನೆ ಕುಳಿತುಕೊಳ್ಳಬೇಕಾಗಿದೆ. ಅವರಿಗೆ ಬೇರೆ ದಾರಿ ಇಲ್ಲ. ನನಗೆ ಗೊತ್ತಿದೆ, ಇವರು ಹಣ ಕೊಡುವುದಕ್ಕಾಗುವುದಿಲ್ಲ. ಈ ಹಣವನ್ನು ಎಲ್ಲಿಂದ ತರುತ್ತಾರೆ. ನೀವು ತರುವುದಕ್ಕೆ ಸಾಧ್ಯವಿಲ್ಲ. ಇದು ಪೊಳ್ಳು ಘೋಷಣೆ ಅಷ್ಟೆ. ಒಂದು ಸಾವಿರ ಬೇಡ, 500 ಮನೆಗಳನ್ನು ಒಂದು ವರ್ಷದಲ್ಲಿ ಒಂದು ತಾಲ್ಲೂಕಿನಲ್ಲಿ ಕಟ್ಟುವುದಾದರೆ ನನ್ನ ಸ್ಥಾನಕ್ಕೆ ನಾನು ರಾಜೀನಾಮೆ ಕೊಡುತ್ತೇನೆ. ಒಂದು ಸಾವಿರದ ಮಾತಿರಲಿ, ಈ ಮನೆಗಳನ್ನು ಕಟ್ಟಬೇಕು.

ಎಲ್ಲಿ ಆಗುತ್ತದೆ? ನಿಮ್ಮ ಹತ್ತಿರ ದುಡ್ಡು ಎಲ್ಲಿದೆ ಇದು ಒಳ್ಳೆಯ ಕಾರ್ಯಕ್ರಮ, ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ನನಗೆ ಗೊತ್ತಿದೆ, ಇದು ಕೇವಲ ಘೋಷಣೆ. ಆಕಸ್ಮಿಕವಾಗಿ ಯಾವುದೋ ಸಾರ್ವಜನಿಕ ಭಾಷಣದಲ್ಲಿ ಮೆರವಣಿಗೆ ಮಾಡತಕ್ಕ ಸಂದರ್ಭದಲ್ಲಿ, ಜಂಬೂ ಸವಾರಿ ಮಧ್ಯದಲ್ಲಿ ಇದು ಘೋಷಣೆ ಮಾಡಿರುವ ಅಂಶ ಎಂಬುದನ್ನು ಮಾನ್ಯ ಬಂಗಾರಪ್ಪನವರಿಗೆ ನಾನು ಈ ಸಂದರ್ಭದಲ್ಲಿ ಜ್ಞಾಪಕ ಮಾಡಲಿಕ್ಕೆ ಬಯಸುತ್ತೇನೆ. ಸ್ವಾಮಿ, ಮಾನ್ಯ ಮೊಯಿಲಿ ಅವರೆ, ತಾವು ಈ ಸರ್ಕಾರದ ಹಿರಿಯ ಮತ್ತು ದಕ್ಷ ಮಂತ್ರಿಗಳು ಎಂದು ಹೆಸರು ಗಳಿಸಿದ್ದೀರಿ. ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ, ಒಂದು ಸಾವಿರ ಮನೆಗಳನ್ನು ಕಟ್ಟಿಸುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲ. ಆದರ ಬದಲಾಗಿ ಕಳೆದ ಒಂದು ವರ್ಷದಿಂದ ಜನತಾ ಹೌಸಿಂಗ್ ಸ್ಕೀಂಮ್‌ನಲ್ಲಿ ಬಡವರಿಗೆ ಕಟ್ಟುತ್ತಿರುವ ಮನೆಗಳ ಗೋಡೆಗಳು ಅರ್ಧದಲ್ಲೇ ನಿಂತಿವೆ. ಒಂದೊಂದು ತಾಲ್ಲೂಕಿನಲ್ಲಿ 200-250 ಮನೆಗಳು ಕಟ್ಟದೆ ಹಾಗೇ ಉಳಿದಿವೆ. 2ಕೋಟಿ ರೂಪಾಯಿ ಒಂದೊಂದು ಜಿಲ್ಲೆಗೆ ಸರ್ಕಾರ ಕೊಡಬೇಕಾದ ಹಣ ಬಾಕಿ ಇದೆ. 40 ಕೋಟಿ ರೂಪಾಯಿ ಬಾಕಿ ಇದೆ. ಕಳೆದ ಸಾರಿ ನಿಮ್ಮ

ಮುಖ್ಯಮಂತ್ರಿಗಳು ಅಲ್ಲಿ ಕುಳಿತುಕೊಂಡಿದ್ದವರು ಯಾರ ಜೇಬಿಗೆ ಹೋಗುತ್ತಿದೆ ಈ ಹಣ, ಯಾರ ಜೇಲಿಗೆ ಹೋಗ್ತಾ ಇದೆ ಈ ಹಣ ಎಂದು ಹೇಳಿದರು ಈಗ ಯಾರ ಜೇಬಿಗೆ ಹೋಗುತ್ತಿದೆ ಹಣ ಎಂದು ಅವರಿಗೆ ಆ ಪ್ರಶ್ನೆ ಕೇಳಬೇಕಾಗಿದೆ.

ಇನ್ನು ಎರಡು ಮೂರು ತಿಂಗಳಾದಮೇಲೆ ನಿಮ್ಮ ಸರ್ಕಾರದ ಖಜಾನೆ ಬರಿದಾಗುವುದರಲ್ಲಿ ಯಾವುದೇ ರೀತಿಯ ಸಂಶಯ ಇಲ್ಲ ಎಂಬುದು ನನಗೆ ಗೊತ್ತಿದೆ. ಆದರೆ ನಿಮ್ಮ ಅದೃಷ್ಟಕ್ಕೆ ಚುನಾವಣೆ ಬಂದಿದೆ. ಮತ್ತೊಂದೆರಡು ತಿಂಗಳು ನಡೆಯುತ್ತದೆ. ಈಗ ಕ್ಯಾಬಿನೆಟ್ ಎಕ್ಸ್‌ಪ್ಯಾನ್‌ಷನ್, ಯಾವುದೂ ಆಗುವುದಿಲ್ಲ. ಎಲ್ಲಾ ಕಾರ್ಯಕ್ರಮಗಳೂ ಚುನಾವಣೆಗಳು ನಂತರ, ಚುನಾವಣೆಗಳು ನಂತರ ಎಂದು ಹೇಳುತ್ತಾರೆ. ನಾವಿದ್ದರೆ ನೋಡೋಣ, ಚುನಾವಣೆ ನಂತರ ಏನಾಗುತ್ತದೆ ಎಂದು ನೋಡೋಣ. ಮಾನ್ಯ ಮೊಯಿಲಿಯವರಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ನೀವು ಅಧಿಕಾರದಲ್ಲಿ ಎಷ್ಟು ದಿನ ಇರುತ್ತೀರೋ ಗೊತ್ತಿಲ್ಲ, ನಿಮಗೆ ಬಡವರು ಶಾಪ ಹಾಕುತ್ತಿದ್ದಾರೆ. ಈ ಜನತಾ ಮನೆಗಳಿಗೆ ಕೊಡಬೇಕಾದ 40 ಕೋಟಿ ರೂಪಾಯಿಗಳಲ್ಲಿ ಈ ಸದನ ಮುಗಿಯುವುದರೊಳಗಾಗಿ ಕೊನೇಪಕ್ಷ ಐದು ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ರೆ ಬಹಳ ಉಪಯೋಗವಾಗುತ್ತದೆ ಎಂದು ನಾನು ತಿಳಿದಿದ್ದೇನೆ.

ಇನ್ನು ಆರೋಗ್ಯ ಕಾರ್ಯಕ್ರಮದ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ಬಹಳ ಹೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಬಹಳ ಹೆಲ್ತ್ ಕಾನ್‌ಷಿಯಸ್. ಅವರು ಹೋದ ಕಡೆಗಳಲ್ಲೆಲ್ಲಾ ನಾನು ಇಷ್ಟೊಂದು ಎಕ್ಸರ್‌ಸೈಸ್ ಮಾಡುತ್ತೇನೆ, ಇಡೀ ರಾಜ್ಯದ ಜನ ಎಕ್ಸರ್‌ಸೈಸ್ ಮಾಡಬೇಕು, ನನ್ನ ತೂಕ ಇಷ್ಟು ಕಡಿಮೆ ಇದೆ ಎಂದು ಹೇಳುತ್ತಾರೆ. ನನಗೆ ಗೊತ್ತಿರುವಹಾಗೆ, ಅವರ ತೂಕ ಜಾಸ್ತಿಯಾಗಿದೆ. ಏಕೆಂದರೆ, ಅವರು ಬಹಳ ಆನಂದದಲ್ಲಿದ್ದಾರೆ. ಅವರು ಹೇಳಿಕೊಂಡಿರುವ ಪ್ರಕಾರ ಮೂರು ಕೆ.ಜಿ. ತೂಕ ಜಾಸ್ತಿಯಾಗಿದೆ. ಏಕೆಂದರೆ ಆನಂದ. ಅಲ್ಲಿ ಎಕ್ಸರ್‌ಸೈಸ್ ಏನೂ ಕೆಲಸ ಮಾಡೂತ್ತಿಲ್ಲ, ನಾನು ನಿಮ್ಮ ಮಂತ್ರಿಗಳ ಮಾತನ್ನು ಕೇಳಿ ತೂಕ ಕಡಿಮೆ ಮಾಡಿಕೊಂಡಿದ್ದೇನೆ. ಈಗ ಕರ್ನಾಟಕ ರಾಜ್ಯದ ಜನತೆಗೆ ಆರೋಗ್ಯದ ಟೋಪಿ ಹಾಕುವುದಕ್ಕೆ ಇವರು ಹೊರಟಿದ್ದಾರೆ. ಇದು ಆರೋಗ್ಯದ ಟೋಪಿ. ಶ್ರೀಮತಿ ನಾಗರತ್ನಮ್ಮನವರಿಗೆ ಗೊತ್ತಿದೆ. ತಾವು ಮಂತ್ರಿಗಳಾದ ಮೇಲೆ ಸ್ವಲ್ಪ ನಿಮ್ಮ ರಾಜಕೀಯ ತೂಕವನ್ನು ಉಪಯೋಗಿಸಿ ಡಾಕ್ಟರ್‌ಗಳನ್ನು ಫಿಲಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೀರಿ. ಆಸ್ಪತ್ರೆಗಳಿಗೆ ಹೋಗಿ ಚೀಟಿ ಕೊಡುತ್ತಾ ಇದ್ದೀರಿ. ಆಡಳಿತದಲ್ಲಿ ಸ್ವಲ್ಪ ನಿಯಂತ್ರಣ ತರುವುದಕ್ಕೆ ನೀವು ಪ್ರಯತ್ನ ಮಾಡುತ್ತಾ ಇದ್ದೀರಿ. ತಮ್ಮ ಆಜ್ಞೆಗಳನ್ನು ಔಷಧಿಗಳನ್ನು ಕೊಳ್ಳುವ ವಿಚಾರದಲ್ಲಿ ನಾನು ನೋಡಿದ್ದೇನೆ, ಕೇಳಿದ್ದೇನೆ, ಅದು ಒಳ್ಳೆಯ ಕೆಲಸ. ಅದು ಮುಂದುವರೆಸಬೇಕು. ನಾನಾದರೂ ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಸರ್ವರಿಗೂ ಆರೋಗ್ಯ ಎಂದು ಹೇಳಿದ್ದಾರೆ. ಕರ್ನಾಟಕ ರಾಜ್ಯದ ನಾಲ್ಕು ಕೋಟಿ ಜನಗಳ ಆರೋಗ್ಯ ತಪಾಸಣೆ ಮಾಡುವುದಕ್ಕೆ ಸಾಧ್ಯವೆ? ಒಂದು ತಪಾಸಣೆ ಮಾಡಬೇಕು ಎಂದರೆ, ಒಂದು ಎಕ್ಸರೇ ತೆಗೆಸಬೇಕು, ಒಂದು ಯೂರಿನ್ ಟೆಸ್ಟ್ ಮಾಡಬೇಕು ಒಂದು ಅಬ್ಡೊಮನ್ ಮಾಡಬೇಕು ಎಂದರೆ 200 ರೂಪಾಯಿ ಆಗುತ್ತದೆ. ಕೊನೇ ಪಕ್ಷ ಒಂದು ಸಾರಿ ಮಾಡಿಸುವುದಕ್ಕೆ 100 ಕೋಟಿ ರೂಪಾಯಿ ಬೇಕಾಗುತ್ತದೆ. ನಿಮ್ಮ ಹತ್ತಿರ ಇನ್‌ಫ್ರಾಸ್ಟ್ರಕ್ಚರ್ ಎಲ್ಲಿದೆ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಅಷ್ಟೆಲ್ಲಾ ತಪಾಸಣೆ ಮಾಡದೇ ಇದ್ದರೂ ಮಕ್ಕಳಿಗೆ ಕಿವಿ, ಕಣ್ಣು, ಬಾಯಿ ಟೆಸ್ಟ್ ಮಾಡಿ, ಏತಕ್ಕೆ ಇವರಿಗೆ ವಿದ್ಯೆ ಮುಂದೆಕ್ಕೆ ಹೋಗುತ್ತಿಲ್ಲ, ಕಿವುಡಾಗಿದೆಯೇ, ಕಣ್ಣು ಸರಿಯಾಗಿಲ್ಲವೇ ಎಂದು ನೋಡುತ್ತಾರೆ. ಹೀಗೆ ಮಕ್ಕಳನ್ನು ನೋಡಿಕೊಂಡು ಶುರು ಮಾಡಿ ಮುಂದಕ್ಕೆ ಹೋಗೋಣ. ಒಂದೇ ಸಾರಿ

ರೇಡಿಯಾಲಜಿಸ್ಟ್, ಅನೆಸ್ತಿಟಿಸ್ಟ್ ಎಲ್ಲರನ್ನೂ ಒಟ್ಟಿಗೆ ಕಳುಹಿಸುತ್ತೇವೆಂದು ಹೇಳಿಲ್ಲ. ತಪಾಸಣೆ ಮಾಡಿಸುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಮಾತು ಕೇಳಿದ ಮೇಲೆ ಈಗ ನೀವು ಪಕ್ಕಾ ಡಾಕ್ಟರ್ ಆಗಿಬಿಟ್ಟಿದ್ದೀರಿ ಎಂದು ಅನ್ನಿಸುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಮಾನ್ಯ ಆರೋಗ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏಕೆಂದರೆ ಅವರು ಸತ್ಯ ಹೇಳಿದ್ದಾರೆ. ಇದನ್ನು ಮಾಡುವುದಕ್ಕಾಗುವುದಿಲ್ಲ ಎಂದು ಅವರೇ ಒಪ್ಪಿಕೊಂಡಿದ್ದಾರೆ. ಇದನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದು ಕೇವಲ ಜನರಿಗೆ ಟೋಪಿ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಉತ್ಪ್ರೇಕ್ಷೆ ಮಾಡತಕ್ಕವನಲ್ಲ. ನಾನು ಸ್ವಲ್ಪ ದಿವಸ ಸ್ವಲ್ಪ ದಿವಸ ಆರೋಗ್ಯ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಕ್ಕಳಿಂದ ಪ್ರಾರಂಭ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಕ್ಕಳಿಂದ ಪ್ರಾರಂಭ ಮಾಡುತ್ತೇನೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಬೇಕಾಗಿತ್ತು. ಇದು ಮಕ್ಕಳಿಗೆ ಮಾತ್ರ ಸೀಮಿತವಾಗಿದೆ ಎನ್ನುವ ಮಾತು ಇವತ್ತು ಬಂದಿದೆ. ಇಡೀ ರಾಜ್ಯದ 4 ಕೋಟಿ ಜನರಿಗೆ ಎನ್ನತಕ್ಕ ಮಾತು ಇಲ್ಲ. ಇಡೀ ರಾಜ್ಯದ ಜನತೆಯನ್ನು ತಪಾಸಣೆ ಮಾಡುವುದಕ್ಕಾಗುವುದಿಲ್ಲ. ರಾಜ್ಯಪಾಲರ ಬಾಯಲ್ಲಿ ಈ ಬಗ್ಗೆ ಹೇಳಿಸಿದ್ದಾರೆ. ಇಡೀ ಇಂಡಿಯಾ ದೇಶದಲ್ಲೇ ನವ ಚೈತನ್ಯದ ಕಾರ್ಯಕ್ರಮ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಇದು ಒಂದು ಬರೀ ಸ್ಲೋಗನ್ ಆಗುತ್ತದೆ. ಆದ್ದರಿಂದ ಇದಕ್ಕೆ ಬದಲು ನಾನು ಒಂದು ಸಲಹೆ ಕೊಡುತ್ತೇನೆ. ದಯಮಾಡಿ ಒಂದೊಂದು ತಾಲ್ಲೂಕಿಗೆ ಒಂದರಂತೆ ಸಂಚಾರಿ ಆಸ್ಪತ್ರೆಗಳನ್ನು ಪ್ರಾರಂಭ ಮಾಡಿ.

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು, ಸುಳ್ಯದಲ್ಲಿ ಬಹುಶಃ ಟ್ರೈಬಲ್ ವೆಲ್‌ಫೇರ್ ಪ್ರೋಗ್ರಾಮ್ ಕೆಳಗೆ ಸಂಚಾರಿ ಆಸ್ಪತ್ರೆಗಳು ಓಡಾಡುತ್ತಿವೆ. ಒಂದೊಂದು ತಾಲ್ಲೂಕಿಗೆ ಒಂದೊಂದು ಸಂಚಾರಿ ಆಸ್ಪತ್ರೆಯನ್ನು ನೀವು ಪ್ರಾರಂಭ ಮಾಡಿದರೆ ಬಹಳ ಅನುಕೂಲವಾಗುತ್ತದೆಂದು ತಿಳಿದಿದ್ದೇನೆ. ಮತ್ತೆ ಗ್ರೀನ್ ಕಾರ್ಡ್ ಬಗ್ಗೆ ಹೇಳಿದ್ದೀರಿ. ಕೊನೇ ಪಕ್ಷ ಒಂದು, ಒಂದೂವರೆ, ಆದಮೇಲಾದರೂ ತಮಗೆ ಬುದ್ಧಿ ಬಂತಲ್ಲ ಎಂದು ನನಗೆ ಸಂತೋಷವಾಗುತ್ತದೆ. ಕಳೆದ ಸಾರಿ ಅಜೀಜ್ ಸೇಟ್ ಅವರು, ಹಸಿರು ಬಣ್ಣವನ್ನು ಬದಲಾವಣೆ ಮಾಡುತ್ತೇವೆ ಎಂದು ಹೇಳಿದರು. ಕೆಂಪು ಕಾರ್ಡ್, ಹಳದಿ ಕಾರ್ಡ್, ಪಂಚರಂಗೀ ಕಾರ್ಡ್ ಮಾಡುತ್ತೇವೆಂದು ಹೇಳಿದರು. ಈ ಪಂಚರಂಗೀ ನಿಲ್ಲಿಸಿ ಹಸಿರು ಕಾರ್ಡ್ ಕಾರ್ಯಕ್ರಮ ಮುಂದುವರಿಸುತ್ತೇವೆಂದು ಹೇಳಿದ್ದಾರೆ. ಇದಕ್ಕೆ ಯಾರನ್ನು ಅಭಿನಂದಿಸಬೇಕೋ ನನಗೆ ಗೊತ್ತಾಗುತ್ತಾ ಇಲ್ಲ. ಮೂರ್ತಿ ಸ್ವರೂಪರಾಗಿರತಕ್ಕಂಥ ಮುಖ್ಯಮಂತ್ರಿಯವರನ್ನೇ ಇದಕ್ಕೋಸ್ಕರವಾಗಿ ಅಭಿನಂದಿಸುತ್ತೇನೆ. ಈ ಹಸಿರು ಕಾರ್ಡ್‌ಗಳು ಕೆಲವು ಉಳ್ಳವರಿಗೂ ಹೋಗಿದೆ ಎಂಬುದನ್ನು ನಾನೂ ಒಪ್ಪುತ್ತೇನೆ, ನನಗೆ ಬಹಳ ಬೇಕಾಗಿರುವವರು ಒಬ್ಬರು, ಅವರ ಹೆಸರನ್ನು ನಾನು ಇಲ್ಲಿ ಹೇಳುವುದಕ್ಕೆ ಹೋಗುವುದಿಲ್ಲ. ಅವರು ಅವರ ಮನೆಯಲ್ಲಿ ಕೆಲಸ ಮಾಡುವವರ ಹೆಸರಿನಲ್ಲಿ ಹಸಿರು ಕಾರ್ಡ್‌ನ್ನು ತೆಗೆದುಕೊಂಡಿದ್ದಾರೆ.

ನಮ್ಮ ಸಮಾಜದಲ್ಲಿ ಇದೆಲ್ಲ ಇರತಕ್ಕದ್ದು. ನಿನ್ನೆ ಮಾನ್ಯ ನಾಗರತ್ನಮ್ಮನವರು ಮಾತನಾಡುತ್ತಾ ಹೇಳಿದರು, ಏನ್ರಿ ಗುರುಪಾದಪ್ಪನವರೇ, 3 ಲಕ್ಷ ರೂಪಾಯಿ ನಾವು 300 ಜನ ಶಾಸಕರಿಗೆ ಖರ್ಚುಮಾಡುತ್ತಿದ್ದೇವೆ, ಕರ್ನಾಟಕದಲ್ಲಿ 50ರಿಂದ 60 ಸಾವಿರ ಜನರ ವ್ಯಾಪ್ತಿಗೆ ಬರುವ ಪ್ರೈಮರಿ ಹೆಲ್ತ್ ಸೆಂಟರ್‌ಗಳಿಗೆ ನಾವು ಖರ್ಚು ಮಾಡುವುದು

ಕೇವಲ 30 ಸಾವಿ ರೂಪಾಯಿಗಳು ಎಂದು. ನಾನು ಒಪ್ಪುತ್ತೇನೆ. ಆದರೆ ನಾವು ಯಾರೂ ಶಾಸಕರೂ ಇದರ ದುರುಪಯೋಗ ಮಾಡುತ್ತಿಲ್ಲ. ಯಾರೂ ಯಾರೋ ಬರುತ್ತಾರೆ, ಪತ್ರಗಳನ್ನು ಬರೆಸಿಕೊಂಡು ಹೋಗುತ್ತಾರೆ. ಅದರಿಂದಾಗಿ ಕೊಡಬೇಕಾಗಿದೆಯೇ ವಿನಃ ಎಂಎಲ್ಎಗಳು ತಿನ್ನುತ್ತಾ ಇರತಕ್ಕ ವಿಚಾರ ಅಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನಿನ್ನೆ ಮಾನ್ಯ ಸದಸ್ಯರು ಎಲ್ಹೆಚ್ಎನ್ಲಿನ ವಿಷಯ ಪ್ರಸ್ತಾಪ ಮಾಡಿದ್ದಕ್ಕೆ, ಇಂತಹ ವಿಷಯ ತರಬಾರದಾಗಿತ್ತು ಎಂದು ಹೇಳಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಯಾರು ಯಾರು ಎಷ್ಟೆಷ್ಟು ಔಷಧಿ ತಿಂದಿದ್ದಾರೆ ಎನ್ನುವ ಬಗ್ಗೆ ಪಟ್ಟಿ ಕೊಟ್ಟರೆ ಎಲ್ಲಾ ಗೊತ್ತಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಸಿರು ಕಾರ್ಡ್ನ್ನು ಮುಂದುವರಿಸುವ ಸರ್ಕಾರದ ತೀರ್ಮಾನವನ್ನು ನಾನು ಸ್ವಾಗತ ಮಾಡುತ್ತೇನೆ. ನಮ್ಮ ಸರ್ಕಾರ ಮಾಡಿದ ಈ ಒಂದು ಕಾರ್ಯಕ್ರಮವನ್ನಾದರೂ ತಾವು ಒಪ್ಪಿದ್ದೀರಿ. ದಯಮಾಡಿ ಮಾನ್ಯ ಮೊಯ್ಲಿಯವರನ್ನು ಕೇಳಿಕೊಳ್ಳುವುದು ಏನೆಂದರೆ ನಾಳಿದ್ದು ಯುಗಾದಿ ಬರುತ್ತಿದೆ. ಇವತ್ತು ಬೆಳಿಗ್ಗೆ ಕೂಡಾ ಈ ವಿಚಾರವನ್ನು ನಾನು ಪ್ರಸ್ತಾಪ ಮಾಡಿದೆ ಇವತ್ತು ಸಕ್ಕರೆ, ಗೋಧಿ, ಎಣ್ಣೆ ಕೊಡುತ್ತೀರಿ ಎಂದು ಜನರು ನಿರೀಕ್ಷಣೆ ಮಾಡುತ್ತಿದ್ದಾರೆ. ಮಾನ್ಯ ನರಸಿಂಹಮೂರ್ತಿಯವರು ಮೊದಲನೇ ಸದನಕ್ಕೆ ಬಂದು ಈಗಲೇ ಬನ್ನಿ ಇನ್ಸ್ಪೆಕ್ಷನ್ಗೆ ಹೋಗೋಣ ಎಂದು ಕೆಳಗೆ ಇಳಿದೇಬಿಟ್ಟರು.

ಅವತ್ತು ಹೋದವರು ಇನ್ನೂ ನದನಕ್ಕೆ ಬಂದಿಲ್ಲ, ಏಕೆ ಬಂದಿಲ್ಲ ಎಂದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ನರಸಿಂಹಮೂರ್ತಿಯವರು ಏನು ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಇವತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆ ಬಹಳ ಹದಗೆಟ್ಟಿದೆ. ಅದನ್ನು ಸರಿಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ಬಹಳ ವಿನಯಪೂರ್ವಕವಾಗಿ ಒತ್ತಾಯ ಮಾಡುತ್ತಿದ್ದೇನೆ.

5-00 ಪಿ.ಎಂ.

ಈ ರಾಜ್ಯಪಾಲರ ಭಾಷಣದ ಬಗ್ಗೆ ಖಂಡಿಸಬೇಕಾಗಿರತಕ್ಕಂಥಹ ವಿಚಾರವೇನೆಂದರೆ ಅದರಲ್ಲಿ ಬರಗಾರದ ಬಗ್ಗೆ ಪ್ರಸ್ತಾಪ ಇಲ್ಲದೇ ಇರತಕ್ಕಂಥಾದ್ದು ಇಡೀ ರಾಜ್ಯದಲ್ಲಿ ಪ್ರತಿಯೊಬ್ಬರೂ ಹೇಳುತ್ತಿದ್ದಾರೆ. ರಾಜ್ಯ ಸರಕಾರವೂ ಒಪ್ಪಿಕೊಂಡಿದೆ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಬೀದರ್, ಗುಲ್ಬರ್ಗ, ಬೆಳಗಾಂ - ಈ 5 ಜಿಲ್ಲೆಗಳನ್ನು ಬಿಟ್ಟರೆ ಬಾಕಿ ಎಲ್ಲಾ ಜಿಲ್ಲೆಗಳಲ್ಲೂ ಬರಗಾರ ಇದೆ ಎಂದು ಸರಕಾರ ಘೋಷಣೆ ಮಾಡಿದ್ದರೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊನೇ ಪಕ್ಷ ಒಂದು ವಾಕ್ಯವನ್ನಾದರೂ ಸೇರಿಸಿದ್ದಿದ್ದರೆ ಈ ರಾಜ್ಯದ ಜನ ಬಹಳ ಪಾವನರಾಗುತ್ತಿದ್ದರೇನೋ ಎಂದು ನನಗನ್ನಿಸುತ್ತದೆ.

ಮಾನ್ಯ ಖರ್ಗೆಯವರು ಇಲ್ಲಿ ಇಲ್ಲ. ನಾನು ಅವತ್ತು ಅವರಿಗೆ ಅನೇಕ ಸಲಹೆಗಳನ್ನು ಕೊಟ್ಟೆ, ಬೇರೆ ರಾಜ್ಯಗಳಿಂದ ಮೇವನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ, ಏನಾದರೂ ಮಾಡಿ ಕುಡಿಯುವ ನೀರಿಗೆ ಆದ್ಯತೆ ಕೊಡಿ ಎಂದು ನಾನು ಹೇಳಿದ್ದೆ. ನನ್ನ ಕ್ಷೇತ್ರವಾದ ಕನಕಪುರದಲ್ಲಿ ಇವತ್ತು ಬಂದ್ ಮಾಡಿದ್ದಾರೆ. ಅಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದು ಬಂದ್ ಮಾಡಿದ್ದಾರೆ. ಇದು ಅನೇಕ ಪಟ್ಟಣಗಳಲ್ಲಿ ಇದೆ. ಕೆಲವು ಶಾಸಕರೂ ಮೂಕ ಪ್ರೇಕ್ಷಕರಾಗಿ ಕುಳಿತುಕೊಳ್ಳತಕ್ಕಂತಹ ಸ್ಥಿತಿ ಬಂದಿದೆ, ಇದರ ಕಡೆ ಸರಕಾರ ಗಮನಹರಿಸಬೇಕೆಂದು ಒತ್ತಾಯ ಮಾಡುತ್ತೇನೆ. ರಾಜ್ಯಪಾರಲ ಭಾಷಣದಲ್ಲಿ ಈ ರಾಜ್ಯದ ದುಡಿಯುವ ವರ್ಗವಾದ ಕಾರ್ಮಿಕರ ಬಗ್ಗೆ ಒಂದು ಮಾತನ್ನು ಹೇಳಿಲ್ಲ. ಕಾರ್ಮಿಕ ಇಲಾಖೆಯ ಮಂತ್ರಿಗಳು ಇದನ್ನು ಗಮನಿಸಿದ್ದಿದ್ದರೆ ಬಹಳ ಚೆನ್ನಾಗಿತ್ತೆಂದು ನನಗನ್ನಿಸುತ್ತದೆ. ಬೆಳಿಗ್ಗೆ ನಾನು ನಿಮಗೆ ಹೇಳಿದೆ. 1986ರ

ನಂತರ ಕೂಲಿ ಕಾರ್ಮಿಕರ ಕನಿಷ್ಟ ವೇತನವನ್ನು ನಿರ್ಧರಿಸಿರಲಿಲ್ಲ. 1986ರ ನಂತರ ಅಂದರೆ 83ರಿಂದ 86ರ 3 ವರ್ಷಗಳ ಕಾಲದಲ್ಲಿ ನಮ್ಮ ಸರಕಾರದಲ್ಲಿ ಕಾರ್ಮಿಕ ಮಂತ್ರಿಗಳಾಗಿದ್ದ ಎಸ್.ಕೆ. ಕಾಂತಾರವರು ಅವರು ಈ ಸದನದಲ್ಲಿ ಇಲ್ಲ, ಆದರೂ ಇದರ ಕೀರ್ತಿ ಅವರಿಗೆ ಹೋಗಬೇಕಾಗುತ್ತದೆ.

ದುಡಿಯುವ ವರ್ಗದ ಜನರ ಪರವಾಗಿ ಕನಿಷ್ಟ ವೇತನವನ್ನು ಅವರು ಫಿಕ್ಸ್ ಮಾಡಿಸಿದರು. ನಿಮ್ಮ ಸರಕಾರ ಬಂದ ಮೇಲೆ ಒಂದಕ್ಕೂ ಮಾಡಿಲ್ಲ. ಮಾನ್ಯ ನಾಡಗೌಡರು ಹೊಸದಾಗಿ ಬಂದಿದ್ದಾರೆ, ಅವರಿಗೆ ನಾನು ಶುಭಾಷಯಗಳನ್ನು ಕೋರುತ್ತೇನೆ. ಆದರೆ ಹಿರಿಯ ಸಚಿವರಾಗಿದ್ದಂತಹ ಕೆ.ಹೆಚ್. ಪಾಟೀಲರೂ ಈ ಇಲಾಖೆ ಮಂತ್ರಿಗಳಾಗಿದ್ದರು. ಕೇಂದ್ರ ಸರಕಾರದಲ್ಲಿ ಕಾರ್ಮಿಕ ಮಂತ್ರಿಗಳಾಗಿದ್ದಂತಹ ವೀರೇಂದ್ರಪಾಟೀಲರೇ ಈ ಇಲಾಖೆಯನ್ನು ನೋಡಿಕೊಂಡಿದ್ದರು. ಆದರೂ ಕೂಡ ಇದನ್ನು ಏಕೆ ಫಿಕ್ಸ್ ಮಾಡಲಿಲ್ಲ. ಕಾರ್ಮಿಕ ವರ್ಗದ ಶೋಷಣೆ ಹೆಚ್ಚು ಆಗುತ್ತಿದೆ.

ಶ್ರೀ ಎ.ಎಸ್. ನಾಡಗೌಡ : ಹಿರಿಯ ಸದಸ್ಯರಾದ ಸಿಂಧ್ಯರವರೆ, ನಮ್ಮ ಸರಕಾರ ಬಂದ ಮೇಲೆ 13 ಎಂಪ್ಲಾಯ್‌ಮೆಂಟ್ಸ್ ಅನ್ನು ಈಗಾಗಲೇ ಇದರ ಪರ್‌ವ್ಯೂ ಒಳಗೆ ತಂದಿದೆ. ಇದು ಮೊದಲು ಇರಲಿಲ್ಲ. ಮತ್ತು ಈ ಆಗ್ರಿಕಲ್ಚರ್ ಲೇಬರ್ಸ್‌ಗೆ ಕೇವಲ ರೂ. 12-50 ಪೈಸೆ ಇದ್ದುದನ್ನು ರೂ. 16-10 ಪೈಸೆಗೆ ಈಗಾಗಲೇ ನಿಗದಿಪಡಿಸಿದ್ದೇವೆ. ಇನ್ನು ಒಂದು ಅಥವಾ ಎರಡು ವಾರದೊಳಗೆ ನೋಟಿಫಿಕೇಷನ್ ಆಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇನ್ನೂ ಒಂದು ವಾರವಾಗಲೀ ನೋಟಿಫಿಕೇಷನ್ ಇನ್ನೂ ಬಂದಿಲ್ಲವಲ್ಲ ಬಂದ ಮೇಲೆ ನೋಡೋಣ. ಒಂದು ವಾರದಲ್ಲಿ ಏನೇನು ರಾಜಕೀಯ ಬೆಳವಣಿಗೆಗಳಾಗುತ್ತವೋ ನಾವು ನೀವು ಎಲ್ಲೆಲ್ಲಿ ಇರುತ್ತೇವೆಯೋ ಯಾರಿಗೆ ಗೊತ್ತು. ನಾನು ಬಹಳ ಪ್ರವಾಸ ಮಾಡುತ್ತಿದ್ದೇನೆ, ನಾನು ಬಹಳ ಆರೋಗ್ಯವಾಗಿದ್ದೇನೆ, ನಾನು ಬಹಳ ಆನಂದವಾಗಿದ್ದೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಹಾಗಾದರೆ ರಾಜ್ಯದ ಜನತೆಯ ಪಾಡೇನು? ಇವತ್ತು ನೀವು ಮುಖ್ಯ ಮಂತ್ರಿಗಳಾಗಿದ್ದೀರಿ, ಜನತೆಯ ಆರೋಗ್ಯವನ್ನು ನೋಡಿ. ಇವತ್ತು ಕುಡಿಯುವ ನೀರು ಇಲ್ಲ, ದನಕರುಗಳಿಗೆ ಮೇವು ಇಲ್ಲ, ಬರಗಾಲ ಪರಿಸ್ಥಿತಿ ಇದೆ ಎಲ್ಲಾ ಕಡೆ ಬಾಜಾಬಜಂತ್ರಿಗಳನ್ನು ಹೊಡಿಸಿಕೊಂಡು, ಮೆರವಣಿಗೆಗಳನ್ನು ಮಾಡಿಕೊಳ್ಳುತ್ತಿದ್ದೀರಿ, ಅದನ್ನು ಸ್ವಲ್ಪ ನಿಲ್ಲಿಸಿ. ಎಷ್ಟು ಇಲಾಖೆಗಳಲ್ಲಿ ಇಲಾಖಾ ವೈಸ್ ರಿವ್ಯೂ ಮಾಡಿದ್ದಾರೇ ಪಂಚಸೂತ್ರಗಳ ಕಾರ್ಯಕ್ರಮವನ್ನು ತರತಕ್ಕಂಥ ಮುಖ್ಯ ಮಂತ್ರಿಗಳು ಯಾವ್ಯಾವ ಇಲಾಖೆಯನ್ನು ಮಾಡಿದ್ದಾರೆ? ನನಗೆ ಗೊತ್ತಿರುವ ಹಾಗೆ, ಒಂದು ಇಲಾಖೆಯನ್ನೂ ಸಹ ಅವರು ರಿವ್ಯೂ ಮಾಡಿಲ್ಲ? ಎಸ್.ಸಿ., ಎಸ್.ಟಿ. ಕಮಿಟಿ ಎಂದು ಇದೆ ಸುಮಾರು ನೂರು ಕೋಟಿ ರೂಪಾಯಿ ಖರ್ಚು ಮಾಡತಕ್ಕಂತಹ ಟ್ರೈಬಲ್ ಫೆಲ್‌ಫೇರ್ ಪ್ರೋಗ್ರಾಂ ಏನು ಇದೆ, ಆ ಹೈ ಪವರ್ ಕಮಿಟಿಗೆ ಮಾನ್ಯ ಮುಖ್ಯ ಮಂತ್ರಿಗಳೇ ಅಧ್ಯಕ್ಷರಾಗಿರುತ್ತಾರೆ. ಹಿಂದೆ ಮಾನ್ಯ ವೀರೇಂದ್ರ ಪಾಟೀಲರು ಒಂದು ವರ್ಷ ಮುಖ್ಯಮಂತ್ರಿಗಳಾಗಿದ್ದರು.

ಅವರು ಒಂದು ದಿವಸ ಕೂಡ ರೆವ್ಯೂ ಮಾಡಲಿಲ್ಲ. ರೆವ್ಯೂ ಮಾಡಬೇಕೆಂದು ಇದ್ದರು ಅಷ್ಟರಲ್ಲಿ ಅಧಿಕಾರ ಕಳೆದುಕೊಂಡರು. ಇವರು ಬಂದು ಇಷ್ಟು ದಿವಸವಾದರೂ ಕೂಡ ಒಂದು ಇಲಾಖೆಯ ಮಂತ್ರಿಗಳನ್ನು ಕರೆಸಿ, ಆ ಇಲಾಖೆಯ ಉನ್ನತ ಅಧಿಕಾರಿಗಳನ್ನು ಕರೆಸಿ ನಿಮಗೆ ಯಾವ್ಯಾವ ಇಲಾಖೆಯ ಕೋ ಆರ್ಡಿನೇಷನ್ ಆಗಬೇಕು, ಏನು ಮಾಡಬೇಕು ಎಂಬ ಬಗ್ಗೆ ಒಂದು ದಿನವೂ ಕೇಳಿಲ್ಲ. ಇವತ್ತು ಪಬ್ಲಿಕ್ ಅಂಡರ್ ಟೇಕಿಂಗ್ಸ್‌ಲ್ಲಿ ಎಲ್ಲಾ ಕಡೆಗಳಲ್ಲೂ ಸೋರಿಹೋಗುತ್ತಿದೆ. ಅದನ್ನು ನಿಲ್ಲಿಸಲಿಕ್ಕೆ ಪ್ರಯತ್ನ ಮಾಡಿ ಎಂದರೆ ಖಾಸಗಿಯವರಿಗೆ ಕೊಡುತ್ತೇವೆಂದು ಹೇಳುತ್ತಾರೆ.

ಏಕೆ ಖಾಸಗಿಯವರಿಗೆ ಕೊಡುತ್ತೀರೆಂದು ಕೇಳಿದರೆ ನಾವು ಭಾಷಣದಲ್ಲಿ ಹೇಳಿದ್ದೇವೆ, ನಿಮ್ಮ ಒಪ್ಪಿಗೆ ಇದೆ ಎಂದು ಹೇಳುತ್ತಾರೆ. 1989ನೇ ಇಸವಿಯಲ್ಲಿ ರಾಜ್ಯದ ಜನತೆಗೆ ಏನೊಂದು ಆಶ್ವಾಸನೆಯನ್ನು ಕೊಟ್ಟಿದ್ದರೋ ಅದೊಂದನ್ನೂ ಈಡೇರಿಸಲಿಕ್ಕೆ ಆಗಿಲ್ಲ.

ವೀರೇಂದ್ರ ಪಾಟೀಲರು ಮಾಡಲಿಕ್ಕೆ ಹೊರಟರು ಅಡ್ಡಗಾಲು ಬಂತು. ಅದು ಏತಕ್ಕೆ ಬಂತು ಎನ್ನುವ ವಿಶ್ಲೇಷಣೆ ನನಗೆ ಸಂಬಂಧವಿಲ್ಲ. ಇವತ್ತು ನೀವು ಮಾಡಲಿಕ್ಕೆ ಹೊರಟರೆ ನಿಮಗೂ ಅಡ್ಡಗಾಲು ಬರುವುದಕ್ಕೆ ಪ್ರಾರಂಭವಾಗಿದೆ. ನಾನು ಅದಕ್ಕೋಸ್ಕರ ಹೇಳುತ್ತಿದ್ದೇನೆ, ನಿಮ್ಮ 16 ತಿಂಗಳುಗಳ ಆಡಳಿತದ ಅವಧಿ ಏನಿದೆ ಅದು ಭದ್ರವಾದ ಸರ್ಕಾರವಿಲ್ಲದ ಆಡಳಿತವಾಗಿದೆ. ಮಂತ್ರಿಗಳಿಗೆ ನನ್ನ ಪೋರ್ಟ್‌ಪೋಲಿಯೋ ಯಾವಾಗ ಚೇಂಜ್ ಆಗುತ್ತದೆನ್ನುನ ಭಯ. ಶಾಸಕರಿಗೆ ನಾನು ಯಾವಾಗ ಮಂತ್ರಿಯಾಗುತ್ತೇನೆ ಎನ್ನುವ ಆಸೆ. ಮುಖಂಡರುಗಳಿಗೆ ನಾನು ಯಾವಾಗ ಮುಖ್ಯಮಂತ್ರಿಯಾಗುತ್ತೇನೆನ್ನುನ ಆಸೇ. ಇದೆಲ್ಲಕ್ಕಿಂತ ಮುಖ್ಯವಾಗಿ.....

ಶ್ರೀ ಎಂ. ಮಹಾದೇವ್ : ನಿಮ್ಮ ಕಾಲದಲ್ಲಿ ನಿಮಗೇನು ಆಸೆ ಇರಲಿಲ್ಲವೆ? ನಮಗಂತೂ ಆಸೆಯಿಲ್ಲ. ನಾವು ಶಾಸಕರಾಗಿ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಮಾಡಿಕೊಂಡು ಹೋಗುವ ಆಸೆಯಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಮಾನ್ಯ ರಾಜ್ಯಪಾಲರನ್ನು ಈ ಸದನದ ಮೂಲಕ ಮತ್ತು ತಮ್ಮ ಮೂಲಕ ಒತ್ತಾಯ ಮಾಡುತ್ತಿದ್ದೇನೆ, ಕಾಂಗ್ರೆಸ್ ಪಕ್ಷ 1989ರಲ್ಲಿ ಚುನಾವಣೆ ನಡೆದಾಗ ರಾಜ್ಯದ ಜನತೆಗೆ ಏನು ಆಶ್ವಾಸನೆಯನ್ನು ಕೊಟ್ಟಿತ್ತು ಆ ಆಶ್ವಾಸನೆಗಳನ್ನು ಈಡೇರಿಸಲಿಕ್ಕೆ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ, ಒಂದನ್ನೂ ಸಹ ಕಾರ್ಯಗತ ಮಾಡಿಲ್ಲ. ಇವತ್ತು ಆಡಳಿತ ಸಂಪೂರ್ಣವಾಗಿ ಕುಸಿದು ಹೋಗಿದೆ. ನಮ್ಮ ಕಾಲದಲ್ಲಿ ಭ್ರಷ್ಟಾಚಾರ ಇರಲಿಲ್ಲವೆಂದು ನಾನು ಹೇಳುವುದಿಲ್ಲ, ಭ್ರಷ್ಟಾಚಾರ ಹಿಂದೆಯೂ ಸಹ ಇತ್ತು ಎಲ್ಲಾ ಹಂತದಲ್ಲಿಯೂ ಇತ್ತು. ಆದರೆ ಬೀದಿ ಮಾತಾಗಿರಲಿಲ್ಲ. ನಾನು ಮಾನ್ಯ ರಾಜ್ಯಪಾಲರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಲೋಕಸಭೆಯ ಚುನಾವಣೆ ಈಗ ನಡೆಯುತ್ತಿದೆ. ಆದ್ದರಿಂದ ಈ ವಿಧಾನಸಭೆಯನ್ನು ವಿಸರ್ಜನೆ ಮಾಡಿ ಮರು ಚುನಾವಣೆಯನ್ನು ಮಾಡಿ. 16 ತಿಂಗಳುಗಳ ಕಾಲ ಈ ಸರ್ಕಾರ ಬೋಗಸ್ ಕಾರ್ಯಕ್ರಮಗಳನ್ನು ಹಾಕಿ ಸಂಪೂರ್ಣವಾಗಿ ರಾಜ್ಯದ ಜನತೆಯನ್ನು ಹತಾಶರನ್ನಾಗಿ ಮಾಡಿದ್ದಾರೆ. ಈ ವಿಧಾನಸಭೆಯನ್ನು ವಿಸರ್ಜನೆ ಮಾಡಬೇಕೆಂದು ಮತ್ತೊಮ್ಮೆ ಒತ್ತಾಯಮಾಡಿ, ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯವನ್ನು ಏನು ಮಂಡಿಸಿದ್ದಾರೆ, ಅದನ್ನು ನಾನು ವಿರೋಧ ಮಾಡಿ ನನಗೆ ಮಾತನಾಡಲಿಕ್ಕೆ ಸಾಕಷ್ಟು ಸಮಯಾಕಾಶವನ್ನು ತಾವು ಕೊಟ್ಟಿದ್ದೀರಿ, ಅದಕ್ಕಾಗಿ ತಮಗೆ ವಂದನೆಯನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮಗಿಸುತ್ತೇನೆ.

ಶ್ರೀ ಎಂ. ರಾಮಪ್ಪ : ಮಾನ್ಯ ಸಿಂಧ್ಯಾರವರು ಈ ರೀತಿಯಲ್ಲಿ ಮಾತನಾಡಿ ಸದನವನ್ನು ತಪ್ಪು ದಾರಿಯಲ್ಲಿ ತೆಗೆದುಕೊಂಡು ಹೋಗಲಿಕ್ಕೆ ಹೇಳಿದರೆ ಹೇಗೆ? ಸಿಂಧ್ಯಾರವರು ಸೀನಿಯರ್ ಲೀಡರ್ ಇದ್ದಾರೆ. ಅವರು ಈ ತರಹ ಮಾಡುತ್ತಾರೆಂದರೆ ಹೇಗೆ? ಮಂತ್ರಿಮಂಡಲ ರಚನೆ ಮಾಡುವುದಕ್ಕೆ ಹೋಗಿ ಜನತಾದಳದವರು ಮನೆಗೆ ಹೋಗಿದ್ದಾರೆ. ಕರ್ನಾಟಕ ರಾಜ್ಯದಲ್ಲಿಯೂ ಹಾಗೆ ಅಧಿಕಾರ ಕಳೆದುಕೊಳ್ಳುತ್ತಾರೆಂದು ಅವರ ಮನಸ್ಸಿನಲ್ಲಿರಬಹುದು. ನಾವು ಆ ರೀತಿ ಅಧಿಕಾರ ಕಳೆದುಕೊಳ್ಳುವುದಿಲ್ಲ. ನಿಮಗೆ ನಾವು ಪಾಠ ಕಲಿಸುತ್ತೇವೆ. ನೀವು ಅರ್ಥಮಾಡಿಕೊಂದು ವ್ಯವಹಾರ ಮಾಡಬೇಕೆಂದು ಹೇಳುತ್ತೇನೆ. ಮಾನ್ಯ ಸಿಂಧ್ಯಾರವರು ನಮ್ಮ ಕಡೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾವು ಪಾಠ ಕಲಿಯುತ್ತೇವೆ ಆಗಬಹುದಾ?

ಉಪಾಧ್ಯಕ್ಷರು : ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಭಾಷಣ ಮಾಡಿದ ಮೇಲೆ ಪ್ರೊಫೆಸರ್ ನಂಜುಂಡಸ್ವಾಮಿಯವರು ಮಾತನಾಡುತ್ತಾರೆ ಅವರದು ಕಡೆಯ ಭಾಷಣವೆಂದು ಇಲ್ಲಿ ಬರೆದಿದ್ದಾರೆ.

ಪ್ರೊ॥ ಎಂ.ಡಿ. ನಂಜುಂಡಸ್ವಾಮಿ: ನಾಳೆ ತಿದ್ದುಪಡಿ ಮಂಡನೆ ಮತ್ತು ಮತಕ್ಕೆ ಹಾಕುವುದು ಇದೆಯೆಲ್ಲ ಅಷ್ಟು ಮಾತ್ರ ಮಾತನಾಡುತ್ತೇನೆ. ಇವತ್ತು ನಾನು ಮಾತನಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ.....

ಶ್ರೀ ಎ.ಎಂ. ಹಿಂಡಸಗೇರಿ: ಮಾನ್ಯ ಉಪಾಧ್ಯಕ್ಷಿಣಿಯವರೆ, ಆ ಕಡೆಯವರು ಐದಾರು ಜನ ಮಾತನಾಡಿದರು. ನಮ್ಮ ಕಡೆಗೆ ಒಬ್ಬೊಬ್ಬರಿಗೆ ಮಾತನಾಡಲಿಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು: ಹಾಗಾದರೆ ತಾವೇ ಮಾತನಾಡಿ.

ಶ್ರೀ ಎ.ಎಂ. ಹಿಂಡಸಗೇರಿ: (ಹುಬ್ಬಳ್ಳಿ) ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಇವತ್ತಿನ ದಿವಸ ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತ ಮಾಡುತ್ತಾ, ನನ್ನ ಮಾತನ್ನು ಮುಂದುವರಿಸುತ್ತಿದ್ದೇನೆ. ಮೊಟ್ಟಮೊದಲನೆಯದಾಗಿ,ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮತ್ತು ಸರ್ಕಾರ ಬರುವುದಕ್ಕೆ ಮುಂಚೆ ಈ ರಾಜ್ಯದ ಪರಿಸ್ಥಿತಿ ಏನಿತ್ತು ಎನ್ನುವುದು ರಾಜ್ಯದ ಎಲ್ಲಾ ಜನರಿಗೆ ಗುರುತು ಇದೆ. ಹೋದವರ್ಷ ಕೆಲವು ತಿಂಗಳ ಹಿಂದೆ ಇಡೀ ದೇಶದಲ್ಲಿ ಮತ್ತು ವಿಶೇಷವಾಗಿ ನಮ್ಮ ರಾಜ್ಯದಲ್ಲಿ ಲಾ ಅಂಡ್ ಆರ್ಡರ್ ಸಿಚುಯೇಷನ್ ಕೆಟ್ಟುಹೋಗಿ ವಿಷದ ಬೀಜವನ್ನು ಬಿತ್ತಿ ನಮ್ಮ ರಾಜ್ಯದ ಒಂದು ಹೆಸರು ಏನಿತ್ತು, ಈ ರಾಜ್ಯ ಶಾಂತಿಯನ್ನು ಕಾಪಾಡುವ ರಾಜ್ಯ ಹಾಗೂ ಎಲ್ಲ ಜಾತಿಯವರು ಪ್ರೇಮದಿಂದ ಇರುವ ರಾಜ್ಯವೆಂದು ಇದ್ದ ಹೆಸರನ್ನು ತೆಗೆದು ಹಾಕಿ, ಇಡೀ ರಾಷ್ಟ್ರದ ಶಾಂತಿಯನ್ನು ಕುಂಠಿತವನ್ನಾಗಿ ಮಾಡಿ ಈ ರಾಜ್ಯಕ್ಕೆ ಒಂದು ಕೆಟ್ಟ ಹೆಸರು ತರುವ ಪ್ರಯತ್ನ ಆಯಿತು. ಆದರೆ ನಮ್ಮ ಸರ್ಕಾರ ಬಂದನಂತರ ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲೆಲ್ಲಿ ಈ ದಂಗೆಯಾಗಿತ್ತು, ಅಲ್ಲಿ ಹೋಗಿ ಸರಿಪಡಿಸಿ ಶಾಂತಿಯನ್ನು ನಿರ್ಮಾಣ ಮಾಡಿದ್ದಾರೆ. ಅದಕ್ಕೋಸ್ಕರ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಈ ರಾಜ್ಯಪಾಲರ ಭಾಷಣದಲ್ಲಿ ಪ್ರಪ್ರಥಮ ಮಹತ್ವವನ್ನು ಅವರು ಎರಡನೇ ಅಂಶದಲ್ಲಿ ಹೇಳಿದ್ದಾರೆ. ಮುಂಬರುವ ಕಾಲದಲ್ಲಿ ಪೋಲೀಸ್ ಡಿಪಾರ್ಟ್‌ಮೆಂಟ್‌ನ್ನು ಸರಿಪಡಿಸುವ ಮತ್ತು ಚುರುಕುಗೊಳಿಸುವ ಮಹತ್ವವನ್ನು ಹೇಳಿದ್ದಾರೆ. ಅದಕ್ಕೋಸ್ಕರ ನಾನು ಈ ಸಂದರ್ಭದಲ್ಲಿ ಒಂದು ಸಲಹೆಯನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಈ ಪೋಲೀಸ್ ಡಿಪಾರ್ಟಮೆಂಟ್‌ನ್ನು ಸರಿಪಡಿಸುವ ಕಾಲದಲ್ಲಿ ಸಾಕಷ್ಟು ಪೋಲೀಸ್ ಸ್ಟೇಷನ್‌ಗಳನ್ನು ಮಾಡಬೇಕು. ಎಲ್ಲೆಲ್ಲಿ ಸೆನ್ಸಿಟಿವ್ ಪ್ಲೇಸಸ್ ಇವೆ, ಅಲ್ಲಿ ಅಲ್ಪಸಂಖ್ಯಾತರು ಹಾಗೂ ಹಿಂದುಳಿದ ವರ್ಗಗಳ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ನಾನು ಸಲಹೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಮತ್ತು ದೊಡ್ಡ ದೊಡ್ಡ ಅಧಿಕಾರಿಗಳನ್ನು ನೇಮಕ ಮಾಡುವುದಕ್ಕಿಂತ ಈ ಕಾನ್‌ಸ್ಟೇಬಲ್‌ಗಳನ್ನು ಹೆಚ್ಚಿಗೆ ನೇಮಕ ಮಾಡಬೇಕೆಂದು ನಾನು ಸಲಹೆ ಕೊಡಬಯಸುತ್ತೇನೆ. ಹಾಗೂ ಈ ರಾಜ್ಯಪಾಲರ ಭಾಷಣದಲ್ಲಿ ಈ ಮಹತ್ವವನ್ನು ಹೇಳಿದ್ದು ನೋಡಿ ನನಗೆ ಬಹಳ ಸಂತೋಷವಾಗುತ್ತದೆ. ಕೆಲವು ದಿವಸಗಳಿಂದ ಸಮಾಜಘಾತುಕ ಶಕ್ತಿಗಳು ಪುನಃ ಮೆರವಣಿಗೆಗಳನ್ನು ತೆಗೆಯುವುದು, ಯಾತ್ರೆ ತೆಗೆಯುವುದು ಮುಂತಾದ ಕೆಲವು ಕೆಟ್ಟ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರ ಬಗ್ಗೆ ನಾನು ಸರ್ಕಾರದ ಗಮನ ಸೆಳೆಯುತ್ತಾ, ಇದರ ಬಗ್ಗೆ ಬಹಳಷ್ಟು ಲಕ್ಷ್ಯ ಕೊಡಬೇಕು ಮತ್ತು ಇಂತಹವರು ಯಾರು ಇದ್ದಾರೆ,

ಹಿಂದೆ ಅವರ ಬಗ್ಗೆ ರೆಕಾರ್ಡ್ ಏನಿದೆ, ಅಂತಹವರ ಮೇಲೆ ಕಣ್ಣು ಇಟ್ಟು ಸರಿಯಾದ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಮತ್ತು ಇನ್ನೊಂದು ಸೂಕ್ತ ಹಾಗೂ ಯೋಗ್ಯ ಸಲಹೆ ಎಂದರೆ, ಇನ್ನು ಸುಮಾರು ಮೂರು ವರ್ಷಗಳ ಕಾಲ ಈ ಧಾರ್ಮಿಕ ಪ್ರೊಸೆಷನ್‌ಗಳನ್ನು ಬ್ಯಾನ್ ಮಾಡಬೇಕು. ಏಕೆಂದರೆ, ಇಡೀ ರಾಷ್ಟ್ರ ಮತ್ತು ರಾಜ್ಯದಲ್ಲಿ ಮಾತ್ರವಲ್ಲ ಓಣಿ ಓಣಿಗಳಲ್ಲಿ ಇವತ್ತು ಭಯದ ವಾತಾವರಣ ಉದ್ಭವವಾಗುತ್ತಿದೆ. ಧರ್ಮದ ಆಧಾರದ ಮೇಲೆ ಕೆಟ್ಟ ಕೆಲಸ ಮಾಡಲಿಕ್ಕೆ ಕೆಲವು ಶಕ್ತಿಗಳು ನಮ್ಮ ದೇಶ ಹಳ್ಳಿಗಳಲ್ಲಿ ಪ್ರಯತ್ನ ಮಾಡುತ್ತಿದ್ದಾರೆ.

ಅದಕ್ಕೋಸ್ಕರ ಕೆಲವು ವರ್ಷ ಇದನ್ನು ಬಂದ್ ಮಾಡಿದರೆ ಒಳ್ಳೆಯದಾಗುತ್ತದೆ ಎಂದು ನಾನು ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ಹಾಗೆಯೇ ರಾಜ್ಯಪಾಲರ ಭಾಷಣದಲ್ಲಿ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡಬೇಕು, ಪ್ರಾಥಮಿಕ ಶಾಲೆಗಳಿಗೆ ಮಹತ್ವ ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ನಾನು ಹೇಳಬೇಕೆಂದರೆ, ಜಿಲ್ಲಾ ಪರಿಷತ್ತುಗಳು ಬಂದನಂತರ ಇಡೀ ರಾಜ್ಯದಲ್ಲಿ ವಿಶೇಷವಾಗಿ ಅರ್ಬನ್ ಏರಿಯಾದಲ್ಲಿ ಜಿಲ್ಲಾಪರಿಷತ್ತಿನ ಶಿಕ್ಷಣ ಖಾತೆಯಲ್ಲಿ ಸ್ವಲ್ಪ ಹಣ ಸಹ ಖರ್ಚುಮಾಡಿಲ್ಲ. ಈ ಹಿಂದೆ ಸ್ಕೂಲ್ ಬಿಲ್ಡಿಂಗ್ಸ್ ರಿಪೇರಿ ಆಗುತ್ತಿತ್ತು ಮತ್ತು ಸುಣ್ಣಬಣ್ಣ ಹಚ್ಚುತ್ತಿದ್ದರು. ಜಿಲ್ಲಾ ಪರಿಷತ್ತುಗಳು ಬಂದನಂತರ ಶಹರದಲ್ಲಿ, ಅರ್ಬನ್ ಏರಿಯಾದಲ್ಲಿ ಹಣ ಖರ್ಚು ಆಗಿಲ್ಲ, ರಿಪೇರಿ ಮುಂತಾದ್ದು ಆಗಿಲ್ಲ. ಅದಕ್ಕೋಸ್ಕರ ಈಗ ಸರ್ಕಾರ ಇದರ ಬಗ್ಗೆ ವಿಶೇಷ ಗಮನಕೊಟ್ಟು ಸ್ಕೂಲ್ ಬಿಲ್ಡಿಂಗ್ಸ್‌ಗೆ, ರೂಮುಗಳನ್ನು ಕಟ್ಟಲಿಕ್ಕೆ ಮುಂದೆ ಬಂದಿದೆ. ಆದ್ದರಿಂದ ಅರ್ಬನ್ ಏರಿಯಾದಲ್ಲಿ ಈ ಕೆಲಸ ಹೆಚ್ಚು ಮಹತ್ವ ಕೊಟ್ಟು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ರಾಜ್ಯಪಾಲರ ಭಾಷಣದ 19ನೇ ಪ್ಯಾರಾದಲ್ಲಿ ಮೈನಾರಿಟೀಸ್ ಬಗ್ಗೆ ಹೇಳಿದ್ದಾರೆ. ಗೂಡ್‌ವಾಲ ಕಮೂಷನ್ ವರದಿಯನ್ನೂ ನಾವು ಕನ್‌ಸಿಡರ್ ಮಾಡುತ್ತೇವೆ ಎನ್ನುವ ಭರವಸೆಯನ್ನು ಕೊಟ್ಟಿದ್ದಾರೆ. ಈ ಕಮೀಷನ್‌ನ್ನು 1984ರಲ್ಲಿ ಸರ್ಕಾರದವರು ರಚನೆ ಮಾಡಿದರು. ಈ ಗೂಡ್‌ವಾಲ ಕಮೀಷನ್ 4 ವರ್ಷಗಳ ಕಾಲ ಇಡೀ ರಾಜ್ಯದಲ್ಲಿ ತಿರುಗಾಡಿ, ಸರ್ವೆ ಮಾಡಿ, ಪರಿಶೀಲನೆ ಮಾಡಿ, ಒಂದು ವರದಿಯನ್ನು ಕೊಟ್ಟಿದ್ದಾರೆ. ನಾನು 5 ವರ್ಷಗಳ ಹಿಂದೆ ಆ ಕಡೆ ಕುಳಿತಿದ್ದಾಗ, ಈ ಕಮೀಷನ್ ಬಗ್ಗೆ ಕೇಳಿದಾಗ, ಮಾಜಿ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು, ಈ ಕಮೀಷನ್ ಅನ್ನು ಕಾಯಿದೆ ರೀತಿ ರಚನೆ ಮಾಡಿಲ್ಲ, ಅದಕ್ಕೋಸ್ಕರ ಅದನ್ನು ಒಪ್ಪುವುದಿಲ್ಲವೆಂದು ಹೇಳಿದರು. ಆದರೆ, ನಮ್ಮ ಸರ್ಕಾರ ಗೂಡ್‌ವಾಲ ಕಮೀಷನ್, ಈ ಮೈನಾರಿಟಿ ಕಮೀಷನ್ ರಿಪೋರ್ಟ್‌ನ್ನು ಒಪ್ಪುತ್ತೇವೆ. ಕನ್‌ಸಿಡರ್ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿದ್ದಾರೆ. ಅದಕ್ಕೋಸ್ಕರ ಈ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಕನ್‌ಸಿಡರ್ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ, ಬರೀ ಕನ್‌ಸಿಡರ್ ಮಾಡುವ ಹಂತದಲ್ಲಿ, ಇರಬಾರದು, ಪರಿಶೀಲನೆ ಮಾಡಿ, ಅದಷ್ಟು ತೀವ್ರವಾಗಿ, ಒಂದು ಟೈಮ್ ನಿಗದಿ ಮಾಡಿ, ಒಪ್ಪಬೇಕು.

ಈ ಮೈನಾರಿಟಿ ಕಮೀಷನ್ ರೀಪೋರ್ಟ್‌ನ್ನು ಆದಷ್ಟು ಶೀಘ್ರವಾಗಿ ಒಪ್ಪಿ ಕಾರ್ಯರೂಪಕ್ಕೆ ತರಬೇಕೆಂದು ಒತ್ತಾಯಪೂರ್ವಕವಾಗಿ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಕಮೀಷನ್ ವರದಿಯನ್ನೂ ಕನ್‌ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ, ಇದರಲ್ಲಿ ಮೈನಾರಿಟೀಸನ್ನು ಕೂಡಿಸಬಾರದು. ಈಗಾಗಲೇ ಹಿರಿಯ ಸದಸ್ಯರಾದ ಖಮರುಲ್ ಇಸ್ಲಾಂರವರು ಹೇಳಿದ್ದಾರೆ. ಕೇರಳ ಪ್ಯಾಟ್ರನ್ ರೀತಿಯಲ್ಲಿ ಮೈನಾರಿಟೀಸ್‌ಗೆ ರಿಸರ್ವೇಷನ್ ಮಾಡಬೇಕೆಂದು ಹೇಳುತ್ತೇನೆ.

ಹಿಂದೆ ನಮ್ಮ ರಾಜ್ಯದಲ್ಲಿ ಅನೇಕ ಊರು ಊರುಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಗಲಭೆಗಳಾಗಿ, ಪೋಲೀಸ್ ತನಿಖೆ ನಡೆಯುತ್ತಿದೆ. ಪೋಲೀಸರು ಅತ್ಯಾಚಾರದ ಬಗ್ಗೆ ಥೀಸಿಸ್ ಸರಿಯಾಗಿ ಬುಕ್ ಮಾಡಿದ್ದಾರೆ. ಕೆಲವು ಕೇಸುಗಳನ್ನು ಸಿ.ಒ.ಡಿ.ಗೆ ಕೊಟ್ಟಿದ್ದಾರೆ. ದಾವಣಗೆರೆಯಲ್ಲಾಗಲೀ, ಹುಬ್ಬಳ್ಳಿಯಲ್ಲಾಗಲೀ, ಮತ್ತು ಇನ್ನಿತರ ರಾಜ್ಯದ ಭಾಗಗಳಲ್ಲಾಗಲೀ, ಸಿಒಡಿ ತನಿಖೆ ಸಿ.ಒ.ಡಿ. ತನಿಖೆಯಿಂದ ಬಹುಶಃ ಮುಗ್ಧ ಜನರ ಮೇಲೆ, ಇನ್ನೊಸೆಂಟ್ ಪೀಪಲ್ ಮೇಲೆ ದಬ್ಬಾಳಿಕೆ ನಡೆದಿದೆ. ಸೋಷಿಯಲ್ ವರ್ಕರ್ ಯಾರಿದ್ದಾರೆ, ಒಂದು ಪಕ್ಷದ ಕಾರ್ಯಕರ್ತರು ಯಾರಿದ್ದಾರೆ ಅವರನ್ನು 2,3,4 ತಿಂಗಳ ನಂತರ ಬುಕ್ ಮಾಡಿ, 302ರಲ್ಲಿ ಸಿಕ್ಕಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರ ಸಲುವಾಗಿ ಸರ್ಕಾರದವರು ಗಮನ ಕೊಟ್ಟು, ಇನ್ನೊಸೆಂಟ್ ಜನರ ಮೇಲೆ ಕೇಸ್ ಹಾಕಬಾರದೆಂದು ಹೇಳುತ್ತೇನೆ. ಇಂತಹ ಅಧಿಕಾರಿಗಳು ಏನಿದ್ದಾರೆ, ಅವರನ್ನು ಸರಿಯಾಗಿ ನೋಡಿಕೊಳ್ಳಬೇಕು. ಈ ಘಟನೆ ರಾಜ್ಯದಲ್ಲಿ ಅಕಸ್ಮಾತ್ ಆಗಿದೆ, ಯಾರೂ ಉದ್ದೇಶಪೂರ್ವಕವಾಗಿ ಮಾಡಿಲ್ಲ.

ಒಂದು ಪಕ್ಷದವರು ಉದ್ದೇಶಪೂರ್ವಕವಾಗಿ ಮಾಡಿ ಇಡೀ ದೇಶಕ್ಕೆ ಇಡೀ ರಾಜ್ಯಕ್ಕೆ ಕುಂದನ್ನು ಕಂದಿದ್ದಾರೆ. ಬಡವರ ಮೇಲೆ ಹಿಂದುಳಿದವರ ಮೇಲೆ ಅಲ್ಪಸಂಖ್ಯಾತರ ಮೇಲೆ ಅತ್ಯಾಚಾರವಾಗಿದೆ. ಅದಕ್ಕೋಸ್ಕರ ಪೋಲೀಸ್ ಡಿಪಾರ್ಟ್‌ಮೆಂಟ್‌ನವರು ಏನು ಕೆಲಸ ಮಾಡುತ್ತಿದ್ದಾರೆ ಇದನ್ನು ಮಾಡಬಾರದೆಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ ಅನಂತರ ರಾಜ್ಯಪಾಲರ ಭಾಷಣದಲ್ಲಿ ಹೌಸಿಂಗ್ ಪ್ರಾಬ್ಲಮ್ ಬಗ್ಗೆ ಹೇಳಿದ್ದಾರೆ. ಒಂದು ಸಲಹೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಹೌಸಿಂಗ್ ಪ್ರಾಬ್ಲಮ್ ಬಹಳವಾಗಿ ಪ್ರತಿ ವರ್ಷ ಎಲ್ಲೆ ನೋಡಿದರೂ ಸ್ಲಂ ಕ್ರಿಯೇಟ್ ಆಗುತ್ತಿದೆ. ಡೆವಲಪ್‌ಮೆಂಟ್ ಅಥಾರಿಟಿಯವರಾಗಲೀ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರಾಗಲೀ ಅಥವಾ ಕಾರ್ಪೋರೇಷನ್‌ನವರಾಗಲೀ ಬಡವರಿಗೆ ಹಿಂದುಳಿದವರಿಗೆ ಕೂಲಿಕಾರರಿಗೆ ಸೈಟ್‌ಗಳನ್ನು ಸರಿಯಾಗಿ ಹಂಚುತ್ತಿಲ್ಲ. ಅದಕ್ಕೋಸ್ಕರ ನಮ್ಮ ಸರ್ಕಾರದವರು ಏನು ಆಶ್ವಾಸನೆ ಕೊಟ್ಟಿದ್ದಾರೆ ಅದಷ್ಟು ಶೀಘ್ರವಾಗಿ ಬಡವರಿಗೆ ಹಿಂದುಳಿದವರಿಗೆ ನಿವೇಶನ ಹಂಚಬೇಕು ಅದರಲ್ಲಿಯೂ ಬೀಡಿ ಕಾರ್ಮಿಕರಿಗೆ ವಿಶೇಷ ಯೋಜನೆ ಮಾಡಿ ಅವರಿಗೆ ಹೌಸಿಂಗ್ ಅಥವಾ ನೀವೇಶನವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ಅದರಲ್ಲಿಯೂ ಮೈನಾರಿಟೀಸ್‌ಗೆ ಮತ್ತು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಬೇಕೆಂದು ಈ ಸಂದರ್ಭದಲ್ಲಿ ಸಲಹೆ ಕೊಡುವುದಕ್ಕೆ ಇಚ್ಛಿಪಡುತ್ತೇನೆ.

ಏತಕ್ಕೆಂದರೆ ಬಡವರಿಗೆ ಅಲ್ಪಸಂಖ್ಯಾತರಿಗೆ ಹಿಂದುಳಿದವರಿಗೆ ನಿವೇಶನಗಳು ಮತ್ತು ಮನೆಗಳು ಸಿಗುವುದಿಲ್ಲ. ಏನೇನೋ ನೆವ ಹೇಳಿ ಹೌಸಿಂಗ್ ಡಿಪಾರ್ಟ್‌ಮೆಂಟ್‌ನವರು ಎಲ್.ಐ.ಜಿ. ಮತ್ತು ಎಂ.ಐ.ಜಿ. ಮನೆಗಳನ್ನು ಅನೇಕ ದೊಡ್ಡ ದೊಡ್ಡ ಶ್ರೀಮಂತರಿಗೆ ಮತ್ತು ಮಿಡಲ್‌ಕ್ಲಾಸ್ ಜನರಿಗೆ ಕೊಡುತ್ತಾರೆ ಹೌಸಿಂಗ್‌ಲೋನ್ ಪ್ರೊವೈಡ್ ಮಾಡುತ್ತಾರೆ. ಬಡವರಿಗೆ ಸಣ್ಣ ಸಣ್ಣ ಮನೆ ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಆದುದರಿಂದ ಪ್ರತ್ಯೇಕವಾಗಿ ಮೈನಾರಿಟೀಸ್ ಅಂಡ್ ಬ್ಯಾಕ್ವರ್ಡ್‌ಕ್ಲಾಸಸ್ ಹೌಸಿಂಗ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಮಾಡಬೇಕೆಂದು ಸರಕಾರದ ಗಮನಕ್ಕೆ ಸರುವುದಕ್ಕೆ ಇಷ್ಟಪಡುತ್ತೇನೆ. ಕೊನೆಯದಾಗಿ ನಮ್ಮ ರಾಜ್ಯದಲ್ಲಿ 20 ಜಿಲ್ಲೆಗಳು ಇವೆ. ಇದರಲ್ಲಿ ಉತ್ತರ ಭಾಗದಲ್ಲಿ ಜಿಲ್ಲೆಗಳು ಬರುತ್ತಿದೆ ಬಾಂಬೆ - ಕರ್ನಾಟಕ ಹೈದ್ರಾಬಾದ್ - ಕರ್ನಾಟಕ ಬಳ್ಳಾರಿ ಮತ್ತು ಮಂಗಳೂರು ಇವು ಮದ್ರಾಸ್ ಪ್ರಾಂತ್ಯದಲ್ಲಿದ್ದ ಜಿಲ್ಲೆಗಳು. ನಮ್ಮ ರಾಜ್ಯದಲ್ಲಿ 4 ಕೋಟಿ ಜನಸಂಖ್ಯೆ 2 ಕೋಟಿಗಿಂತ ಹೆಚ್ಚು ಜನ ಉತ್ತರ ಭಾಗದಲ್ಲಿದ್ದಾರೆ. ಮಹಾರಾಷ್ಟ್ರದಲ್ಲಿ ಅಸೆಂಬ್ಲಿ ಅಧಿವೇಶನವನ್ನು ವರ್ಷಕ್ಕೆ ಒಂದು ಅಥವಾ ಎರಡು

ಸಲ ನಾಗಪುರದಲ್ಲಿ ನಡೆಸುತ್ತಾರೆ. ಹುಬ್ಬಳ್ಳಿ ಧಾರವಾಡ ಕಾರ್ಪೋರೇಷನ್ ಏರಿಯಾದ ಶಹರು ಬೆಂಗಳೂರನ್ನು ಬಿಟ್ಟರೆ ರಾಜ್ಯದಲ್ಲಿ ಎರಡನೆಯ ದೊಡ್ಡ ಶಹರ್ ಆಗಿದೆ ಕಾರ್ಪೋರೇಷನ್ ಆಗಿದೆ. ಆದುದರಿಂದ ವರ್ಷಕ್ಕೊಮ್ಮೆ ಅಧಿವೇಶನವನ್ನು ಅಲ್ಲಿ ಮಾಡುವುದಕ್ಕೆ ಸರಕಾರ ಪ್ರಯತ್ನ ಮಾಡಬೇಕು. ಇದರಿಂದ ಉತ್ತರ ಭಾಗದ ಜನರಿಗೆ ಸಹಾಯವಾಗುತ್ತದೆ. ನಮ್ಮ ರಾಜ್ಯದಲ್ಲಿ ನೀರಿನ ಅಭಾವ ವಿಪರೀತವಾಗಿದೆ. ನಮ್ಮ ಹುಬ್ಬಳ್ಳಿ - ಧಾರವಾಡ ಮಹಾನಗರಕ್ಕೆ 15 ದಿವಸದ ಹಿಂದೆ ಸರಕಾರ 100 ಬೋರ್‌ವೆಲ್ ಮಂಜೂರು ಮಾಡಿದೆ. ಅದು ಸಾಲದು ಅದಕ್ಕೋಸ್ಕರ ಇನ್ನೂ ಒಂದು ನೂರು ಬೋರ್‌ವೇಲ್‌ಗಳನ್ನು ಸ್ಯಾಂಕ್ಷನ್ ಮಾಡಿ ನೀರಿನ ಬವಣೆ ಏನು ಎದ್ದಿದೆ ಅದನ್ನು ಮಾಡುವುದಕ್ಕೆ ತಾವು ಸಹಾಯ ಮಾಡಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು : ಈಗ ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರಿಂದ ಹೇಳಿಕೆ

ಯುಗಾದಿ ಹಬ್ಬದ ಪ್ರಯುಕ್ತ ಬೆಂಗಳೂರು ನಗರದಲ್ಲಿ ಪಡಿತರ ಚೀಟಿಯೊಂದಕ್ಕೆ 3 ಕೆ.ಜಿ. ಗೋಧಿಯನ್ನು ವಿಶೇಷ ಹೆಚ್ಚುವರಿ ನೀಡುವುದು.

+ ಶ್ರೀ ಟಿ.ಎ. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೇ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಆಳುವ ಮತ್ತು ಪ್ರತಿಪಕ್ಷದ ಸನ್ಮಾನ್ಯ ಸದಸ್ಯರುಗಳು ಬರಲಿರುವ ಯುಗಾದಿ ಹಬ್ಬದ ಹಿನ್ನೆಲೆಯಲ್ಲಿ ರಾಜ್ಯದ ಜನತೆಗೆ ವಿಶೇಷವಾಗಿ ಪಾಮೋಲೀನ್ ಎಣ್ಣೆ ಸಕ್ಕರೆ ಮತ್ತಿತರ ಆಹಾರ ವಸ್ತುಗಳನ್ನು ಸರಕಾರ ಏತಕ್ಕೆ ನೀಡಿಲ್ಲ ಎಂದು ಪ್ರಸ್ತಾಪಿಸಿದ್ದಾರೆ. ಈ ಒಂದು ಹೇಳಿಕೆಯನ್ನು ಮಾಡುವುದಕ್ಕೆ ಮುಂಚಿತವಾಗಿ ಹಿನ್ನೆಲೆಯನ್ನು ಪ್ರಸ್ತಾಪ ಮಾಡಿದರೆ ಮಾನ್ಯ ಸದಸ್ಯರಿಗೆ ನಿಜವಾದ ನಿಲುವು ಏನಿದೆ ಎಂದು ಅರ್ಥವಾಗುತ್ತದೆ. ಯುಗಾದಿ ಹಬ್ಬಕ್ಕಾಗಿ ಹೆಚ್ಚಾಗಿ ತಾಳೆಎಣ್ಣೆ ಮತ್ತು ಸಕ್ಕರೆ ಬಿಡುಗಡೆ ಮಾಡಬೇಕೆಂದು ನಾವು ಕೇಂದ್ರ ಸರಕಾರಕ್ಕೆ ಕೇಳಿದ್ದೆವು. ಪಾಮೋಲಿನ್ ಎಣ್ಣೆ ಪಾಶ್ಚಿಮಾತ್ಯ ದೇಶಗಳಿಂದ ಬರಬೇಕಾಗಿದೆ ಸಾಕಾದಷ್ಟು ಪ್ರಯತ್ನ ಮಾಡುತ್ತಿದ್ದೇವೆ ಬಂದು ಕೂಡಲೇ ಎಣ್ಣೆಯನ್ನು ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರು.

ಸಕ್ಕರೆ ಕೊಡತಕ್ಕ ವಿಚಾರದಲ್ಲಿ ನಿಮ್ಮ ರಾಜ್ಯಕ್ಕೆ ಇದುವರೆಗೆ ಎಷ್ಟು ಕೊಟ್ಟಿದ್ದೇವೆ ಅದಕ್ಕಿಂತ ಹೆಚ್ಚು ಬಿಡುಗಡೆ ಮಾಡುವುದಕ್ಕೆ ಆಗುವುದಿಲ್ಲ. ಮುಂದೆ ಅದನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದರು. ಮಾನ್ಯ ಸದಸ್ಯರು ಒಂದು ಕೂಗನ್ನು ಗಮನಿಸಿ ತಮ್ಮ ವಾದಕ್ಕೆ ಪ್ರತಿಪಾದನೆಗೆ ಬೆಲೆ ಕೊಡಬೇಕೆಂದು ನಮ್ಮ ಅಧಿಕಾರಿಗಳನ್ನು ಕರೆಸಿ ನಿನ್ನೆಯಿಂದ ಇದುವರೆಗೆ ಮಾನ್ಯ ಸದಸ್ಯರ ಮಾತಿಗೆ ಬೆಲೆ ಕೊಡಬೇಕು ಯುಗಾದಿ ಹಬ್ಬಕ್ಕಾಗಿ ರಾಜ್ಯ ಜನತೆಗೆ ಕಿಂಚತ್ತಾದರೂ ಉಡುಗೊರೆ ಕೊಡಬೇಕೆಂದು ಹೇಳಿ....

ಶ್ರೀ ವಾಟಾಳ್ ನಾಗರಾಜ್: ಉಡುಗೊರೆ ಎಂದರೆ ಉಚಿವಾಗಿ ಕೊಡುತ್ತಿದ್ದೀರಾ?

ಶ್ರೀ ಟಿ.ಎನ್. ನರಸಿಂಹಮೂರ್ತಿ: ಉಚಿತವಾಗಿ ಅಲ್ಲ ವಿಶೇಷವಾದ ರೀತಿಯಲ್ಲಿ ಕೊಡುತ್ತಿದ್ದೇವೆ. ಆದುದರಿಂದ ಮಾನ್ಯ ಸಭಾಧ್ಯಕ್ಷರೇ ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಓದುತ್ತೇನೆ.

ಮಾರ್ಚಿ 17 ರಂದು ಬರುವ ಯುಗಾದಿ ಹಬ್ಬದ ಪ್ರಯುಕ್ತ ಬೆಂಗಳೂರು ನಗರದಲ್ಲಿ ಪಡಿತರ ಚೀಟಿಯೊಂದಕ್ಕೆ 3 ಕೆ.ಜಿ. ಗೋಧಿಯನ್ನು ವಿಶೇಷ ಹೆಚ್ಚುವರಿಯಾಗಿ